# ಕರ್ನಾಟಕ ವಿಕಾಸ

# KARNATAKA VIKAS

ಅಕ್ಟೋಬರ್ October 2012







ದಸರಾ ಹಬ್ಬದ
ಶುಭಾಶಯಗಳು



ಸನ್ಮಾನ್ಯ ಶ್ರೀ ಕೆ.ಎಸ್. ಈಶ್ವರಪ್ಪ
ಉಪ ಮುಖ್ಯಮಂತ್ರಿಗಳು,
ಕರ್ನಾಟಕ ಸರ್ಕಾರ ಇವರು
**MGNREGA ಯ South Zone Regional Review Meeting**
ಉದ್ಘಾಟಿಸುತ್ತಿರುವುದು. ಈ ಸಂದರ್ಭದಲ್ಲಿ
ಗ್ರಾ.ಅ. ಮತ್ತು ಪಂ.ರಾಜ್ ಇಲಾಖೆಯ
ಕಾರ್ಯದರ್ಶಿ ಡಾ. ಇ.ವಿ. ರಮಣರೆಡ್ಡಿ
ರವರು ಉಪಸ್ಥಿತರಿದ್ದರು.

ಸನ್ಮಾನ್ಯ ಶ್ರೀ ಕೆ.ಎಸ್. ಈಶ್ವರಪ್ಪ
ಉಪ ಮುಖ್ಯಮಂತ್ರಿಗಳು
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್
ಇಲಾಖೆಯ ಅಧಿಕಾರಿಗಳೊಂದಿಗೆ ಪ್ರಗತಿ
ಪರಿಶೀಲನೆ ಸಭೆ ನಡೆಸಿದರು. ಈ
ಸಂದರ್ಭದಲ್ಲಿ ಶ್ರೀ ಸಂಜೀವ್‌ಕುಮಾರ್,
ಪ್ರಧಾನ ಕಾರ್ಯದರ್ಶಿಗಳು
ಗ್ರಾ.ಅ. ಮತ್ತು ಪಂ.ರಾಜ್
ಇಲಾಖೆ ಇವರು ಉಪಸ್ಥಿತರಿದ್ದರು.





**MGNREGA ಯ South Zone Regional Review Meeting**
ಸಭೆಯಲ್ಲಿ ಪಾಲ್ಗೊಂಡಿರುವ
ಇಲಾಖೆಯ ಅಧಿಕಾರಿಗಳು

ಕರ್ನಾಟಕ ವಿಕಾಸ
KARNATAKA VIKAS
ಅಕ್ಟೋಬರ್ October 2012
ಸಂಪುಟ VOLUME 53
ಸಂಚಿಕೆ ISSUE 11

# ಈ ಸಂಚಿಕೆಯೊಳಗೆ


| | | |
|---|---|---|
| 5 | ಪರಿಚಯ | – ಡಾ॥ ಇ.ವಿ. ರಮಣ ರೆಡ್ಡಿ |
| | | – ಶ್ರೀಮತಿ ರಶ್ಮಿ ವಿ. |
| 7 | ಸಚಿವಾಲಯದಿಂದ ಸಂದೇಶ | – ಡಾ॥ ಇ.ವಿ. ರಮಣ ರೆಡ್ಡಿ |
| 9 | ಬದುಕುವ ಮಾತು | – ಡಾ. ಪಾಟೀಲ ಪುಟ್ಟಪ್ಪ |
| 10 | ಕವಿಯ(ಕ್ಷ) ಪ್ರಶ್ನೆಗಳು | – ಡಾ. ಎಸ್.ಬಿ. ರವಿಕುಮಾರ್ |
| 11 | ಕಾವ್ಯ ವಿಕಾಸ | – ಸುಶೋಭಿತ ಪಿ.ಎಸ್. |
| 12 | ಚಿಂತನೆ | – ಪ್ರೊ. ಎ.ಎಚ್. ಮಾಸಾಪತಿ |
| 17 | ಲೇಖನಗಳು | – ಹೆಚ್.ಜಿ. ಶಿವಾನಂದಮೂರ್ತಿ |
| | | ಡಾ. ಟಿ. ರಮೇಶ್ |
| | | – ವಾಮನರಾವ್ |
| | | – ಡಾ. ಎಸ್.ಬಿ. ರವಿಕುಮಾರ್ |
| 31 | ಸುತ್ತೋಲೆಗಳು | |




ಪ್ರಕಾಶಕರು
ಶ್ರೀ ಪಿ. ಕುಮಾರ್
ನಿರ್ದೇಶಕರು (ಪಂ.ರಾಜ್)
ಹಾಗೂ ಸರ್ಕಾರದ ಪದನಿಮಿತ್ತ
ಉಪಕಾರ್ಯದರ್ಶಿಗಳು

ಪ್ರಧಾನ ಸಂಪಾದಕರು
ಶ್ರೀ ಬೂವನಹಳ್ಳಿ ನಾಗರಾಜ್
ನಿರ್ದೇಶಕರು ಸುವರ್ಣ ಗ್ರಾಮೋದಯ
ಹಾಗೂ ಸರ್ಕಾರದ ಪದನಿಮಿತ್ತ
ಉಪಕಾರ್ಯದರ್ಶಿಗಳು

ಸಂಪಾದಕರು
ಶ್ರೀ ವೈ. ಮಹಾಂಕಾಳಪ್ಪ

ಸಹಾಯಕ ಸಂಪಾದಕರು
ಡಾ॥ ಎಂ.ಎಸ್. ಮಂಜುನಾಥ್
ಶ್ರೀ ನಾಗರಾಜ. ಬಿ. ವಾಗಾ

ವಾರ್ಷಿಕ ಚಂದಾ :
ವ್ಯಕ್ತಿಗಳಿಗೆ ರೂ. 50/–
ಸಂಸ್ಥೆಗಳಿಗೆ ರೂ. 60/–
ಬಿಡಿ ಪ್ರತಿ ರೂ. 5/–
ಚಂದಾ ಹಣವನ್ನು ಮನಿಯಾರ್ಡರ್ ಮೂಲಕ ನಿಮ್ಮ ಅಂಚೆ ವಿಳಾಸದೊಂದಿಗೆ ನಮ್ಮ ಕಚೇರಿ ವಿಳಾಸಕ್ಕೆ ತಲುಪಿಸಬಹುದು.

ಕಚೇರಿ ವಿಳಾಸ
ಮುಖ್ಯ ಸಂಪಾದಕರು, "ಕರ್ನಾಟಕ ವಿಕಾಸ"
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
ನಂ. 309, 3ನೇ ಮಹಡಿ, ಗೇಟ್ ನಂ. 1,
ಬಹುಮಹಡಿಗಳ ಕಟ್ಟಡ, ಡಾ. ಅಂಬೇಡ್ಕರ್ ವೀಧಿ,
ಬೆಂಗಳೂರು – 560 001.
ದೂರವಾಣಿ : (080) 22353857
www.rdpr.kar.nic.in
email:karnatakavikasa@ymail.com

ವಿಶೇಷ ಸೂಚನೆ
ಕರ್ನಾಟಕ ವಿಕಾಸದಲ್ಲಿ ಪ್ರಕಟಿಸುವ ಸರ್ಕಾರಿ ಆದೇಶ, ಸುತ್ತೋಲೆಗಳು ಅಧಿಕೃತವಾದವುಗಳಾಗಿದ್ದು ಎಲ್ಲಾ ಪಂಚಾಯತ್ ರಾಜ್ ಸಂಸ್ಥೆಗಳು ಅನುಷ್ಠಾನಕ್ಕೆ ತರಬೇಕು.

ಲೇಖನಗಳಲ್ಲಿರುವ ಅಭಿಪ್ರಾಯಗಳು ಲೇಖಕರದ್ದೇ ಆಗಿರುತ್ತದೆ ಹೊರತು ಸರ್ಕಾರದ ಅಭಿಪ್ರಾಯವಲ್ಲ.

## ಪತ್ರಿಕೆ ಕುರಿತು ನಿಮ್ಮ ನುಡಿ

ಮಾನ್ಯರೇ,

'ಕರ್ನಾಟಕ ವಿಕಾಸ' ಆಗಸ್ಟ್-ಸೆಪ್ಟೆಂಬರ್ ತಿಂಗಳ ಮಾಸ ಪತ್ರಿಕೆಯಲ್ಲಿ ಪ್ರಕಟವಾದ ಗ್ರಾಮೀಣ ಪರಿಸರವನ್ನು ಮೇಲ್ದರ್ಜೇಗೇರಿಸುವುದು ಹಾಗೂ ಸುವರ್ಣ ಗ್ರಾಮೋದಯ ಯೋಜನೆ ಅಂಕಣದಲ್ಲಿ ಯೋಜನೆಯ ಬಗ್ಗೆ ನವಿರಾಗಿ ತಿಳಿಸಿದ್ದೀರಿ. ಒಂದು ಗ್ರಾಮದ ಉನ್ನತಿ ಕೇವಲ ಅಧಿಕಾರಿಗಳಿಂದಾಗಲಿ, ಸರ್ಕಾರದಿಂದಾಗಲೀ ಮುಂಬರುವುದು ಅಸಾಧ್ಯವೇ ಸರಿ, ಹಾಗಾಗಿ ಆಯಾ ಗ್ರಾಮಗಳಲ್ಲೆ ಗ್ರಾಮೀಣಾಭಿವೃದ್ಧಿಗಾಗಿ ಆಸಕ್ತಿಯಿರುವ ಯುವಕ/ಯುವತಿಯರಿಗಾಗಿ ಒಂದು ಅವಕಾಶವನ್ನು ನೀಡಬಹುದು. ಗ್ರಾಮದ ಅರಿವಿನ ಜೊತೆಗೆ ತಿಳುವಳಿಕೆಯಿದ್ದರೆ ಕಡಿಮೆ ಖರ್ಚಿನಲ್ಲಿ ಉತ್ತಮ ಮಟ್ಟದ ಕಾರ್ಯವೈಖರಿಗಳು ಆಗಬಹುದು. ಆದರೆ ಈ ಆಯಾಮಕ್ಕೆ ನಿಮ್ಮ ಅಪ್ಯಾಯಮಾನವಾದ ಪ್ರೋತ್ಸಾಹ ಬೇಕು. ಧನ್ಯವಾದಗಳು.

– **ಸುಮಿತ್ರ ಎಸ್. (ಪಿ.ಡಿ.ಓ.) D/o. ಸೋಮಣ್ಣ,**
ಕುರುಬೂರು, ಟಿ. ನರಸೀಪುರ ತಾಲ್ಲೂಕು, ಮೈಸೂರು ಜಿಲ್ಲೆ.




'ಕರ್ನಾಟಕ ವಿಕಾಸ' ಆಗಸ್ಟ್-ಸೆಪ್ಟೆಂಬರ್ ಮಾಹೆಯ ಸಂಯುಕ್ತ ಮಾಸ ಪತ್ರಿಕೆಯ ಮುಖಪುಟವು ಆಕರ್ಷಕವಾಗಿ ಮುದ್ರಣಗೊಂಡಿದೆ. ಮಾನ್ಯ ಶ್ರೀ ಕೆ.ಎಸ್. ಈಶ್ವರಪ್ಪ, ಉಪ ಮುಖ್ಯಮಂತ್ರಿಗಳು, ಪ್ರಧಾನ ಕಾರ್ಯದರ್ಶಿಗಳು, ಕಾರ್ಯದರ್ಶಿಗಳು ಮತ್ತು ನಿರ್ದೇಶಕರು ಸುವರ್ಣ ಗ್ರಾಮೋದಯ ಯೋಜನೆಯ ಕುರಿತು ಗ್ರಾಮಿಣ ಜನರಿಗೆ ಸರಳವಾಗಿ ಅರ್ಥವಾಗುವ ರೀತಿಯಲ್ಲಿ ವಿವರಿಸಿದ್ದಾರೆ. ಯೋಜನೆಯ ಮಹತ್ವವನ್ನು ಅರಿತ ಜನರು ಅದರ ಸದುಪಯೋಗ ಪಡೆದುಕೊಳ್ಳುವಲ್ಲಿ ಸಂದೇಹವಿಲ್ಲ ಎಂದು ಭಾವಿಸಿದ್ದೇನೆ.

– **ರವಿಚಂದ್ರನ್,** ಪ್ರಥಮ ದರ್ಜೆ ಸಹಾಯಕರು, ರೇಷ್ಮೆ ಇಲಾಖೆ,
ಅತ್ತಿಬೆಲೆ, ಆನೇಕಲ್ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ.

'ಕರ್ನಾಟಕ ವಿಕಾಸ' ಮಾಸ ಪತ್ರಿಕೆಯು ಗ್ರಾಮೀಣ ಜನತೆಯ ಅಚ್ಚುಮೆಚ್ಚಿನ ಪತ್ರಿಕೆಯಾಗಿದೆ. ಆಗಸ್ಟ್-ಸೆಪ್ಟೆಂಬರ್ 2012ರ ಪತ್ರಿಕೆಯು ಸುವರ್ಣ ಗ್ರಾಮೋದಯ ಯೋಜನೆ ಕುರಿತು ಸಮಗ್ರ ಮಾಹಿತಿಯನ್ನು ಹೊತ್ತು ಬಂದಿರುವುದು ಯೋಜನೆ ಬಗ್ಗೆ ತಿಳಿದುಕೊಳ್ಳಲು ತುಂಬಾ ಸಹಕಾರಿಯಾಗಿದೆ. ಇತ್ತೀಚಿನ ದಿನಗಳಲ್ಲಿ ಸರ್ಕಾರದಲ್ಲಿ ರೂಪಿಸಿದ ಯೋಜನೆಯ ಮಾಹಿತಿ ದೊರೆಯುವುದು ದುಸ್ತರವಾಗಿದೆ. ಅಂಥಹದರಲ್ಲಿ ಕರ್ನಾಟಕ ವಿಕಾಸ ಮಾಸ ಪತ್ರಿಕೆಯು ಜನರ ಆಶೋತ್ತರಗಳಿಗೆ ಸ್ಪಂದಿಸುತ್ತಿರುವುದು ಹರ್ಷದಾಯಕ ಸಂಗತಿಯಾಗಿದೆ. ಪತ್ರಿಕೆಯ ಮಿತ್ರ ಮಂಡಳಿಗೆ ಧನ್ಯವಾದಗಳು.

– **ಕೆ. ದುರ್ಗಾ ಪ್ರಸಾದ್ S/o. ಎ. ಲಕ್ಷ್ಮೀದೇವಿ**
ನಂ. 281/22/1, ಗಾಯತ್ರಿ ಲೇ ಔಟ್, ಅರಿಶಿನಕುಂಟೆ ಪೋಸ್ಟ್, ಆದರ್ಶನಗರ,
ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾ. ಜಿಲ್ಲೆ. – 562 123.

'ಗ್ರಾಮಸಭೆ ಮತ್ತು ಗ್ರಾಮೀಣ ಪ್ರಜಾಪ್ರಭುತ್ವ' ಶೀರ್ಷಿಕೆಯೊಂದಿಗೆ ಪ್ರಕಟವಾದ ಪ್ರೊ. ಎ.ಎಚ್. ಮಾಸಪತಿಯವರ ಲೇಖನವು ಉಪಯುಕ್ತವಾಗಿದೆ. ಪತ್ರಿಕೆಯಲ್ಲಿ ಪ್ರಕಟವಾದ 'ಕಾವ್ಯ ವಿಕಾಸ' ಮತ್ತು ಪಾ.ಪು.ರವರ ಬದುಕುವ ಮಾತು ಅಂಕಣಗಳು ಜನರ ಮೆಚ್ಚುಗೆಗೆ ಪಾತ್ರವಾಗಿವೆ. ಅದರಲ್ಲೂ ಪಾ.ಪು.ರವರ ಮಾತು ವಿಚಾರಧಾರೆಗೆ ಮನ ಸೋಲದ ಜನರಿಲ್ಲ. ಒಟ್ಟಾರೆಯಾಗಿ 'ಕರ್ನಾಟಕ ವಿಕಾಸ' ಮಾಸ ಪತ್ರಿಕೆಯು ಗ್ರಾಮೀಣ ಜನತೆಯ ಅವಿಭಾಜ್ಯ ಅಂಗವಾಗಿದೆ ಎಂದು ತಿಳಿಸಲು ಹರ್ಷಿಸುತ್ತೇನೆ.

– **ಕೆ.ಎನ್. ಶ್ರೀನಿವಾಸಪ್ಪ,** ತಿಂಡ್ಲು, ಬೆಂಗಳೂರು.

# ಪರಿಚಯ

ಡಾ. ಇ.ವಿ. ರಮಣ ರೆಡ್ಡಿ, ಭಾ.ಆ.ಸೇ., ಇವರು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಸರ್ಕಾರದ ಕಾರ್ಯದರ್ಶಿಗಳಾಗಿ ದಿನಾಂಕ 24–09–2012 ರಂದು ಅಧಿಕಾರವನ್ನು ವಹಿಸಿಕೊಂಡಿರುತ್ತಾರೆ.



ಡಾ॥ ಇ.ವಿ. ರಮಣ ರೆಡ್ಡಿ, ಭಾ.ಆ.ಸೇ.,
ಸರ್ಕಾರದ ಕಾರ್ಯದರ್ಶಿಗಳು
ಗ್ರಾ. ಮತ್ತು ಪಂ. ರಾಜ್ ಇಲಾಖೆ

ಗ್ರಾಮೀಣ ಪ್ರದೇಶಗಳಲ್ಲಿನ ಬಡ ಜನರ ಬದುಕು, ಬವಣೆಗಳನ್ನು ಅರಿತಿರುವ ಶ್ರೀಯುತರು ಸೃಜನಶೀಲರಾಗಿ ಕಾರ್ಯನಿರ್ವಹಿಸಿ, ಜನರ ಬದುಕು ಹಸನಾಗಿಸುವತ್ತ ತಮ್ಮನ್ನು ಸಂಪೂರ್ಣ ತೊಡಗಿಸಿಕೊಂಡು ದಕ್ಷ ಮತ್ತು ಪ್ರಾಮಾಣಿಕ ಆಡಳಿತಕ್ಕೆ ಹೆಸರಾಗಿದ್ದಾರೆ. ಈ ಹಿಂದೆ ತಮ್ಮ ಅಧಿಕಾರಾವಧಿಯ ವಿವಿಧ ಇಲಾಖೆಗಳಲ್ಲಿ ಸೇವೆ ಸಲ್ಲಿಸಿ ಅಪಾರವಾದ ಅನುಭವವನ್ನು ಹೊಂದಿದವರಾಗಿದ್ದಾರೆ.

ಶ್ರೀಯುತರು ತಮ್ಮ ಆಡಳಿತದುದ್ದಕ್ಕೂ ವಿವಿಧ ಇಲಾಖೆಗಳ ಉನ್ನತ ಅಧಿಕಾರಿಯಾಗಿ ಕ್ರಿಯಾಶೀಲ ಹಾಗೂ ಸ್ಪಂದನಶೀಲ ಆಡಳಿತಕ್ಕೆ ಹೆಸರುವಾಸಿ ಯಾಗಿದ್ದು ಯುವಜನಾ ಸೇವಾ ಮತ್ತು ಕ್ರೀಡಾ ಇಲಾಖೆಯಿಂದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಆಡಳಿತ ಚುಕ್ಕಾಣಿ ಹಿಡಿದಿದ್ದಾರೆ.

ಈ ಸಂದರ್ಭದಲ್ಲಿ ಶ್ರೀಯುತರಿಗೆ "ಕರ್ನಾಟಕ ವಿಕಾಸ"ವು ಸ್ವಾಗತ ಕೋರುತ್ತಾ ಅಭಿನಂದನೆಗಳೊಂದಿಗೆ, ಅವರ ಆಡಳಿತದ ಎಲ್ಲಾ ಕ್ಷೇತ್ರಗಳಲ್ಲೂ ಯಶಸ್ಸು ಹಾಗೂ ಶುಭವಾಗಲಿ ಎಂದು ಹಾರೈಸುತ್ತದೆ.

❑

# ಪರಿಚಯ

ಶ್ರೀಮತಿ ರಶ್ಮಿ ವಿ. ಭಾ.ಆ.ಸೇ., ಇವರು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಕಾರ್ಯದರ್ಶಿಗಳಾಗಿ ದಿನಾಂಕ 07.09.2012 ರಂದು ಅಧಿಕಾರವನ್ನು ವಹಿಸಿಕೊಂಡಿರುತ್ತಾರೆ.



ಶ್ರೀಮತಿ ರಶ್ಮಿ ವಿ. ಭಾ.ಆ.ಸೇ.,
ಸರ್ಕಾರದ ಕಾರ್ಯದರ್ಶಿಗಳು
ಗ್ರಾ. ಮತ್ತು ಪಂ. ರಾಜ್ ಇಲಾಖೆ

ಭಾರತ ಆಡಳಿತ ಸೇವೆಗೆ 1996 ರಲ್ಲಿ ಸೇರ್ಪಡೆಗೊಂಡ ಮಾನ್ಯರು, ಸರ್ಕಾರದ ವಿವಿಧ ಇಲಾಖೆಗಳ ಉನ್ನತ ಹುದ್ದೆಗಳಲ್ಲಿ ಕಾರ್ಯನಿರ್ವಹಿಸಿ ಆಡಳಿತಾನುಭವವನ್ನು ಹೊಂದಿರುವವರಾಗಿದ್ದಾರೆ. ಆಯುಕ್ತರು, ಪದವಿಪೂರ್ವ ಶಿಕ್ಷಣ ಹಾಗೂ ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ಪರೀಕ್ಷಾ ಪ್ರಾಧಿಕಾರ, ಬೆಂಗಳೂರು ಇಲ್ಲಿಂದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಕಾರ್ಯದರ್ಶಿಗಳಾಗಿ ವರ್ಗಾವಣೆಗೊಂಡಿರುತ್ತಾರೆ.

ಗ್ರಾಮೀಣ ಜನರ ಶ್ರೇಯೋಭಿವೃದ್ಧಿಗಾಗಿ ಜನಪರ ಅಭಿವೃದ್ಧಿ ಯೋಜನೆಗಳನ್ನು ಕಾರ್ಯಗತಗೊಳಿಸಿ ಸರ್ಕಾರದ ಸದುದ್ದೇಶವನ್ನು ಹಾಗೂ ಅರ್ಹ ಫಲಾನುಭವಿಗಳಿಗೆ ಯೋಜನೆಯ ಫಲಶೃತಿಗಳನ್ನು ಸಮರ್ಪಕವಾಗಿ ಮುಟ್ಟಿಸಲು ಮತ್ತು ಅವರ ಆರ್ಥಿಕ ಮಟ್ಟವನ್ನು ಹೆಚ್ಚಿಸಲು ಗುರುತರ ಜವಾಬ್ದಾರಿಗಳನ್ನು ಹೊಂದಿರುವ ಸರ್ಕಾರದ ಪ್ರಮುಖ ಇಲಾಖೆಯಾದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಕಾರ್ಯದರ್ಶಿಗಳಾಗಿ ಮಾನ್ಯರು ಸಾರಥ್ಯವಹಿಸಿದ್ದಾರೆ.

ಕರ್ನಾಟಕ ವಿಕಾಸವು ಈ ಸಂದರ್ಭದಲ್ಲಿ ಶ್ರೀಮತಿ ರಶ್ಮಿ ವಿ. ರವರಿಗೆ ಸ್ವಾಗತ ಕೋರುತ್ತಾ ಅಭಿನಂದನೆಗಳೊಂದಿಗೆ ಅವರ ಆಡಳಿತದ ಎಲ್ಲಾ ಕ್ಷೇತ್ರಗಳಲ್ಲೂ ಶುಭವಾಗಲೆಂದು ಹಾರೈಸುತ್ತದೆ.

ಸಚಿವಾಲಯದಿಂದ ಸಂದೇಶ

ಕರ್ನಾಟಕ ಸರ್ಕಾರ ಸಚಿವಾಲಯ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ
ಬಹುಮಹಡಿ ಕಟ್ಟಡ, ಬೆಂಗಳೂರು.



ಡಾ॥ ಇ.ವಿ. ರಮಣ ರೆಡ್ಡಿ, ಭಾ.ಆ.ಸೇ.,
ಸರ್ಕಾರದ ಕಾರ್ಯದರ್ಶಿಗಳು
ಗ್ರಾ. ಮತ್ತು ಪಂ. ರಾಜ್ ಇಲಾಖೆ

## ಜಲ ಸಂಪತ್ತನ್ನು ಸಂರಕ್ಷಿಸೋಣ...

ಮಾನವನ ಅತಿಬುದ್ದಿವಂತಿಕೆಯಿಂದ ಹಾಗೂ ಸ್ವಾರ್ಥ ಚಟುವಟಿಕೆಗಳಿಂದ ಪರಿಸರ ಮಾಲಿನ್ಯ ಹೆಚ್ಚಾಗುತ್ತಿದ್ದು, ಪರಿಸರ ಅಸಮತೋಲನದ ಪರಿಣಾಮವಾಗಿ **"ಜಾಗತೀಕ ತಾಪಮಾನ"** ಹೆಚ್ಚಾಗಿದ್ದು, ನೀರಿನ ಲಭ್ಯತೆಗೆ ತೊಂದರೆಯಾಗುವ ಅಪಾಯಕಾರಿ ಸ್ಥಿತಿ ಬಂದೊದಗಿದೆ. ರಾಜ್ಯದಲ್ಲಿಯೂ ಸಹ ಇತ್ತೀಚಿಗೆ ಬೇಸಿಗೆಯ ಬೇಗೆ ಹೆಚ್ಚಾಗಿದ್ದು, ಹಲವಾರು ಗ್ರಾಮಗಳಲ್ಲಿರುವ ಕೆರೆ-ಕಟ್ಟೆಗಳು ಬತ್ತಿಹೋಗಿರುವುದರಿಂದ ಬರ ದಿನದಿನಕ್ಕೂ ತೀವ್ರಗೊಳ್ಳುತ್ತಿದ್ದು, ಕೆರೆ ಕಟ್ಟೆಗಳ ಅಂತರ್ಜಲ ಸ್ಥಿತಿಯನ್ನು ಹೆಚ್ಚಿಸಲು ನೀರು ಸಂರಕ್ಷಣಾ ಕಾಮಗಾರಿಗಳ ಬಗ್ಗೆ ಹೆಚ್ಚು ಒತ್ತು ಕೊಡುವುದು ಅವಶ್ಯವಾಗಿರುತ್ತದೆ. ಇಲಾಖೆಯು ಅನುಷ್ಠಾನಗೊಳಿಸಬೇಕಾದ ನೀರು ಸರಬರಾಜು ಕಾರ್ಯಕ್ರಮಗಳ ಕುರಿತು ಎಲ್ಲಾ ಜಿಲ್ಲಾ ಪಂಚಾಯತ್‌ಗಳಿಗೆ ಅಗತ್ಯ ನಿರ್ದೇಶನ ನೀಡಲಾಗಿದೆ. ಈಗಾಗಲೇ ಅನುಮೋದನೆ ಗೊಂಡಿರುವ ಗ್ರಾಮೀಣ ನೀರು ಸರಬರಾಜು ಕ್ರಿಯಾ ಯೋಜನೆಯನ್ವಯ ಮುಂದುವರೆದ ಕಾಮಗಾರಿಗಳನ್ನು ಮತ್ತು ಹೊಸ ಕಾಮಗಾರಿಗಳನ್ನು ಚಾಲ್ತಿ ಮಾರ್ಗದರ್ಶನದನ್ವಯ ಜಿಲ್ಲಾ ಪಂಚಾಯತ್ ಹಂತದಲ್ಲಿಯೇ ಕಾಲಮಿತಿಯೊಳಗೆ ಅನುಷ್ಠಾನಗೊಳಿಸಲು ವಿಶೇಷ ಆದ್ಯತೆ ನೀಡತಕ್ಕದ್ದು.

ಗ್ರಾಮೀಣ ಜನತೆಗೆ ಶುದ್ಧ ಕುಡಿಯವ ನೀರನ್ನು ಸಮರ್ಪಕವಾಗಿ ಸರಬರಾಜು ಮಾಡುವುದರೊಂದಿಗೆ ಸ್ವಸ್ಥಸಮಾಜ ನಿರ್ಮಾಣಕ್ಕೆ ಬೇಕಾದ ನೈರ್ಮಲ್ಯದ ಬಗ್ಗೆ ಅರಿವು ಮೂಡಿಸುವ ಗುರುತರ ಜವಾಬ್ದಾರಿಯನ್ನು ಮನಗಂಡು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ವಿಶ್ವ ಬ್ಯಾಂಕ ನೆರವಿನಡಿ "ಜಲನಿರ್ಮಲ ಯೋಜನೆ"ಯನ್ನು ಜಾರಿಗೊಳಿಸಿ ರಾಜ್ಯಾದ್ಯಂತ ಅನುಷ್ಠಾನಗೊಳಿಸಿ ಗ್ರಾಮೀಣ ಪ್ರದೇಶಗಳಲ್ಲಿ ಚಿರಪರಿಚಿತ ಯೋಜನೆಯಾಗಿ ಮುಂದುವರೆದಿದೆ. ಶುದ್ಧವಾದ ಕುಡಿಯುವ ನೀರಿಗೆ ನಮ್ಮ ಮೊದಲ ಆದ್ಯತೆ.

ಕುಡಿಯುವ ನೀರಿನ ಸರಬರಾಜಿಗಾಗಿ ಸರ್ಕಾರವು ಈಗಾಗಲೇ ಹಲವು ಯೋಜನೆಗಳನ್ನು ಹಮ್ಮಿಕೊಂಡಿದೆ. ಬೇಸಿಗೆಯ ದಿನಗಳಲ್ಲಿ ಗ್ರಾಮೀಣ ಜನತೆಗೆ ಶುದ್ಧ ಕುಡಿಯುವ ನೀರು ಸಮರ್ಪಕವಾಗಿ ತಲುಪಿದಾಗಲೇ ಯೋಜನೆಗಳ ಅನುಷ್ಠಾನಕ್ಕೆ ಒಂದು ಅರ್ಥ ಬರುತ್ತದೆ. ಯೋಜನೆಗಳ ಜಾರಿಯಲ್ಲಿ ಎಲ್ಲೂ ಲೋಪವಾಗದಂತೆ ಎಚ್ಚರ ವಹಿಸಬೇಕಾಗಿರುತ್ತದೆ. ಅನಗತ್ಯ ನೀರು ಬಳಕೆಯನ್ನು ತಡೆಯುವುದು ಜಲಮೂಲಗಳನ್ನು ಕಲುಷಿತಗೊಳಿಸದಂತೆ ನೋಡಿಕೊಳ್ಳುವುದು ಹಾಗೂ ಅಂತರ್ಜಲ ಮಟ್ಟವನ್ನು ಕಾಪಾಡಿಕೊಳ್ಳುವಲ್ಲಿ ಸಾರ್ವಜನಿಕರ ಪಾಲು ಅತ್ಯಂತ ಮಹತ್ವದ್ದಾಗಿದೆ. ಎಲ್ಲರೂ ತಮ್ಮ ಜವಾಬ್ದಾರಿಯನ್ನು ಅರಿತು ಅಧಿಕಾರಿ/ಸಿಬ್ಬಂದಿಗಳಿಗೆ ಸಹಕಾರ ನೀಡಿ ಕುಡಿಯುವ ನೀರಿನ ಸಮಸ್ಯೆಯನ್ನು ನಿವಾರಿಸಲು ಜನಸಾಮಾನ್ಯರೂ ಸಹ ಕೈಜೋಡಿಸಬೇಕು.

### ಬರಪರಿಹಾರ ಕಾರ್ಯ ಸಮರ್ಪಕವಾಗಿರಲಿ ...

ರಾಜ್ಯ ಸರ್ಕಾರ ರಾಜ್ಯದ ಬರಪೀಡಿತ ಪ್ರದೇಶಗಳಲ್ಲಿ ಪರಿಹಾರ ಕಾರ್ಯಕ್ಕಾಗಿ ಅನುದಾನ ಬಿಡುಗಡೆಗೊಳಿಸಿ ಸಮಸ್ಯೆ ಪರಿಹರಿಸುವತ್ತ ದಿಟ್ಟ ಹೆಜ್ಜೆಯನ್ನಿಟ್ಟಿದೆ. ಆದ್ದರಿಂದ ಯೋಜನೆಯಲ್ಲಿ ತೊಡಗಿಸಿಕೊಂಡಿರುವ ನಮ್ಮೆಲ್ಲ ಅಧಿಕಾರಿ/ಸಿಬ್ಬಂದಿ ವರ್ಗದವರು ಮತ್ತಷ್ಟು ಕ್ರಿಯಾಶೀಲರಾಗಿ ಯೋಜನೆಯ ಫಲಶ್ರುತಿಗಳು ಗ್ರಾಮೀಣ ಜನತೆಗೆ ಸಮರ್ಪಕವಾಗಿ ತಲುಪಿಸುವಂತಹ ಕಾರ್ಯವನ್ನು ನಿರಂತರವಾಗಿ ಹಮ್ಮಿಕೊಳ್ಳಬೇಕು. ಇಷ್ಟೇ ಅಲ್ಲದೆ ಯೋಜನೆಯ ಬಗ್ಗೆ ಗ್ರಾಮೀಣ ಸಮುದಾಯಕ್ಕೆ ಹೆಚ್ಚಿನ ಪ್ರಮಾಣದಲ್ಲಿ ಪ್ರಚಾರವನ್ನು ನೀಡಿ ಸ್ಥಳೀಯ ಗ್ರಾಮಸ್ಥರು ಯೋಜನೆಯ ಪ್ರತಿ ಹಂತದಲ್ಲಿಯೂ ಸಹ ಸಕ್ರೀಯವಾಗಿ ಭಾಗವಹಿಸಿ ಯೋಜನೆಯ ಅನುಷ್ಠಾನ ಮತ್ತು ಸುಸ್ಥಿರ ಕಾರ್ಯನಿರ್ವಹಣೆಗೆ ಸಹಕಾರಿಯಾಗುವಂತಹ ವಾತಾವರಣವನ್ನು ನಿರ್ಮಿಸಿದಲ್ಲಿ ಮಾತ್ರ ಯೋಜನೆಯ ಸದುದ್ದೇಶಗಳು ಕೈಗೂಡಿ ಕುಡಿಯುವ ನೀರಿನ ಸಮಸ್ಯೆ ನೀಗುತ್ತದೆ.

### ಗುಳೇ ಹೋಗುವುದನ್ನು ತಪ್ಪಿಸೋಣ...

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಒಂದು ಅಭೂತಪೂರ್ವ ಅಧಿನಿಯಮ, 73ನೇ ಸಂವಿದಾನದ ತಿದ್ದುಪಡಿಯಂತೆ ಆರ್ಥಿಕ ವಿಕಾಸ ಹಾಗೂ ಸಾಮಾಜಿಕ ನ್ಯಾಯ ಪಡೆಯುವುದು ಪಂಚಾಯಿತಿಗಳ ಮೂಲಭೂತ ಹಕ್ಕಾಗಿದ್ದು, ಅವುಗಳ ಪಾತ್ರವನ್ನು ಈ ಅಧಿನಿಯಮವು ಮಾನ್ಯತೆ ಮಾಡಿದೆ. ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮದ ಅನುಷ್ಠಾನದಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳನ್ನು ಪ್ರಧಾನ ಕಾರ್ಯಸ್ಥರನ್ನಾಗಿ ಗುರುತಿಸುವುದರಿಂದ ಅಭಿವೃದ್ಧಿ ವಿಕೇಂದ್ರೀಕರಣಗಳ ಬಹಳಷ್ಟು ಅವಕಾಶಕ್ಕೆ ಬಾಗಿಲು ತೆರೆಯುವುದಲ್ಲದೆ ಸ್ಥಳೀಯ ಬದುಕಿನ ಸಮಸ್ಯೆಗಳಿಗೆ ಸ್ಥಳೀಯವಾದ ಪರಿಹಾರವನ್ನು ಕಂಡುಕೊಳ್ಳಲು ಅವಕಾಶ ಮಾಡಿದೆ.

ಗ್ರಾಮೀಣ ಜನರು ಜೀವನ ನಿರ್ವಹಣೆಗಾಗಿ ಉದ್ಯೋಗವನ್ನರಸಿ ಗುಳೇ ಹೋಗುವುದನ್ನು ತಪ್ಪಿಸಿ ಗ್ರಾಮೀಣ ಪ್ರದೇಶಗಳಲ್ಲಿ ಸ್ಥಳೀಯವಾಗಿ ಉದ್ಯೋಗವಕಾಶಗಳನ್ನು ಕಲ್ಪಿಸುವುದರ ಮೂಲಕ ನಿರುದ್ಯೋಗ ಸಮಸ್ಯೆಯನ್ನು ನಿವಾರಿಸಿ, ಜನರ ಆರ್ಥಿಕ ಮಟ್ಟವನ್ನು ಹೆಚ್ಚಿಸುವ ಸಲುವಾಗಿ "ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆ" ಎಂಬ ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಯು ದೇಶದ 200 ಜಿಲ್ಲೆಗಳಲ್ಲಿ 2006ರ ಫೆಬ್ರವರಿ 2ನೇ ತಾರೀಖಿನಿಂದ ಜಾರಿಗೊಳಿಸಲಾಗಿದೆ. ಕೇಂದ್ರ ಸರ್ಕಾರವು ಗ್ರಾಮೀಣ ಕುಟುಂಬಗಳಿಗೆ ಈ ಯೋಜನೆಯಡಿ ಉದ್ಯೋಗವಕಾಶವನ್ನು ಕಲ್ಪಿಸಲು ಇದುವರೆಗೆ ಇದ್ದ 100 ದಿನಗಳ ಕೆಲಸವನ್ನು 150 ದಿನಗಳಿಗೆ ಹೆಚ್ಚಿಸುವುದರ ಜೊತೆಗೆ ಗ್ರಾಮೀಣ ಮೂಲಭೂತ ಸೌಕರ್ಯಗಳಿಗಾಗಿ ಸಾಕಷ್ಟು ಸಂಪನ್ಮೂಲ ಒದಗಿಸಿ, ಗ್ರಾಮೀಣ ಅರ್ಥ ವ್ಯವಸ್ಥೆಯನ್ನು ಬಲಗೊಳಿಸುವತ್ತ ದಿಟ್ಟ ಹೆಜ್ಜೆಯನ್ನಿಟ್ಟಿದೆ. ನಮ್ಮ ಗ್ರಾಮೀಣ ಜನರು ಯೋಜನೆಯ ಸದುಪಯೋಗವನ್ನು ಪಡೆಯುವಂತಾಗಲಿ ಮತ್ತು ನಮ್ಮೆಲ್ಲ ಅಧಿಕಾರಿ/ಸಿಬ್ಬಂದಿ ವರ್ಗದವರು ಈ ನಿಟ್ಟಿನಲ್ಲಿ ಮತ್ತಷ್ಟು ಕಾರ್ಯೋನ್ಮುಖರಾಗಲೆಂದು ಆಶಿಸುತ್ತೇನೆ.

(ಡಾ|| ಇ.ವಿ. ರಮಣ ರೆಡ್ಡಿ)

ಬದುಕುವ ಮಾತು

# ತತ್ತ್ವ ಇಲ್ಲದ ಜೀವನ ಜೀವನವೇ ಅಲ್ಲ



ಡಾ. ಪಾಟೀಲ ಪುಟ್ಟಪ್ಪ

ತತ್ತ್ವ ಒಳ್ಳೆಯದೋ ಕೆಟ್ಟದೋ ಎನ್ನುವುದು ಅದರ ಆಚರಣೆಯಲ್ಲಿಯೇ ಇದೆ. ತಾನು ತತ್ತ್ವನಿಷ್ಠ ಎಂದು ಹೇಳಿಕೊಂಡು ಅದನ್ನು ಆಚರಿಸದೇ ಇರುವ ಮನುಷ್ಯನು ತತ್ತ್ವಗೇಡಿಗಿಂತ ಕಡೆ ಎನಿಸುತ್ತಾನೆ.

ಮನುಷ್ಯನು ಬದುಕಿದರೆ ತತ್ತ್ವಕ್ಕೋಸುಗ ಬದುಕಬೇಕು. ತತ್ತ್ವ ಇಲ್ಲದ ಜೀವನವು ಜೀವನವೇ ಅಲ್ಲ. ಮನುಷ್ಯ ಯಾರೇ ಇರಲಿ, ತನ್ನ ಬದುಕಿನಲ್ಲಿ ಬೆಲೆ ಕೊಟ್ಟು ಆಚರಿಸಿಕೊಂಡು ಹೋಗಬೇಕಾದ ತತ್ತ್ವಗಳು, ಶಾಶ್ವತ ತತ್ತ್ವಗಳು, ಇದ್ದೇ ಇವೆ.

ಆ ತತ್ತ್ವಗಳ ಪ್ರಶ್ನೆ ಬಂದರೆ ಮನುಷ್ಯನು ಯಾರೊಂದಿಗೂ ಯಾವುದರೊಂದಿಗೂ ಸಂಧಾನ ಮಾಡಿಕೊಳ್ಳಬಾರದು. ತಾನು ಒಬ್ಬನೇ ಆದರೂ ಚಿಂತೆಯಿಲ್ಲ, ಮನುಷ್ಯನು ತಾನು ನಂಬಿದ ತತ್ತ್ವಕ್ಕೇ ಅಂಟಿಕೊಂಡು ನಿಲ್ಲಬೇಕು. ತತ್ತ್ವ ಇಲ್ಲದ ಮನುಷ್ಯ ಕಳೆದು ಹೋಗುವಂತೆ, ತತ್ತ್ವ ಇರುವ ಮನುಷ್ಯ ಎಂದೂ ಕಳೆದು ಹೋಗುವುದಿಲ್ಲ.

ಮನುಷ್ಯನು ಮಾಡುವ ಕಾರ್ಯಗಳಿಗೆ ಅವನು ನಂಬಿದ ತತ್ತ್ವಗಳಿಂದಲೇ ಪ್ರೇರಣೆ ಲಭಿಸಬೇಕು. ಮನುಷ್ಯನು ಅನುಭವಿಸುವ ಸುಖ ದುಃಖಗಳೇನೇ ಇದ್ದರೂ, ಅವು ಅವನು ಮಾಡುವ ಕೆಲಸದಿಂದಲೇ ಚಿಮ್ಮಿ ಬರುತ್ತವೆ.

ಮಾಡಬೇಕಾದ ಕೆಲಸವನ್ನು ಮಾಡದೇ ಬರೀ ತತ್ತ್ವ ಹೇಳಿಕೊಂಡು ಕುಳಿತುಕೊಳ್ಳುವ ಮನುಷ್ಯನು ಬಹುದೊಡ್ಡ ಆಷಾಢಭೂತಿ ಎನಿಸುತ್ತಾನೆ. ಜೀವನವು ತತ್ತ್ವ ಹೇಳುವುದರಲ್ಲಿ ಇಲ್ಲ. ಆ ತತ್ತ್ವಗಳನ್ನು ಆಚರಣೆಗೆ ತರುವುದರಲ್ಲಿ ಇದೆ. ಮನುಷ್ಯನು ತತ್ತ್ವ ತಿಳಿದರೆ ಸಾಲದು. ಅದನ್ನು ನಂಬಬೇಕು. ಪ್ರೀತಿಸಬೇಕು. ಪ್ರತ್ಯಕ್ಷ ಮಾಡಿ ತೋರಿಸಬೇಕು.

ತನ್ನ ಜೀವನದಲ್ಲಿ ಮನುಷ್ಯನು ಏನನ್ನೇ ಮಾಡಲಿ, ಅನಿಷ್ಟಕ್ಕೆ ಅವನೆಂದೂ ತಲೆಬಾಗಬಾರದು. ಅನಿಷ್ಟವನ್ನು ಅವನೆಂದೂ ವೈಭವೀಕರಿಸಬಾರದು.

ಜೀವನವು ನಿಬಿಡವಾಗಿ ಕೆಲಸಗಳಿಂದ ಕೂಡಿದ ಕಾರ್ಯಕ್ಷೇತ್ರವಾಗಿದೆ. ಯಾವುದೇ ಕೆಲಸ ಮಾಡುವುದಿದ್ದರೂ, ಮನುಷ್ಯನು, ತನ್ನ ಕೆಲಸದ ಮಧ್ಯದಲ್ಲಿ ಸ್ವಲ್ಪ ಕಾಲ ತಡೆದು ನಿಂತು, ತನ್ನ ಕಾರ್ಯವನ್ನು ನಿರ್ದೇಶಿಸುವ ತತ್ತ್ವ ಯಾವುದೆಂದು ಪರೀಕ್ಷಿಸಿಕೊಳ್ಳಬೇಕು. ಇನ್ನೊಬ್ಬರಿಗೆ ಅನ್ಯಾಯ ಮಾಡುವುದು ತತ್ತ್ವವೂ ಅಲ್ಲ. ಜೀವನವೂ ಅಲ್ಲ. ಬೇರೆಯವರಿಗೆ ಅನ್ಯಾಯ ಬಗೆಯುವವನು ತನಗೇ ಅನ್ಯಾಯ ಮಾಡಿಕೊಳ್ಳುತ್ತಾನೆ.

ತತ್ತ್ವ ಒಳ್ಳೆಯದೋ ಕೆಟ್ಟದೋ ಎನ್ನುವುದು ಅದರ ಆಚರಣೆಯಲ್ಲಿಯೇ ಇದೆ. ತಾನು ತತ್ತ್ವನಿಷ್ಠ ಎಂದು ಹೇಳಿಕೊಂಡು ಅದನ್ನು ಆಚರಿಸದೇ ಇರುವ ಮನುಷ್ಯನು ತತ್ತ್ವಗೇಡಿಗಿಂತ ಕಡೆ ಎನಿಸುತ್ತಾನೆ.

ನಿಯಮವು ಮಾಡುವುದನ್ನು ಹೇಳುತ್ತವೆ. ಆದರೆ, ತತ್ತ್ವವು ಅದನ್ನು ಮಾಡಿತೋರಿಸುತ್ತದೆ. ನಿಯಮವು ಕ್ಷಮಿಸುವುದನ್ನು ಹೇಳಿದರೆ, ತತ್ತ್ವವು ಕ್ಷಮಿಸುತ್ತದೆ. ತತ್ತ್ವನಿಷ್ಠನಾದ ಮನುಷ್ಯನು ಹೋರಾಡಬೇಕು. ತಾನು ಬದಲಿಸಬಹುದಾದ ಅನಿಷ್ಟವನ್ನು ಸಹಿಸಿಕೊಂಡು ಅವನೆಂದೂ ಸುಮ್ಮನೆ ಕುಳಿತುಕೊಳ್ಳಬಾರದು.

ಬರೀ ತತ್ತ್ವ ಹೇಳುತ್ತ ಕುಳಿತುಕೊಳ್ಳುವುದು ಜೀವನವೇ ಅಲ್ಲ. ಬಾಯಿ ಪುರಾಣ ಹೇಳುವವನು, ತಾನು ಹೇಳುವ ತತ್ತ್ವಗಳನ್ನು ಅಪಹಾಸ್ಯಕ್ಕೆ ಗುರಿಪಡಿಸುತ್ತಾನೆ.

❑

# ಗ್ರಾಮಪಂಚಾಯಿತಿ ಆಸ್ತಿ ನಮ್ಮ ಆಸ್ತಿ

ಹೆಚ್ಚಿನ ಹಳ್ಳಿಗಳಲ್ಲಿ ಕುಡಿಯುವ ನೀರಿನ ಸ್ಥಾವರದ ತೊಟ್ಟಿಗಳು ಯಾವಾಗಲೂ ತುಂಬಿ ಹರಿಯುತ್ತಿರುತ್ತವೆ. ಕೆಲವು ಗ್ರಾಮಗಳಲ್ಲಂತೂ ಪೈಪಿನಿಂದ ನೇರವಾಗಿ, ವಿದ್ಯುತ್ ಸರಬರಾಜು ನಿಲ್ಲುವವರೆಗೂ, ನೀರು ಸುರಿಯುತ್ತಿರುತ್ತದೆ. ಕಿರು ನೀರು ಸರಬರಾಜು ಸ್ಥಾವರದ ನಲ್ಲಿಗಳಲ್ಲಿ ನೀರು ಹಿಡಿದುಕೊಂಡವರು ನಲ್ಲಿಯನ್ನು ನಿಲ್ಲಿಸುವ ಬಗ್ಗೆ ಗಮನಹರಿಸದೆ ಅದು ತಮ್ಮ ಕೆಲಸವಲ್ಲವೇನೋ ಎಂಬಂತೆ ವರ್ತಿಸುವುದನ್ನು ಅನೇಕ ಗ್ರಾಮಗಳಲ್ಲಿ ಕಾಣುತ್ತೇವೆ.

ಇದಕ್ಕೆ ಕಾರಣವೇನೆಂದರೆ ಸಾರ್ವಜನಿಕ ಸ್ಥಾವರ ತಮಗೆ ಸಂಬಂಧಿಸಿದ್ದಲ್ಲ, ಅದು ಗ್ರಾಮಪಂಚಾಯಿತಿ ಆಸ್ತಿ ಎಂಬ ಮನೋಭಾವನೆ ! ನಮ್ಮ ತೆರಿಗೆ ಹಣದಿಂದಲೇ ನಿರ್ಮಿಸಲ್ಪಟ್ಟ ಕುಡಿಯುವ ನೀರಿನ ಸ್ಥಾವರಗಳು, ಅವಕ್ಕೆ ಅಳವಡಿಸಿರುವ ಮೋಟಾರು, ಪೈಪ್‌ಲೈನ್ ಒಳಗೊಂಡಂತೆ, ಎಲ್ಲವೂ ನಮ್ಮ ಆಸ್ತಿಗಳೇ ಎಂದು ಸಾರ್ವಜನಿಕರು ಅರ್ಥಮಾಡಿಕೊಳ್ಳಬೇಕು. ಇದನ್ನು ಅರಿಯದೆ ಆಸ್ತಿಯನ್ನು ಹಾಳುಗೆಡವಿದಲ್ಲಿ, ಅದೇ ಆಸ್ತಿಯನ್ನು ಗ್ರಾಮಪಂಚಾಯಿತಿ ಮತ್ತೆ ನಮ್ಮ ಹಣವನ್ನೇ ಬಳಸಿ ನಿರ್ಮಿಸಬೇಕಾಗುತ್ತದೆ. ನೀರು ಅಮೂಲ್ಯ. ಅದನ್ನು ಪೋಲುಮಾಡಬಾರದು. ಅವಶ್ಯಕ ಸಂದರ್ಭಗಳಲ್ಲಿ ಮಾತ್ರ ಮೋಟಾರು ಹಾಕುವ ಮೂಲಕ ವಿದ್ಯುತ್ ಅಪವ್ಯಯ ತಪ್ಪಿಸಬೇಕು. ಇದರಿಂದ ಪುನಃ ಕುಡಿಯುವ ನೀರಿನ ಸ್ಥಾವರ ನಿರ್ಮಾಣಕ್ಕೆ ಮಾಡುವ ಹೆಚ್ಚಿನ ವಿದ್ಯುತ್ತಿಗೆ ನೀಡುವ ಅನವಶ್ಯಕ ವೆಚ್ಚ ತಪ್ಪಿ, ಅದೇ ಹಣವನ್ನು ಬೇರೆ ಅಭಿವೃದ್ಧಿ ಕೆಲಸಗಳಿಗೆ ಬಳಸುವುದು ಸಾಧ್ಯವಾಗುತ್ತದೆ ಗ್ರಾಮಪಂಚಾಯಿತಿಗಳು ಈ ನಿಟ್ಟಿನಲ್ಲಿ ಯೋಚಿಸಬೇಕು.



### ಈ ನಿಟ್ಟಿನಲ್ಲಿ ಆತ್ಮಾವಲೋಕನಕ್ಕಾಗಿ ಕೆಲವು ಪ್ರಶ್ನೆಗಳು

1. ನಮ್ಮ ತೆರಿಗೆ ಹಣದಲ್ಲಿ ನಿರ್ಮಿಸಿರುವ ಸ್ಥಾವರದಲ್ಲಿ ನಮ್ಮ ಪಾಲೂ ಇರುವುದರಿಂದ ಅದು ನಮ್ಮ ಆಸ್ತಿಯಲ್ಲವೇ ? ಅಷ್ಟಕ್ಕೂ ಗ್ರಾಮಪಂಚಾಯಿತಿ ಯಾರದು ?
2. ಗ್ರಾಮಪಂಚಾಯಿತಿ ಜನಪ್ರತಿನಿಧಿಗಳು ಹಾಗೂ ಸಿಬ್ಬಂದಿ **'ಗ್ರಾಮಪಂಚಾಯಿತಿ ಆಸ್ತಿ ನಮ್ಮ ಆಸ್ತಿ'** ಎನ್ನುವ ಪರಿಕಲ್ಪನೆಯನ್ನು ಜನಮಾನಸದಲ್ಲಿ ಬಿತ್ತಿ ಬೆಳೆಸಲು ಇದು ಸಕಾಲವಲ್ಲವೇ ? ಈ ಆಸ್ತಿಗೆ ಹಾನಿ ಮಾಡಿದರೆ ನಮಗೇ ನಷ್ಟ ಎಂಬ ಭಾವನೆ ಸಾರ್ವಜನಿಕರಲ್ಲಿ ತರುವುದು ಅವಶ್ಯಕವಲ್ಲವೇ ?
3. ಕುಡಿಯುವ ನೀರಿನ ಸ್ಥಾವರಗಳು ತುಂಬಿದ ತಕ್ಷಣ ಮೋಟಾರನ್ನು ಬಂದುಮಾಡಿ ನಿರ್ವಹಿಸುವುದು, ಗ್ರಾಮಪಂಚಾಯಿತಿ ಅದಕ್ಕೆಂದೇ ನೇಮಕಮಾಡಿಕೊಂಡಿರುವ, ನೀರಗಂಟಿಯ ಕೆಲಸವಲ್ಲವೇ ? ಸಮರ್ಪಕ ಕಾರ್ಯ ನಿರ್ವಹಿಸದ ನೀರಗಂಟಿಯ ಮೇಲೆ ಕ್ರಮ ತೆಗೆದುಕೊಳ್ಳುವುದು ಯಾರ ಜವಾಬ್ದಾರಿ ?
4. ನಲ್ಲಿಯಲ್ಲಿ ನೀರು ಹಿಡಿದುಕೊಂಡ ಮೇಲೆ ನೀರು ಸುರಿಯದಂತೆ ನಿಲ್ಲಿಸುವುದು ಪ್ರತಿ ನಾಗರಿಕರ ಕರ್ತವ್ಯ ಮತ್ತು ಜವಾಬ್ದಾರಿಯಲ್ಲವೇ ?
5. 'ಒಂದು ರೂಪಾಯಿ ಉಳಿಕೆ ಎರಡು ರೂಪಾಯಿ ಗಳಿಕೆಗೆ ಸಮ'. ವಿದ್ಯುತ್ ಅಪವ್ಯಯ ತಪ್ಪಿಸಿದಲ್ಲಿ ಗಣನೀಯ ಪ್ರಮಾಣದ ಹಣ ಉಳಿಯುವುದಿಲ್ಲವೇ ?

– ಡಾ. ಎಸ್.ಬಿ. ರವಿಕುಮಾರ್
ಸಹಾಯಕ ಯೋಜನಾಧಿಕಾರಿ, ಜಿಲ್ಲಾ ಪಂಚಾಯತ್, ಶಿವಮೊಗ್ಗ.

ವಿ.ಸೂ. ಓದುಗರು ಸಹ ತಾವು ನೋಡಿದ, ಕೇಳಿದ, ಓದಿದ ಘಟನೆ ಮತ್ತು ಅದಕ್ಕೆ ಪೂರಕವಾದ ಪ್ರಶ್ನೆಗಳನ್ನು ಬರೆದು ಪ್ರಕಟಣೆಗೆ ಕಳುಹಿಸಬಹುದಾಗಿದೆ. ಆಯ್ಕೆಯಾಗಿ ಪ್ರಕಟವಾದ ಪ್ರಶ್ನೆಗಳಿಗೆ ರೂ. 500/- ಬಹುಮಾನ ನೀಡಲಾಗುವುದು.

ಕಾವ್ಯ ವಿಕಾಸ

# ಬಾ .. ಬಾ .. ಮಳೆಯೇ !



ಸುಶೋಭಿತ ಪಿ.ಎಸ್. *

ಮಳೆಯೇ ಮಳೆಯೇ ಓ ಮಳೆಯೇ !
ಪಟ ಪಟ ಎಂದು ಧರೆಗಿಳಿಯೇ
ಹೂಗಳ ಹಾಸು, ಕಂಪನು ಸೂಸು
ಬಾ ಬಾ ಮಳೆಯೇ ಓ ಮಳೆಯೇ !

ಅಗಣಿತ ಬಿಂದು ನಿನ್ನಯ ಸಿಂಧು
ನಾನು ನಿನ್ನ ಆಪ್ತ ಬಂಧು !
ರೈತರು ಕಾಯುತಲಿಹರೂ ಇಂದು
ನೀ ಬಂದರೆ ಅವರಿಹರು ಎಂದೂ.

ಮೋಡದ ಬಾಗಿಲು ತೆರೆದು ಬರುವೆ
ಧರೆಗಿಳಿದು ಅಂದ–ಚಂದದಿ ನಲಿವೆ
ಕೋಪವಿದ್ದರೆ ಜೋರಾಗಿ ಬರುವೆ !
ಶಾಂತನಾಗಿ ಬಾ ಓ ... ಮಳೆಯೇ !

❑

* D/o. ಸುದರ್ಶನ್ ಕೆ. ಗೌಡ, ರಾಮನಗರ, 'ಶ್ರೀ ಲಲಿತಾ' ನಿಲಯ, ಪಡ್ನೂರು ಗ್ರಾಮ ಮತ್ತು ಪುತ್ತೂರು ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ.

# ನಬಾರ್ಡ್ ಮತ್ತು ಗ್ರಾಮೀಣ ಸಾಲ – ಸೌಲಭ್ಯ




ಪ್ರೊ. ಎ.ಎಚ್. ಮಾಸಾಪತಿ*

ಮೊಬೈಲ್ : 93435 35229


ನಬಾರ್ಡ್ ವತಿಯಿಂದ ಸಾಲ ಸೌಲಭ್ಯ ಪಡೆಯುವ ಬಗ್ಗೆ ಸಂಕ್ಷಿಪ್ತ ಮಾಹಿತಿ

1982 (ಜುಲೈ, 12)ರಲ್ಲಿ, ಭಾರತೀಯ ರಿಜರ್ವ್ ಬ್ಯಾಂಕಿನಿಂದ ಪ್ರತ್ಯೇಕಿಸಿ 'ರಾಷ್ಟ್ರೀಯ ಕೃಷಿ ಹಾಗೂ ಗ್ರಾಮೀಣಾಭಿವೃದ್ಧಿ ಬ್ಯಾಂಕ್' (NABARD) ಸ್ಥಾಪಿಸಲಾಗಿದೆ. ಅದು ಕೇಂದ್ರ ಸರ್ಕಾರ ಭಾರತೀಯ ರಿಜರ್ವ್ ಬ್ಯಾಂಕ್ (RBI) ಸಂಯುಕ್ತ ಸ್ವಾಮ್ಯಕ್ಕೆ ಒಳಪಟ್ಟಿರುವಂತಹ ಸರ್ವೋಚ್ಛವಾದ ಅಭಿವೃದ್ಧಿ ಹಣಕಾಸಿನ ಸಂಸ್ಥೆಯಾಗಿದೆ. ಅದು ಕೃಷಿ ಸಾಲದ ಜವಾಬ್ದಾರಿ, ಸಾಂಸ್ಥಿಕ ಅಭಿವೃದ್ಧಿ, ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳು ಹಾಗೂ ಸಹಕಾರಿ ಸಾಲ ಸಂಸ್ಥೆಗಳ ಮೇಲ್ವಿಚಾರಣೆಯನ್ನು ನಿರ್ವಹಿಸುತ್ತದೆ. ನೂತನ ವಿಧಾನಗಳ ಮೂಲಕ ಅದು ಸುಸ್ಥಿರ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿಗೆ ನೆರವು ನೀಡುತ್ತದೆ. ಸುಮಾರು ಮೂರು ಸಾವಿರ ಅಧಿಕಾರಿಗಳು ಹಾಗೂ ಆರ್ಥಿಕ/ತಾಂತ್ರಿಕ ತಜ್ಞರು ಭಾರತದಾದ್ಯಂತ, ನಾಲ್ಕು ನೂರು ಜಿಲ್ಲೆಗಳಲ್ಲಿ ಕಾರ್ಯನಿರತರಾಗಿದ್ದಾರೆ. ಅದು ತನ್ನ ಆರು ತರಬೇತಿ ಶಾಖೆಗಳ ಮೂಲಕ ವಾಣಿಜ್ಯ ಬ್ಯಾಂಕು, ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳು ಮತ್ತು ಸಹಕಾರಿ ಸಂಸ್ಥೆಗಳಿಗೆ ತರಬೇತಿ ಸೌಕರ್ಯಗಳನ್ನು ಕಲ್ಪಿಸುತ್ತದೆ. ಅದು ಪುನರ್ಧನ ನೀಡುವ ಮೂಲಕ ಕೃಷಿ ಹಾಗೂ ಅದಕ್ಕೆ ಸಂಬಂಧಿಸಿದ ಚಟುವಟಿಕೆಗಳಲ್ಲಿ ಉತ್ಪಾದನೆ ಮತ್ತು ಬಂಡವಾಳ ಹೂಡಿಕೆ ಗ್ರಾಮೀಣ ಕೃಷಿಯೇತರ ಕ್ಷೇತ್ರದ ಕಾರ್ಯಗಳಿಗೆ ಆರ್ಥಿಕ ಬೆಂಬಲ ನೀಡಲಾಗುತ್ತದೆ.

ಭಾರತದಂತಹ ವಿಶಾಲ ರಾಷ್ಟ್ರಗಳಲ್ಲಿ, ಸಮಗ್ರ ಗ್ರಾಮೀಣಾಭಿವೃದ್ಧಿ ಸಾಧನೆಯು ಒಂದು ಸಂಕೀರ್ಣ ಸಮಸ್ಯೆಯಾಗಿದೆ. ದಾರಿದ್ರ್ಯ ನಿವಾರಣೆ, ಆಹಾರ ಭದ್ರತೆ, ಪ್ರಾದೇಶಿಕ ಅಭಿವೃದ್ಧಿಯ ಸಮತೋಲನ, ಗ್ರಾಮೀಣ ಉದ್ಯೋಗ ಸೃಷ್ಟಿ, ಸ್ವಸಹಾಯ ಸಂಘಗಳ ಸಬಲೀಕರಣ, ಗ್ರಾಮೀಣ ಸಾಲ ನೀಡಿಕೆಯ ಹೆಚ್ಚಳ, ಸಾಲ ಹರಿವು (Loan Flow) ಏರಿಕೆ, ಹಣಕಾಸು ಸಂಸ್ಥೆಗಳ ಬಲವರ್ಧನೆ, ಸಹಭಾಗಿತ್ವದ ಯೋಜನೆಗಳ ನಿರೂಪಣೆ ಇತ್ಯಾದಿ ಮಹತ್ವದ ಧ್ಯೇಯಗಳನ್ನು ಅನುಷ್ಠಾನಗೊಳಿಸಲು ನಬಾರ್ಡ್ ಕಾರ್ಯವೈಖರಿ, ಅಧಿಕಾರಿಗಳ ದೃಷ್ಟಿಕೋನ, ತರಬೇತಿಯ ಗುಣಮಟ್ಟ ಹಾಗೂ ಸೇವಾಭಾವನೆಯನ್ನು ನಿರಂತರವಾಗಿ ವಿಕಾಸಗೊಳಿಸಬೇಕಾಗುತ್ತದೆ. ಪರಂಪರಾಗತ ಕೃಷಿಯನ್ನು ವಾಣಿಜ್ಯೀಕರಣಗೊಳಿಸುವ ಸಮಕಾಲೀನ ಜಗತ್ತಿನಲ್ಲಿ ಅದನ್ನು ಲಾಭದಾಯಕ ಮಾಡುವ ಮತ್ತು ಸಮಗ್ರ ಕೃಷಿಕ ಸಮುದಾಯದ ಪರಿಶ್ರಮಕ್ಕೆ ಯೋಗ್ಯವಾದ ಪ್ರತಿಫಲ ಪ್ರಾಪ್ತವಾಗುವ, ದೃಢವಾದ ಧೋರಣೆಯನ್ನು ಅನುಸರಿಸಬೇಕು. ರಾಜ್ಯ ಹಾಗೂ ಕೇಂದ್ರ ಸರ್ಕಾರದ ಸೂಕ್ತವಾದ ಬೆಂಬಲ ಮತ್ತು ಭಾರತೀಯ ರಿಜರ್ವ್ ಬ್ಯಾಂಕಿನ ಪ್ರಗತಿಪರ ಮಾರ್ಗದರ್ಶನದೊಂದಿಗೆ ಗ್ರಾಮೀಣಾಭಿವೃದ್ಧಿ ಹಾಗೂ ದಾರಿದ್ರ್ಯ ನಿವಾರಣೆಯನ್ನು ಸಾಧಿಸಬಹುದಾಗಿದೆ. ಈ ದಿಶೆಯಲ್ಲಿ ವಿನೂತನ ವ್ಯವಸ್ಥೆ, ಸಮರ್ಪಕ ತಂತ್ರಜ್ಞಾನದ ಬಳಕೆ ಮತ್ತು ಗತಿಶೀಲ ಕಾರ್ಯವಿಧಾನವನ್ನು ಅನ್ವಯಿಸುವ ಅಗತ್ಯವಿದೆ. ನಬಾರ್ಡ್‌ದ ಮಾಜೀ ವ್ಯವಸ್ಥಾಪಕ ನಿರ್ದೇಶಕರು ತಮ್ಮ ವಾಸ್ತವಿಕ ಅನುಭವಗಳನ್ನು ನಿರೂಪಿಸಿದ್ದಾರೆ.

ನಬಾರ್ಡ್ ಹಲವಾರು ಅಭಿವೃದ್ಧಿಪರ ಹಾಗೂ ಉತ್ತೇಜನಕಾರಕ ಕ್ರಮಗಳನ್ನು ಕೈಕೊಂಡಿದೆ. ಅದರ ನೂತನ ಪರಿಕಲ್ಪನೆ, ಉತ್ಪನ್ನ/ಉತ್ಪಾದನೆ ಹಾಗೂ ಸೇವೆಗಳ ಗುಣಮಟ್ಟ ಹೆಚ್ಚಿಸಲು ಕಾರ್ಯಕ್ರಮಗಳನ್ನು ರೂಪಿಸಲಾಗಿದೆ. ಪಂಚವಾರ್ಷಿಕ ಯೋಜನೆ ಮತ್ತು ಸರ್ಕಾರಿ ಚಟುವಟಿಕೆಗಳಲ್ಲಿ ಉಲ್ಲೇಖಿತವಾದ ರಾಷ್ಟ್ರೀಯ ಆದ್ಯತೆಗಳಿಂದ ನಬಾರ್ಡ್ ಪ್ರಭಾವಿತವಾಗಿದೆ.


* ನಿರ್ದೇಶಕರು, ವಿಕಾಸ ಪ್ರಕಾಶನ, ನಂ. 1/4, 1ನೇ ಅಡ್ಡರಸ್ತೆ, ಕೆ.ಎಚ್.ಬಿ. ರಸ್ತೆ, ಸುಲ್ತಾನ್‌ಪಾಳ್ಯ, ಬೆಂಗಳೂರು–560 032.

ಗ್ರಾಮೀಣ ಸಾಲದ ಆಳ ಹಾಗೂ ವಿಸ್ತಾರವನ್ನು ಹೆಚ್ಚಿಸುವ ಜೊತೆಗೆ, ಗ್ರಾಮೀಣ ಪ್ರದೇಶಗಳಲ್ಲಿ 'ಸಾಲ ಗ್ರಹಣ ಸಾಮರ್ಥ್ಯ' ಬೆಳವಣಿಗೆಯ ಧ್ಯೇಯದಿಂದ, ನಬಾರ್ಡ್ ಪ್ರೇರಿತವಾಗಿದೆ.

### ಧ್ಯೇಯೋದ್ದೇಶ

ಗ್ರಾಮೀಣ ಪ್ರದೇಶದ ಕೃಷಿ ಸಾಲ ಮತ್ತು ಇತರ ಆರ್ಥಿಕ ಚಟುವಟಿಕೆಗಳ ಕ್ಷೇತ್ರಗಳಲ್ಲಿ ಧೋರಣೆ, ಯೋಜನೆ ಹಾಗೂ ಕಾರ್ಯಾಚರಣೆಗೆ ಸಂಬಂಧಿಸಿದ ಎಲ್ಲ ವಿಷಯಗಳ ಹೊಣೆಗಾರಿಕೆಯನ್ನು ನಬಾರ್ಡ್ ನಿರ್ವಹಿಸುತ್ತದೆ.

(1) ಗ್ರಾಮೀಣ ಪ್ರದೇಶಗಳಲ್ಲಿ ವಿವಿಧ ಅಭಿವೃದ್ಧಿಪರ ಚಟುವಟಿಕೆಗಳ ಮುನ್ನಡೆಗಾಗಿ, ಹಣ ಹೂಡಿಕೆ ಹಾಗೂ ಉತ್ಪಾದನಾ ಸಾಲ ಪೂರೈಸುವ ಸಂಸ್ಥೆಗಳಿಗೆ ಮರು ಹಣಕಾಸು ಸೌಲಭ್ಯ ನೀಡುವಂತಹ ಅಗ್ರಗಣ್ಯ ಅಭಿವೃದ್ಧಿ ಬ್ಯಾಂಕ್ ಆಗಿದೆ.

(2) ಸಾಲ ವಿತರಣಾ ವ್ಯವಸ್ಥೆಯ 'ಹೀರಿಕೊಳ್ಳುವ ಸಾಮರ್ಥ್ಯ' (Absorptive Capacity) ಸುಧಾರಣೆಗಾಗಿ ಸಂಸ್ಥೆಗಳನ್ನು ನಿರ್ಮಾಣ ಮಾಡುವ ಜೊತೆಗೆ ಮೇಲ್ವಿಚಾರಣೆ, ಪುನರ್ವಸತಿ ಯೋಜನೆಗಳ ರಚನೆ, ಸಾಲ–ಸಂಸ್ಥೆಗಳ ಪುನರ್ ನಿರ್ಮಾಣ ಮತ್ತು ಸಿಬ್ಬಂದಿ ತರಬೇತಿಯನ್ನು ಕುರಿತು ಕ್ರಮಗಳನ್ನು ಕೈಕೊಳ್ಳಲಾಗುತ್ತದೆ.

(3) ಕ್ಷೇತ್ರಮಟ್ಟದ ಅಭಿವೃದ್ಧಿಪರ ಕಾರ್ಯಗಳಲ್ಲಿ ನಿರತವಾಗಿ, ಗ್ರಾಮೀಣ ಹಣಕಾಸು ಪೂರೈಸುವಂತಹ ಎಲ್ಲ ಸಂಸ್ಥೆಗಳ ಚಟುವಟಿಕೆಗಳನ್ನು ಸಂಯೋಜಿಸಲಾಗುತ್ತದೆ. ಭಾರತ ಸರ್ಕಾರ, ರಾಜ್ಯ ಸರ್ಕಾರಗಳು, ಭಾರತೀಯ ರಿಜರ್ವ್ ಬ್ಯಾಂಕ್ ಹಾಗೂ ನೀತಿ ರಚನೆಗೆ ಸಂಬಂಧಿಸಿದ ರಾಷ್ಟ್ರಮಟ್ಟದ ಇತರ ಸಂಸ್ಥೆಗಳೊಂದಿಗೆ, ನಬಾರ್ಡ್ ಸಂಪರ್ಕ ನಿರ್ವಹಿಸುತ್ತದೆ.

(4) ನಬಾರ್ಡ್ ಮರುಹಣಕಾಸು ನೀಡಿದಂತಹ ಪ್ರಾಯೋಜನೆಗಳ ಮೇಲ್ವಿಚಾರಣೆ ಮತ್ತು ಮೌಲ್ಯ ನಿರ್ಧಾರ ಮಾಡುತ್ತದೆ.

### ಪ್ರಾಥಮಿಕ ತತ್ವಗಳು

1. ವಿಜ್ಞಾನ ಹಾಗೂ ತಂತ್ರಜ್ಞಾನದ ಅತ್ಯಂತ ಸೂಕ್ತವಾದ ವಿಧಾನಕ್ಕೆ ಅನುಸಾರವಾಗಿ ಸಾಲ ಪಡೆದ ಹಣದ ಬಳಕೆ ಮಾಡಬೇಕು. (Effectiveness).
2. ಸಾಲದ ಅವಧಿ ಮತ್ತು ಷರತ್ತು ಅಥವಾ ತಾಂತ್ರಿಕ/ಆರ್ಥಿಕ ಪ್ರಮಾಣಗಳನ್ನು ಸಂಪೂರ್ಣವಾಗಿ ಗೌರವಿಸಬೇಕು. (Feasibility)
3. ಉತ್ಪಾದಕತೆ ಹಾಗೂ ಆದಾಯದಲ್ಲಿ, ಪರಮಾವಧಿ ಹೆಚ್ಚಳವನ್ನು ಸಾಧಿಸುವಂತಹ ಅಪೇಕ್ಷಿತ ಕೌಶಲ್ಯದೊಂದಿಗೆ ಕಾರ್ಯವನ್ನು ನಿರ್ವಹಿಸಬೇಕು. (Productivity)
4. ಸಾಲದ ಹಣಕಾಸಿನಿಂದ ಸೃಷ್ಟಿಯಾದ ಹೆಚ್ಚುವರಿ ಆದಾಯದ ಒಂದು ಭಾಗದ ಉಳಿತಾಯವಾಗಬೇಕು. (Capital Formation)
5. ಸಾಲದ ಕಂತುಗಳನ್ನು ಸಕಾಲದಲ್ಲಿ ನಿಯಮಿತವಾಗಿ ವಸೂಲಿ ಮಾಡಿದರೆ ಸಾಲದ ಹಣವನ್ನು ಮರು ಬಳಕೆ ಮಾಡಲು ಸಾಧ್ಯವಾಗುತ್ತದೆ. (Recovery)

### ನಬಾರ್ಡ್ ಸಾಲ–ಸೌಲಭ್ಯ

#### 1) ಅಲ್ಪಾವಧಿ ಸಾಲ (18 ತಿಂಗಳುಗಳ ಅವಧಿ)

(ಅ) ವಿಭಿನ್ನ ಪ್ರದೇಶಗಳ ರೈತರಿಗೆ ಸಕಾಲ ಮತ್ತು ರಿಯಾಯ್ತಿ ದರದಲ್ಲಿ ವಿವಿಧ ಬೆಳೆಗಳಿಗಾಗಿ ಅಂಗೀಕೃತ ಪ್ರಮಾಣದ ಸಾಲ ಪೂರೈಕೆಯನ್ನು ಖಚಿತಪಡಿಸುವುದು.

ಕೃಷಿ ಚಟುವಟಿಕೆಗಳಿಗಾಗಿ, 2009–10ರಲ್ಲಿ 24000 ಕೋಟಿ ರೂ. ಗಳು.

(ಬ) ಗ್ರಾಮೀಣ ಕೈಗಾರಿಕಾ ಸಹಕಾರಿ ಸಂಸ್ಥೆಗಳು, ಗ್ರಾಮೀಣ ಕುಶಲ ಕರ್ಮಿಗಳು, ಕೈಮಗ್ಗ ನೇಕಾರರು, ಮೀನು ಕೃಷಿ, ಪೈರುಗಳ ಮಾರಾಟ, ಕೃಷಿ ಸಾಮಗ್ರಿ ಮಾರಾಟ ಇತ್ಯಾದಿ ಚಟುವಟಿಕೆಗಳಿಗೆ ಸಂಬಂಧಿಸಿದ ಕೃಷಿಯೇತರ ಕಾರ್ಯಗಳು.

#### 2) ಮಧ್ಯಮಾವಧಿ ಸಾಲ (3 ವರ್ಷಗಳ ಅವಧಿ)

(ಅ) ಪ್ರಕೃತಿ ವಿಕೋಪದಿಂದ ಪೈರುಗಳು ಬೃಹದ್ ಪ್ರಮಾಣದಲ್ಲಿ ನಾಶವಾಗಿ; ಅಪಾರ ನಷ್ಟ ಸಂಭವಿಸಿದ ಸಂದರ್ಭದಲ್ಲಿ ಸಾಲಗಳನ್ನು ಪರಿವರ್ತಿಸಲಾಗುವುದು.

(ಬ) ಉತ್ಪಾದಕ ಸ್ವತ್ತು/ಆಸ್ತಿಯನ್ನು ಪಡೆದುಕೊಳ್ಳಲು ಯೋಜನೇತರ ಸಾಲಗಳು.

#### 3) ಬಂಡವಾಳ ಹೂಡಿಕೆ ಸಾಲ (3 ರಿಂದ 25 ವರ್ಷಗಳ ಅವಧಿ)

ಆಸ್ತಿ ನಿರ್ಮಾಣದ ಮುಖಾಂತರ ಬಂಡವಾಳ ಕ್ರೋಢೀಕರಣಕ್ಕೆ (Accumulation) ಸಹಾಯಕವಾಗುವ ಎಲ್ಲ ಗ್ರಾಮೀಣ ಆರ್ಥಿಕ ಕಾರ್ಯಕ್ರಮಗಳಿಗೆ ಹಣಕಾಸು ಪೂರೈಸಲಾಗುತ್ತದೆ. ತಾಂತ್ರಿಕತೆಯ ಉನ್ನತೀಕರಣಕ್ಕೆ ಪ್ರೋತ್ಸಾಹನೆ ನೀಡುವುದರಿಂದ, ಅಧಿಕ ಉತ್ಪಾದಕತೆ, ಉತ್ಪಾದನೆಗೆ ಉತ್ತೇಜನ ದೊರೆಯುತ್ತದೆ. ರೈತರು ಹಾಗೂ ಉದ್ಯಮಗಳಿಗೆ ಹೆಚ್ಚುವರಿ ಆದಾಯ ಪ್ರಾಪ್ತವಾಗುತ್ತದೆ. 2009–10ರಲ್ಲಿ, 12000 ಕೋಟಿ ರೂ.ಗಳನ್ನು ನಿಗದಿಪಡಿಸಲಾಗಿತ್ತು.

### 4) ಗ್ರಾಮೀಣ ಮೂಲ ಸೌಕರ್ಯ ನಿಧಿ

ಗ್ರಾಮೀಣ ಕೃಷಿ ಸಾಲ ಮತ್ತು ಗ್ರಾಮೀಣ ಮೂಲ ಸೌಕರ್ಯ ತಳಹದಿಯ ವಿಸ್ತರಣೆಯ ಸೂಕ್ತವಾದ ಬೇಡಿಕೆಗೆ ಸಾಕಷ್ಟು ಪ್ರಮಾಣದಲ್ಲಿ ಪ್ರೋತ್ಸಾಹ ನೀಡಲು ಸರ್ಕಾರಿ ಸಂಪನ್ಮೂಲಗಳ ಕೊರತೆ ಇರುವುದರಿಂದ ವಾಣಿಜ್ಯ ಬ್ಯಾಂಕುಗಳು ರಿಯಾಯಿತಿ ದರದಲ್ಲಿ, ಹಣಕಾಸು ಪೂರೈಸುವ ಮೂಲಕ 5 ವರ್ಷಗಳ ಸಾಲ ನೀಡುತ್ತವೆ.

ಗ್ರಾಮೀಣ ಪ್ರದೇಶದ ಹಲವಾರು ಪ್ರಮುಖ ಕ್ಷೇತ್ರಗಳು, ಅದರ ವ್ಯಾಪ್ತಿಗೆ ಒಳಪಡುತ್ತವೆ. ರಸ್ತೆ ಹಾಗೂ ನೀರಾವರಿ ಕ್ಷೇತ್ರಗಳಿಗೆ ತಲಾ ಶೇಕಡಾ 45 ಮತ್ತು ಸಾಮಾಜಿಕ ರಂಗಕ್ಕೆ ಶೇಕಡಾ 10ರಷ್ಟು ಹಣವನ್ನು ಒದಗಿಸಲಾಗಿದೆ. 2009-10ರಲ್ಲಿ 18500 ಕೋಟಿ ರೂ. ಗಳನ್ನು ನೀಡಲಾಗಿದೆ.

ಗ್ರಾಮೀಣ ಕೃಷಿಕರು ಮತ್ತು ರೈತರ ಆರ್ಥಿಕ ಸುಧಾರಣೆಗಾಗಿ ಕೊಡುವಂತಹ ಸಾಲ-ಸೌಲಭ್ಯಗಳಿಗೆ ರಿಯಾಯ್ತಿ ನೀಡುವ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಹಲವಾರು ಯೋಜನೆಗಳಿವೆ.

1) ರಾಷ್ಟ್ರೀಯ ಆಹಾರ ಭದ್ರತಾ ಯೋಜನೆ
2) ರಾಷ್ಟ್ರೀಯ ಯಂತ್ರೋಪಕರಣ ಯೋಜನೆ
3) ದ್ವಿದಳ ಧಾನ್ಯ ಹಾಗೂ ಮುಸುಕಿನ ಜೋಳ ಯೋಜನೆ
4) ತೈಲ ಬೀಜ ಅಭಿವೃದ್ಧಿ ಯೋಜನೆ
5) ಭೂ ಚೇತನ ಯೋಜನೆ
6) ಕೃಷಿ ಅರಣ್ಯ ಯೋಜನೆ
7) ತಾಳೆ ಬೆಳೆ ಯೋಜನೆ
8) ಹತ್ತಿ ಮಿನಿ ಮಿಷನ್ ಯೋಜನೆ
9) ಕಬ್ಬು ಮಿನಿ ಮಿಷನ್ ಯೋಜನೆ
10) ರಾಷ್ಟ್ರೀಯ ತೋಟದ ಬೆಳೆಗಳ ಮಿಷನ್
11) ಭೂಮಿಯ ಸುಧಾರಣೆಗಾಗಿ ಖುಷ್ಕಿ ಅಭಿವೃದ್ಧಿ ಮಂಡಳಿ
12) ತೆಂಗು ಅಭಿವೃದ್ಧಿ ಮಂಡಳಿ
13) ಸಂಬಾರ ಮಂಡಳಿ
14) ಕಾಫಿ ಮಂಡಳಿ ಇತ್ಯಾದಿ.

ವಿವಿಧ ಯೋಜನೆಗಳ ಫಲಾನುಭವಿಗಳ ಆಯ್ಕೆಗಾಗಿ ಮಾರ್ಗದರ್ಶನ ಮಾಡಲಾಗಿದೆ. ಮಾರ್ಗಸೂಚಿಗೆ ಅನುಸಾರವಾಗಿ ಕೊಡುವ ಸಾಲ-ಸೌಲಭ್ಯಗಳನ್ನು ಗುಡ್ಡಗಾಡು ಜನರಿಗೆ ಶೇಕಡಾ 16, ಸಣ್ಣ/ಅತಿ ಸಣ್ಣ ರೈತರು ಮತ್ತು ಮಹಿಳಾ ಫಲಾನುಭವಿಗಳಿಗೆ ಶೇಕಡಾ 33 (ಮೂವತ್ತೂ ಮೂರು)ರಷ್ಟು ಸೌಲಭ್ಯಗಳನ್ನು ಪೂರೈಸಬೇಕು. ಸರ್ಕಾರದ ಸಹಾಯಧನವನ್ನು ಆಯಾ ಫಲಾನುಭವಿಗಳ ಲೆಕ್ಕಕ್ಕೆ ನೀಡಲಾಗುತ್ತದೆ. ಹೆಚ್ಚಿನ ಹಣದ ಅಗತ್ಯವಿದ್ದರೆ ಬ್ಯಾಂಕು ಸಾಲದ ರೂಪದಲ್ಲಿ ನೀಡಬಹುದು ಅಥವಾ ಫಲಾನುಭವಿಯು ಹಣವನ್ನು ಭರಿಸಬೇಕಾಗುತ್ತದೆ.

**ನಬಾರ್ಡ್ 'ಸಾಲ ಮತ್ತು ನೆರವು' ಕಾರ್ಯಕ್ರಮದ ಕೆಲವು ಪ್ರಧಾನ ಅಂಶಗಳನ್ನು ನಿರೂಪಿಸಲಾಗಿದೆ.**

1) ಗ್ರಾಮೀಣ ಮೂಲ ಸೌಕರ್ಯ
2) ಗ್ರಾಮೀಣ ಗೃಹ ಕೈಗಾರಿಕೆಗಳು
3) ಗ್ರಾಮೀಣ ಉದ್ಯೋಗದ ಮೂಲಕ ದಾರಿದ್ರ್ಯ ನಿವಾರಣೆ
4) ಆಹಾರ ಭದ್ರತೆ
5) ಹಣಕಾಸು ಸೌಲಭ್ಯ
6) ಸಾಂಸ್ಥಿಕ ಅಭಿವೃದ್ಧಿ

### ಗ್ರಾಮೀಣ ಮೂಲ ಸೌಕರ್ಯ

- ಗ್ರಾಮೀಣ ಮೂಲ ಸೌಕರ್ಯಗಳಿಗಾಗಿ ವ್ಯಾಪಕ ಸ್ವರೂಪದ ಪಂಚವಾರ್ಷಿಕ ಯೋಜನೆ. ಅದು ಜಿಲ್ಲಾ ಮೂಲಸೌಕರ್ಯ ಮತ್ತು ಕೃಷಿಗಾಗಿ 5 ವರ್ಷಗಳ ಜಿಲ್ಲಾ ಯೋಜನೆಯನ್ನು ಒಳಗೊಳ್ಳುತ್ತದೆ.
- ಗ್ರಾಮ ಪಂಚಾಯತಿಗಳ ಸಹಕಾರದಿಂದ, ಆಧುನಿಕ ಗ್ರಾಮೀಣ ಸಣ್ಣ ಮನೆಗಳ ನಿರ್ಮಾಣ.
- ಜೈವಿಕ ಅನಿಲ, ಜೈವಿಕ ಡಿಸೇಲ್, ಸೌರ, ಪವನ, ಕಿರು ಜಲ ವಿದ್ಯುತ್ ಇಂಧನ ವ್ಯವಸ್ಥೆಯನ್ನು ಪ್ರೋತ್ಸಾಹನೆ ಅಗತ್ಯವಾಗಿದೆ.
- ಬ್ಯಾಂಕಿಂಗ್ ಕ್ಷೇತ್ರದಿಂದ ಸೂಕ್ತವಾದ ಸೇವೆ/ಬೆಂಬಲ ಲಭ್ಯವಾಗದಿರುವಂತಹ ಪಾನೀಯ ಜಲ, ಪರಿಸರ ನೈರ್ಮಲ್ಯ, ಪ್ರವಾಸೋದ್ಯಮ, ಶೌಚಾಲಯ ಸೌಲಭ್ಯ ಹೊಂದಿದ ವಸತಿ ಯೋಜನೆ ಇತ್ಯಾದಿ ಒಳಗೊಂಡಿರುವ ಗ್ರಾಮೀಣ ಸೇವಾ ಕ್ಷೇತ್ರದ ನಿರ್ಮಾಣ.
- ಗ್ರಾಮೀಣ ಮೂಲ ಸೌಕರ್ಯಗಳಲ್ಲಿ ಹಣ ಹೂಡಿಕೆಗೆ 'ಸಾರ್ವಜನಿಕ ಖಾಸಗಿ ಸಹಭಾಗಿತ್ವ' (P.P.P.) ವಿಧಾನದ ಬಳಕೆ.
- ಭಾರತ ಸರ್ಕಾರದಿಂದ ಸ್ಥಾಪಿತವಾದ ಸಾಮಾನ್ಯ ಸೇವಾ ಕೇಂದ್ರಗಳ ಮೂಲಕ, ಮಾಹಿತಿ ಸಂವಹನ ತಂತ್ರಜ್ಞಾನದ ಬಳಕೆ. ಸ್ವಸಹಾಯ ಗುಂಪುಗಳಿಗೆ (SHGS) ವಿದ್ಯುನ್ಮಾನ ಆಡಳಿತ ಮತ್ತು ವಿದ್ಯುನ್ಮಾನ ಅಂಚೆ ಸೇವೆ. ಅದಲ್ಲದೆ, ಕೃಷಿ ಪೋರ್ಟಲ್, ತರಬೇತಿ ದಾಖಲೆ ಇತ್ಯಾದಿ ಸೌಕರ್ಯ ಪೂರೈಕೆ.

## ಗ್ರಾಮೀಣ ಗೃಹ ಕೈಗಾರಿಕೆಗಳು

- ಕೃಷಿ ಉತ್ಪನ್ನ/ಹುಟ್ಟುವಳಿ ಸಂಸ್ಕರಣೆಯ ಲಘು ಉದ್ಯಮಗಳು, ಕರಕುಶಲ ವಸ್ತುಗಳ ತಯಾರಿಕೆ ಮತ್ತು ಗ್ರಾಮೀಣ ಉದ್ಯೋಗ ಸೃಷ್ಟಿ ಯೋಜನೆಗಳ ಮೇಲೆ ಲಕ್ಷ್ಯ ಕೇಂದ್ರೀಕರಿಸಲು, **'ಗುಂಪು ಅಭಿವೃದ್ಧಿ ಯೋಜನೆ'** ಹಾಗೂ ಉದ್ಯಮ ಅಭಿವೃದ್ಧಿ, ಸಾಮಾನ್ಯ ಸೌಕರ್ಯಗಳು ಮತ್ತು ಆರ್ಥಿಕತೆಯ ಪ್ರಯೋಜನಗಳು.
- ಕಿರು ಉದ್ದಿಮೆ ಕ್ಷೇತ್ರದಲ್ಲಿ ಸೂಕ್ತವಾದ ಮಹಿಳಾ ಉದ್ಯಮಶೀಲತೆಯನ್ನು ಬೆಳೆಸಲು, ಗ್ರಾಮೀಣ ತರಬೇತಿ ಕೌಶಲ್ಯಮಟ್ಟದ ಹೆಚ್ಚಳಕ್ಕಾಗಿ ಸುಧಾರಿತ ತಂತ್ರಜ್ಞಾನದ ಅಳವಡಿಕೆಯ ಕಾರ್ಯಕ್ರಮಗಳನ್ನು ಆರಂಭಿಸಲಾಗಿದೆ.
- ಗ್ರಾಮ ಪಂಚಾಯತಿಗಳ ಮೂಲಕ, ಆಧುನಿಕ ಗ್ರಾಮೀಣ ಕಿರು ಮನೆಗಳ ನಿರ್ಮಾಣ.
- ಗ್ರಾಮೀಣ ಮಹಿಳೆಯರು ಉತ್ಪಾದಿಸಿದ ಕೃಷಿಯೇತರ ಉತ್ಪನ್ನಗಳ ಮಾರಾಟ ವ್ಯವಹಾರದಲ್ಲಿ ನಿರತವಾಗಿರುವ ಸಂಸ್ಥೆಗಳಿಗೆ, ಸಾಲ ಸಂಬಂಧಿತ ಉತ್ತೇಜನ/ನೆರವು.

## ಗ್ರಾಮೀಣ ಉದ್ಯೋಗದ ಮೂಲಕ ದಾರಿದ್ರ್ಯ ನಿವಾರಣೆ

- ಗ್ರಾಮೀಣ ಪ್ರದೇಶದಲ್ಲಿ, ನಿರುದ್ಯೋಗಿ ಯುವಕರಿಗಾಗಿ ಉದ್ಯೋಗ ಸೃಷ್ಟಿ. ಗ್ರಾಮೀಣಾಭಿವೃದ್ಧಿ ಯೋಜನೆಗಳು ಮತ್ತು ಗ್ರಾಮೀಣಾಭಿವೃದ್ಧಿ ಸ್ವಯಂ ಉದ್ಯೋಗ ಸಂಸ್ಥೆಗಳ ಮುಖಾಂತರ ಗ್ರಾಮೀಣ ಜನರ ಸಾಮರ್ಥ್ಯ ನಿರ್ಮಾಣ.
- ಸ್ವ ಸಹಾಯ ಗುಂಪುಗಳಿಗೆ ಮಾರುಕಟ್ಟೆ ಉಪಕ್ರಮಗಳ ಮೂಲಕ ಲಘು ಉದ್ದಿಮೆಗಳು.
- ಸ್ವಸಹಾಯ ಗುಂಪುಗಳಿಗೆ ಮಾರುಕಟ್ಟೆಯ ಸೌಕರ್ಯ ಒದಗಿಸುವ ಮುಖಾಂತರ ಮಾರಾಟಕ್ಕೆ ಅವಕಾಶ.
- ಸ್ವಸಹಾಯ ಗುಂಪುಗಳ ಮೂಲಕ, ಮಹಿಳಾ ಸಬಲೀಕರಣ.
- ಕೈಮಗ್ಗ ನೇಕಾರರ 'ಗುಂಪು ಪದ್ಧತಿ'ಯಲ್ಲಿ, ಹಣಕಾಸು ಸೌಲಭ್ಯ ನೀಡಲು ಕ್ರಮ.
- ಬಿದಿರು/ಬೆತ್ತ ಅಭಿವೃದ್ಧಿ.
- ಔಷಧೀಯ ಸಸ್ಯಗಳು/ಗಿಡಮೂಲಿಕೆಗಳ ಬೆಳವಣಿಗೆ.
- ಲಘು ಮತ್ತು ಕೃಷಿ ಉತ್ಪನ್ನ ಸಂಸ್ಕರಣಾ ಉದ್ದಿಮೆ.
- ಕೃಷಿ ಕ್ಷೇತ್ರದಲ್ಲಿ ಸಂಭವನೀಯ ಅಪಾಯ ನಿವಾರಣಾ ಬಂಡವಾಳ.
- ಬಂಡವಾಳ ವಿನಿಯೋಜನೆ ಸಾಲ ಹೆಚ್ಚಿಸಲು, ನೂತನ ಕೃಷಿಯ ಬಳಕೆ.

## ಆಹಾರ ಭದ್ರತೆ

- ಉತ್ತಮ ಪೈರು ಸಂಶೋಧನೆಯ ತಂತ್ರದ ಜೊತೆಗೆ, ಉತ್ತಮ ಲಾಭಾಂಶ ಹಾಗೂ ಬೆಲೆ ಕುಸಿತದ ಗಂಡಾಂತರದಿಂದ ಪಾರಾಗುವಿಕೆಯನ್ನು ದೃಢಪಡಿಸಲು ರೈತ ಸಂಘಟನೆಗಳು ಸಂಕಲನಕಾರರ ಪಾತ್ರವಹಿಸಿ, ಕ್ಷೇತ್ರಮಟ್ಟದಲ್ಲಿ ತಂತ್ರಜ್ಞಾನದ ಪ್ರಸಾರವನ್ನು ಸಾಧ್ಯಗೊಳಿಸುತ್ತದೆ.
- ಪರಂಪರಾಗತ ಧಾನ್ಯ ಕಣಜದಲ್ಲಿ ಸಾಮೂಹಿಕ ಧಾನ್ಯ ಉಳಿತಾಯಕ್ಕೆ ಉತ್ತೇಜನ ನೀಡುವ ಮೂಲಕ ಧಾನ್ಯ ಬ್ಯಾಂಕ್ ಯೋಜನೆಯು ಬುಡಕಟ್ಟು ಜನಾಂಗ ಮತ್ತು ದುರ್ಬಲ ವರ್ಗಗಳ ಜನರಿಗೆ ಆಹಾರ ಭದ್ರತೆಯನ್ನು ಖಚಿತಪಡಿಸುತ್ತದೆ.
- ಜಲಾನಯನ ಅಭಿವೃದ್ಧಿ, ಮಣ್ಣು ಹಾಗೂ ಜಲನಿರ್ವಹಣೆಯಲ್ಲಿ ಜಲ ಕೊಯ್ಲು, ಮಣ್ಣು ಸವಕಳಿ ತಡೆ/ಭೂಸಾರ ಸಂರಕ್ಷಣೆ, ನಾಶವಾಗುವ ಭೂ ಸಂಪನ್ಮೂಲಗಳ ಮರುಸ್ಥಾಪನೆಗೆ ಆದ್ಯತೆ ನೀಡಲಾಗುತ್ತದೆ. ಜಲಾನಯನ ಅಭಿವೃದ್ಧಿಯಲ್ಲಿ 'ಪರ್ವತದಿಂದ ಕಣಿವೆಗೆ' ನೀತಿಯನ್ನು ದೃಢಪಡಿಸಲಾಗಿದೆ. ಅದರಲ್ಲಿ ಮಹಿಳೆಯರನ್ನೂ ಸಹ ಸೇರ್ಪಡಿಸಲಾಗಿದೆ.
- ರೈತರು ಮತ್ತು ಕೈಮಗ್ಗ ನೇಕಾರರಿಗೆ ಕಡಿಮೆ ಬಡ್ಡಿ ದರದಲ್ಲಿ, ಸಾಲ-ಸೌಲಭ್ಯ ನೀಡಬೇಕಾಗುತ್ತದೆ.
- ಸಾಲ-ಸೌಲಭ್ಯ ಹಾಗೂ ಇತರ ಬೆಂಬಲ ಸೇವೆಗಳನ್ನು ಸುನಿಶ್ಚಿತಗೊಳಿಸಲು ರೈತಮಿತ್ರ ಸಂಘಗಳು ಸ್ವಸಹಾಯ ಗುಂಪುಗಳಾಗಿ ಕಾರ್ಯನಿರ್ವಹಿಸುತ್ತವೆ.
- ಉತ್ತಮ ಸಾಲ ಶಿಸ್ತು, ಎತ್ತುವಳಿ/ಸಂಗ್ರಹಣೆ ಮತ್ತು ನಿರ್ದಿಷ್ಟ ವಸ್ತುಗಳ ಮಾರಾಟದಲ್ಲಿ ಮಿತವ್ಯಯ ಖಚಿತಪಡಿಸಬೇಕು. ಎಲ್ಲ ಉತ್ಪನ್ನ ಹಾಗೂ ಚಟುವಟಿಕೆಗಳ ಮಾಹಿತಿಯನ್ನು ರೈತ ಸಂಘಗಳು/ಸ್ವಸಹಾಯ ಗುಂಪುಗಳು ಹೊಂದಿರಬೇಕು.
- ಸಮಗ್ರ ಗ್ರಾಮೀಣಾಭಿವೃದ್ಧಿಗಾಗಿ, ಜನರ ಸಹಭಾಗಿತ್ವದೊಂದಿಗೆ ವಾಣಿಜ್ಯ ಬ್ಯಾಂಕುಗಳು ಸಾವಿರಾರು ಗ್ರಾಮಗಳ ವಿಕಾಸ ಪ್ರಕ್ರಿಯೆಯಲ್ಲಿ ಸಹಕರಿಸಬೇಕು.
- ಜಲಕೊಯ್ಲು ಸಂರಚನೆ ಮತ್ತು ಹಂಗಾಮು ನೀರಾವರಿಯನ್ನು ಪ್ರತಿಬಂಧಿಸುವ ಮುಖಾಂತರ ಬುಡಕಟ್ಟು ಜನರಿಗೆ ಸುಸ್ಥಿರ ಜೀವನೋಪಾಯ ಕಲ್ಪಿಸಬೇಕು.

## ಹಣಕಾಸು ಸೌಲಭ್ಯ

- ಗ್ರಾಮೀಣ ಪ್ರದೇಶಗಳಲ್ಲಿ, ರೈತರ ಸಾಲ ಪತ್ರ (KCC), ಸ್ವರೋಜ್‌ಗಾರ್ ಸಾಲ ಪತ್ರಗಳ ಮೂಲಕ ಏಕಗವಾಕ್ಷಿ ಸಾಲ ವಿತರಣೆಗೆ ಪರಿಣಾಮಕಾರಿ ಕ್ರಮಗಳನ್ನು ಕೈಕೊಳ್ಳಲಾಗಿದೆ.

- ಹಣಕಾಸಿನ ಸಂಗ್ರಹಣೆಯಲ್ಲಿ, ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳು, ಸಹಕಾರಿ ಬ್ಯಾಂಕುಗಳು, ವಿಮಾ ಕಂಪನಿಗಳು, ಅಂಚೆ ಕಚೇರಿಗಳು ಹಾಗೂ ಸ್ವಸಹಾಯ ಗುಂಪುಗಳು ಪಾತ್ರವಹಿಸುತ್ತವೆ.
- ಜಿಲ್ಲೆಗಳಲ್ಲಿ ಮಾರ್ಗದರ್ಶಿ ಬ್ಯಾಂಕುಗಳ ಮೂಲಕ, ಹಣಕಾಸಿನ ಸಲಹೆ ಮತ್ತು ಸಾಕ್ಷರತೆಗೆ ಸಹಾಯ ನೀಡಲಾಗುತ್ತದೆ.
- ಸ್ವಸಹಾಯ ಗುಂಪುಗಳು ಹಾಗೂ ಬ್ಯಾಂಕುಗಳ ಜೋಡಣಾ ಕಾರ್ಯಕ್ರಮ. (ಅತಿ ದೊಡ್ಡ ಕಿರು ಸಾಲ ಆಂದೋಲನದ ಕ್ರಿಯಾಶೀಲತೆ).
- ಉತ್ಪಾದನಾ ಸಹಕಾರಿ ಸಂಘಗಳ ರಚನೆ, ರೈತರ ಲಾಭಾಂಶ ಸುಧಾರಣೆಯಲ್ಲಿ 'ರೈತಮಿತ್ರ' ಸಂಘಟನೆಗಳ ಸಕ್ರಿಯ ಪಾತ್ರ.
- ಸ್ವಸಹಾಯ ಗುಂಪುಗಳಿಗಾಗಿ ಪಿಂಚಣಿ ಯೋಜನೆಗಳು (ಕಿರು) ಗ್ರಾಮೀಣ ಕಡುಬಡವರಿಗೆ ವರದಾನವಾಗುತ್ತವೆ.
- ಸುರಕ್ಷಿತ ಹಣ ವರ್ಗಾವಣೆಗೆ ಸಾಮಾನ್ಯವಾದ ತಂತ್ರಜ್ಞಾನ ವೇದಿಕೆ.
- ಭಾರತೀಯ ರಿಜರ್ವ್ ಬ್ಯಾಂಕ್ ಕಾನೂನಿನ ಮೇರೆಗೆ, ಎಲ್ಲ ಬ್ಯಾಂಕ್‌ಗಳಲ್ಲಿ ಸವಲತ್ತು ರಹಿತ ಠೇವಣಿ ಖಾತೆಗಳು.
- ರೈತರು ಮತ್ತು ಸ್ವಸಹಾಯ ಗುಂಪುಗಳಿಗೆ ಕಿರು ವಿಮೆಗಳು ನಷ್ಟಪರಿಹರಿಸಲು ನೆರವು ನೀಡುತ್ತವೆ.
- ಸಣ್ಣ ಉಳಿತಾಯ ಹಾಗೂ ಕಿರು ಹಣ ರವಾನೆ ಮಾಡಲು ಮೊಬೈಲ್ ಫೋನುಗಳನ್ನು ಪ್ರಾಯೋಗಿಕವಾಗಿ ಪರೀಕ್ಷಿಸ ಲಾಗುತ್ತದೆ.

## ಸಾಂಸ್ಥಿಕ ಅಭಿವೃದ್ಧಿ

- ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳಿಗೆ ಮರು ಬಂಡವಾಳಕ್ಕಾಗಿ ವಿಲೀನೀಕರಣ, ಸಾಂಸ್ಥಿಕ ಅಭಿವೃದ್ಧಿ ಉಪಕ್ರಮಗಳ ಮೂಲಕ ಪರಿವರ್ತನಾ ಕಾರ್ಯನೀತಿ.
- ರಾಷ್ಟ್ರೀಯ ಬ್ಯಾಂಕಿಂಗ್ ಸಲಹಾ ಸಂಸ್ಥೆಯ ಮೂಲಕ, ಹೆಚ್ಚಿನ ಮೌಲ್ಯದ ಹಾಗೂ ಅಧಿಕ ಅಪಾಯ ಸಂಭವನೀಯ ಯೋಜನೆಗಳನ್ನು ಗುರುತಿಸುವಿಕೆ ಮತ್ತು ತರಬೇತಿ.
- ಸಹಕಾರಿ ತರಬೇತಿ ಕೇಂದ್ರಗಳ ಮುಖಾಂತರ, ಬ್ಯಾಂಕ್ ಸಿಬ್ಬಂದಿಗೆ ತರಬೇತಿಗಾಗಿ, 'ಸಹಕಾರಿ ಅಭಿವೃದ್ಧಿ ನಿಧಿ'ಯಿಂದ ನೆರವು.
- ಅಲ್ಪಾವಧಿ ಸಹಕಾರಿ ಸಂಸ್ಥೆಗೆ, 'ಪುನಶ್ಚೇತನ ಪ್ಯಾಕೇಜ್' ನೀಡಿಕೆ.
- ಸುಸ್ಥಿರತೆ ಹಾಗೂ ದೃಢತೆಗಾಗಿ 'ಕ್ರಿಯಾ ಯೋಜನೆ' ರೂಪಿಸಿ, ಜಾರಿಗೊಳಿಸಲು ಒಪ್ಪಂದಗಳು.
- ಗ್ರಾಮೀಣ ಪ್ರದೇಶದಲ್ಲಿ ಪರಿಣಾಮಕಾರಿ ಸಾಲ ವಿನಿಯೋಜನೆ ಗಾಗಿ, ವಿಕೇಂದ್ರೀಕೃತ ಜಿಲ್ಲಾ ಸಾಲ ಯೋಜನೆ.
- ಯೋಜನಾ ಮೌಲ್ಯಮಾಪನ ತಂತ್ರಗಳಲ್ಲಿ ತರಬೇತಿ.

## ರೈತರ ಸಾಲ ಪತ್ರ (KCC)

ರೈತರ ಸಾಲ ಪತ್ರ ನೀಡಿಕೆಯ ಪ್ರಧಾನ ಧ್ಯೇಯ, ಅದರ ಮುಖ್ಯಾಂಶಗಳು ಮತ್ತು ಪ್ರಯೋಜನಗಳನ್ನು ಕುರಿತು ಪ್ರತ್ಯೇಕವಾದ ವಿವರಣೆಯ ಅಗತ್ಯವಿದೆ. ಬ್ಯಾಂಕುಗಳಿಗೆ ರಚನಾತ್ಮಕ ಹಾಗೂ ಕ್ರಿಯಾತ್ಮಕ ನೆರವು ನೀಡಲು, ಹಲವಾರು ನೂತನ ಕಾರ್ಯಕ್ರಮ ಗಳನ್ನು ರೂಪಿಸಲಾಗಿದೆ. ಗ್ರಾಮೀಣ ಸಾಲ ನೀಡಿಕೆಯ ಕ್ಷೇತ್ರದಲ್ಲಿ, **'ಕಿಸಾನ್ ಕ್ರೆಡಿಟ್ ಕಾರ್ಡ್'** ಯೋಜನೆಯ ಅನುಷ್ಠಾನವನ್ನು ಕುರಿತು ಕೇಂದ್ರ ಸರ್ಕಾರದ ಅರ್ಥಸಚಿವರು 1998–99ನೇ ಸಾಲಿನ ತಮ್ಮ ಬಜೆಟ್ ಭಾಷಣದಲ್ಲಿ ಉಲ್ಲೇಖಿಸಿದ್ದಾರೆ. ಈ ಕಾರ್ಡುಗಳನ್ನು ಬಳಸಲು ಅನುಕೂಲವಾಗುವಂತೆ, ಬ್ಯಾಂಕುಗಳು ಏಕರೂಪದಲ್ಲಿ ವರ್ತಿಸಲು ನಬಾರ್ಡ್ ಯೋಜನೆಯನ್ನು ರೂಪಿಸಲು ಪ್ರಯತ್ನಿಸಿದೆ.

ಉನ್ನತ ಮಟ್ಟದಲ್ಲಿ, ನಬಾರ್ಡ್ ಕಾರ್ಯಾಚರಣೆಯು ಅದರ ಧ್ಯೇಯೋದ್ದೇಶಕ್ಕೆ ಅನುಸಾರವಾಗಿ ನಡೆದಿರುವಂತೆ ಕಾಣುತ್ತದೆ. ಆದರೆ, ಅತಿ ಸಣ್ಣ ಮಟ್ಟದಲ್ಲಿ ವಾಸ್ತವಿಕತೆಯು ಭಿನ್ನವಾಗಿದೆ. ಸಾಲ ನೀಡಿಕೆಯ ಯೋಜನೆಯನ್ನು ಸಿದ್ಧಗೊಳಿಸುವ ಪ್ರಕ್ರಿಯೆಯಲ್ಲಿ ಸಾಲ ಪಡೆಯುವ ಜನರ ಪಾಲ್ಗೊಳ್ಳುವಿಕೆಯು ಅಗತ್ಯವಾಗಿದೆ. ಅದರಿಂದ, ಸಾಲದ ದುರ್ಬಳಕೆ ಮತ್ತು ಮರು–ಸಂದಾಯದಲ್ಲಿ ಸಂಭವಿಸುವ ಕರ್ತವ್ಯ ಲೋಪವನ್ನು ಕಡಿಮೆ ಮಾಡಲು ಸಾಧ್ಯವಿದೆ. ತಳಮಟ್ಟದ ಸಾಲ ನೀಡಿಕೆಯನ್ನು, ಯಶಸ್ವಿಗೊಳಿಸಲು, ಸಾಲ ಪಡೆಯುವ ಜನರನ್ನು ಸಂಘಟಿಸಬೇಕಾಗುತ್ತದೆ.

ಕಳೆದ ದಶಕದಲ್ಲಿ, ನಬಾರ್ಡ್ ಪಾತ್ರದ ಪರಿಶೀಲನೆ ಮಾಡುವ ಹಾಗೂ ಗ್ರಾಮೀಣ ಜೀವನ ಪರಿವರ್ತನೆಯಲ್ಲಿ, ನಬಾರ್ಡ್‌ದ ಕೊಡುಗೆಯನ್ನು ಕುರಿತು ಕೆಲವು ಸಂಶೋಧಕರು ಸಮೀಕ್ಷೆಗಳನ್ನು ಕೈಕೊಂಡಿದ್ದಾರೆ. ರಾಷ್ಟ್ರಮಟ್ಟದಲ್ಲಿ ಗ್ರಾಮೀಣಾಭಿವೃದ್ಧಿಯ ಬಗೆಗಿನ ನಬಾರ್ಡ್ ಧೋರಣೆ ಮತ್ತು ಕಾರ್ಯಕ್ರಮಗಳ ಮರು–ಪರಿಶೀಲನೆ, ಅದು ಅನುಷ್ಠಾನಗೊಳಿಸಿದ ಪರಿವರ್ತನಶೀಲ ಯೋಜನೆಗಳ ವಿಶ್ಲೇಷಣೆ, ಉದ್ಯೋಗ ಹಾಗೂ ಆದಾಯ ಸೃಷ್ಟಿಯ ದೃಷ್ಟಿಯಿಂದ, ಬಳಕೆ ಮತ್ತು ಮರುಸಂದಾಯದ ಬಗೆಗಿನ ಸಾಲ ಪಡೆದವರ ವರ್ತನೆ, ಸಾಲ ಪಡೆದವರ ಮೇಲೆ ಸಾಲ–ಸೌಲಭ್ಯ ಸಂಬಂಧಿತ ಕಾರ್ಯಕ್ರಮಗಳ ಪರಿಣಾಮದ ಮೌಲ್ಯಮಾಪನ ಇತ್ಯಾದಿ ವಿಷಯಗಳ ಬಗೆಗೆ ವಿಶ್ಲೇಷಣೆ ಮಾಡಲಾಗುತ್ತದೆ. ಪ್ರಚಲಿತ ಸಾಲ ಯೋಜನೆಗಳು ಸದೃಢವಾಗಿ ಬೆಳವಣಿಗೆ ಹೊಂದಲು, ಸಮರ್ಥವಾದ ತಂತ್ರಗಳನ್ನು ಅನುಸರಿಸುವ ಪ್ರಯತ್ನ ಮಾಡಲಾಗುತ್ತದೆ. ❑

# ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ "ಕೃಷಿ ಅರಣ್ಯೀಕರಣ"

– ಹೆಚ್.ಜಿ.ಶಿವಾನಂದಮೂರ್ತಿ, ಭಾ.ಅ.ಸೇ *

ಚನ್ನಗಿರಿ ತಾಲ್ಲೂಕಿನಲ್ಲಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಅಡಿಯಲ್ಲಿ ಸಸಿ ವಿತರಣಾ ಮತ್ತು ಜಮೀನು ಬದುಗಳಲ್ಲಿ ನಾಟಿ ಕಾರ್ಯಕ್ರಮವನ್ನು ಯಶಸ್ವಿಯಾಗಿ ಕೈಗೊಳ್ಳಲಾಯಿತು. ತಮ್ಮ ಹೊಲಗಳಲ್ಲಿ ನಾಟಿ ಮಾಡುವ ಪ್ರತಿ ಸಸಿಗೆ ಯೋಜನೆ ಅಡಿ ಹಣ ದೊರೆಯುವ ಖಾತರಿಯೂ ಸಹ ಸಸಿಗಳನ್ನು ಹಾಳು ಮಾಡದಿರಲು ಕಾರಣವಾಗಿದೆ.

ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ರಾಷ್ಟ್ರದಲ್ಲಿ ಜನರಿಗೆ ಉದ್ಯೋಗ ದೊರಕಿಸುವುದರ ಜೊತೆಗೆ ಸುಸ್ಥಿರ ಅಭಿವೃದ್ಧಿಗೆ ಪೂರಕವಾದ ಕಾರ್ಯಕ್ರಮಗಳನ್ನು ಹಮ್ಮಿಕೊಂಡು, ಸಮಾಜದಲ್ಲಿ ಭದ್ರತೆಗಾಗಿ ಆಸ್ತಿಯನ್ನು ಸೃಷ್ಟಿ ಮಾಡುವ ಮಹತ್ವದ ಯೋಜನೆ. ಯೋಜನೆ ಎಷ್ಟೇ ಮಹತ್ವಾಕಾಂಕ್ಷೆ ಹೊಂದಿದ್ದರೂ ಸಹ ಯೋಜನೆಯ ಉದ್ದೇಶ ಫಲಪ್ರದವಾಗಬೇಕಾದರೆ ಯೋಜನೆಯ ಬಗ್ಗೆ ಇರುವ ಮಾಹಿತಿಯು ಜನ ಸಾಮಾನ್ಯರಿಗೆ ತಲುಪಿದಾಗ ಮಾತ್ರ. ಇಂತಹ ಒಂದು ಉದಾಹರಣೆ ಚನ್ನಗಿರಿ ತಾಲ್ಲೂಕು ಪಂಚಾಯತ್‌ನಲ್ಲಿ 2010–11ನೇ ಸಾಲಿನಲ್ಲಿ ಕೈಗೊಂಡಿರುವ ಕೃಷಿ ಅರಣ್ಯೀಕರಣದ ಯಶಸ್ವಿ ಪ್ರಯೋಗ.

ಭಾರತ ಕೃಷಿ ಪ್ರಧಾನವಾದ ರಾಷ್ಟ್ರವೆಂಬುದು ಎಲ್ಲರಿಗೂ ತಿಳಿದ ವಿಚಾರವೇ ಆಗಿದೆ. ಆದರೆ ಇತ್ತೀಚಿನ ವರ್ಷಗಳಲ್ಲಿ ಕಂಡುಬರುವ ಮಳೆಯ ಅನಿಶ್ಚತೆ ಎಲ್ಲರನ್ನು ಚಿಂತಿಸುವಂತೆ ಮಾಡಿದೆ. ಅನೇಕ ಪಂಚವಾರ್ಷಿಕ ಯೋಜನೆಗಳಿಂದ ಇದುವರೆಗೂ ರಾಷ್ಟ್ರದಲ್ಲಿ ಶೇ. 26 ರಷ್ಟು ಭೂಮಿಯನ್ನು ಮಾತ್ರ ನೀರಾವರಿಗೆ ಒಳಪಡಿಸಲಾಗಿದೆ. ಉಳಿದಂತೆ ಶೇ. 74 ರಷ್ಟು ಕೃಷಿ ಭೂಮಿ ಮಳೆಯನ್ನು ಅವಲಂಭಿಸಿದೆ. ಇದರಿಂದ ದೇಶದಲ್ಲಿ ರೈತರು ಮಳೆಯೊಂದಿಗೆ ಜೂಜಾಟವಾಡಿದಂತಹ ಅನುಭವವನ್ನು ಹೊಂದಿ ಅನೇಕ ರೈತರು ಆತ್ಮಹತ್ಯೆಯ ದಾರಿಯನ್ನು ಹಿಡಿದಿರುವುದು ತೀರ ಶೋಚನೀಯ ವಿಚಾರ ಈ ದಿಸೆಯಲ್ಲಿ ರೈತರು ಸಹ ಯೋಚಿಸಿ ಪ್ರಕೃತಿ ವಿಕೋಪಗಳನ್ನು ಸಮರ್ಥವಾಗಿ ಎದುರಿಸಲು ಸನ್ನದ್ದರಾಗಬೇಕಿದೆ.

ಇಂದು ರಾಷ್ಟ್ರದಲ್ಲಿ ಅರಣ್ಯದ ಪ್ರಮಾಣ ಅನೇಕ ಕಾರಣಗಳಿಂದ ಕಡಿಮೆಯಾಗಿದೆ, ಇದರಿಂದ ಪ್ರಕೃತಿಯಲ್ಲಿ ಏರು–ಪೇರುಗಳುಂಟಾಗಿರುವುದು ಎಲ್ಲರ ಗಮನಕ್ಕೆ ಸಹ ಬಂದಿದೆ. ಪ್ರಕೃತಿಯ ಅಸಮತೋಲನದಿಂದ ಸರಿಯಾದ ಸಮಯಕ್ಕೆ ಮಳೆ ಬಾರದೆ ಇರುವುದು, ಬಂದರೂ ಸಹ ಏಕಕಾಲದಲ್ಲಿ ಸುರಿದು ಅತಿವೃಷ್ಟಿ ಸೃಷ್ಟಿ ಮಾಡಿ ಸಮಾಜದ ಆರ್ಥಿಕ ಪರಿಸ್ಥಿತಿಯ ಮೇಲೆ ಗಂಭೀರ ಪರಿಣಾಮವನ್ನು ಉಂಟು ಮಾಡಿದೆ. ಪ್ರಕೃತಿಯಲ್ಲಾಗಿರುವ ಬದಲಾವಣೆಗಳಿಗೆ ವಿಶ್ವ ವ್ಯಾಪ್ತಿ ಚಿಂತಿಸಿ, ಸ್ಥಳೀಯವಾಗಿ ಕಾರ್ಯೋನ್ಮುಖರಾಗುವ ಅವಶ್ಯಕತೆಯಿದೆ. ಇಂತಹ ಕಾರ್ಯಗಳಲ್ಲಿ ಬಹಳ ಮುಖ್ಯವಾದ ಕೆಲಸವೆಂದರೆ "ಕೃಷಿ

* ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು, (ವನ್ಯಜೀವಿ) 2ನೇ ಮಹಡಿ, ಅರಣ್ಯಭವನ, ಮಲ್ಲೇಶ್ವರಂ 18ನೇ ಕ್ರಾಸ್, ಬೆಂಗಳೂರು–3.

ಅರಣ್ಯೀಕರಣ'' ರೈತರು ತಮ್ಮ ಜಮೀನುಗಳಲ್ಲಿ ಗಿಡ-ಮರಗಳನ್ನು ಬೆಳೆಸುವುದಾಗಿದೆ. ಕೃಷಿಗೆ ಯೋಗ್ಯವಲ್ಲದ ಜಮೀನಿನಲ್ಲಿ ದೀರ್ಘಕಾಲಿಕವಾಗಿರುವ ಮರಗಳನ್ನು ಬೆಳೆಯುವುದು. ಕೃಷಿ ಬದುಗಳ ಮೇಲೆ ತಮಗೆ ಉಪಯೋಗವಾಗುವಂತಹ, ಆದಾಯ ತರುವಂತಹ ಮರಗಳನ್ನು ಬೆಳೆಸುವುದಾಗಿದೆ. ಒಂದು ಮಾತಿನಲ್ಲಿ ಹೇಳುವುದಾದರೆ ''ಮರಗಳು ರೈತರಿಗೆ ಬರಗಾಲದಲ್ಲಿ ವರವಾಗಿ ಪರಿಣಮಿಸಲಿವೆ'' ಮರಗಳು ಖಾಯಂ ಠೇವಣಿಯಂತೆ ರೈತರ ಸಂಕಷ್ಟದಲ್ಲಿ ಹಣಕಾಸಿನ ನೆರವನ್ನು ನೀಡಿ, ಆತ್ಮಹತ್ಯೆಯಂತಹ ಸಂದರ್ಭಗಳನ್ನು ನಿಭಾಯಿಸಲು ಸಹಕಾರಿಯಾಗಿದೆ. ಇಲ್ಲಿ ರೈತರು ತಮ್ಮ ಕೃಷಿ ಬೆಳೆಗೆ ನೀಡುವ ಗಮನದಲ್ಲಿ ಅಲ್ಪ ಗಮನವನ್ನು ಮರ ಬೆಳೆಯುವಲ್ಲಿ ನೀಡಿದರೆ, ಅವುಗಳನ್ನು ಕೆಲವಾರು ವರ್ಷ ಪೋಷಣೆ-ಪಾಲನೆ ಮಾಡಿದರೆ, ಅವುಗಳಿಂದ ಹಿಡಿಗಂಟನ್ನು ಪಡೆದು, ತಮ್ಮ ಕಷ್ಟವನ್ನು ನಿವಾರಿಸಿಕೊಳ್ಳಬಹುದು. ಇದಕ್ಕೆ ನಿದರ್ಶನವೆಂದರೆ ಚನ್ನಗಿರಿ ತಾಲ್ಲೂಕಿನಲ್ಲಿ ಕೈಗೊಂಡಿರುವ ಕೃಷಿ ಅರಣ್ಯೀಕರಣದ ಯಶಸ್ವಿ ಪ್ರಯೋಗ ಇದರಿಂದ ಎರಡು ರೀತಿಯ ಪ್ರಯೋಜನವಾಗಿದೆ ಅಂದರೆ ಯೋಜನೆಯ ಯಶಸ್ವಿ ಅನುಷ್ಠಾನ ಹಾಗೂ ರೈತರ ಸಂಕಷ್ಟಗಳನ್ನು ನಿವಾರಿಸುವಲ್ಲಿ ಸಹಕಾರಿ ಯಾಗಿರುವುದು.

ಚನ್ನಗಿರಿ ತಾಲ್ಲೂಕು ಪಂಚಾಯತ್‌ನ ಕಾರ್ಯನಿರ್ವಾಹಕ ಅಧಿಕಾರಿ ಶ್ರೀ ಉಜ್ಜನಪ್ಪನವರು - ಜನರಲ್ಲಿದ್ದ ಅರಿವಿನ ಕೊರತೆಯನ್ನು ಪ್ರಚಾರ ಮಾಡುವುದರ ಮುಖಾಂತರ ಅಳಿಸಿ, ಜನರನ್ನು ಉತ್ತೇಜಿಸಿ, ಗ್ರಾಮ ಪಂಚಾಯ್ತಿಗಳು ಸಕ್ರಿಯವಾಗಿ ಯೋಜನೆಯ ಅನುಷ್ಠಾನದಲ್ಲಿ ತೊಡಗಿಸಿಕೊಳ್ಳಲು ಅನುವು ಮಾಡಿದ್ದರ ಫಲವಾಗಿ 61 ಗ್ರಾಮ ಪಂಚಾಯ್ತಿಗಳು ಒಟ್ಟು 9.50 ಲಕ್ಷ ಸಸಿಗಳನ್ನು ಬೆಳೆಸಿ 8751 ರೈತರಿಗೆ ಒಟ್ಟು 814141 ಸಸಿಗಳನ್ನು ವಿತರಿಸಿ, ಬೆಳೆಯುವಂತೆ ಮಾಡಿರುವುದು ಪ್ರಶಂಸನೀಯವಾಗಿದೆ.

ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಲ್ಲಿ ಅರಣ್ಯೀಕರಣಕ್ಕೆ ಒಟ್ಟಾರೆ ಯೋಜನೆಯ ಕನಿಷ್ಠ ಶೇ. 20ಕ್ಕೆ ಕಡಿಮೆಯಿಲ್ಲದಂತೆ ಪ್ರಾಧಾನ್ಯತೆ ನೀಡಬೇಕೆಂಬ ನಿಯಮವಿದ್ದು ಅದರ ಸದುಪಯೋಗ ಪಡೆದು ಹೆಚ್ಚು ಸಂಖ್ಯೆಯಲ್ಲಿ ಬೇಡಿಕೆಯಿರುವ ಸಸಿಗಳನ್ನು ಬೆಳಸಿ ವಿತರಿಸಿ ನಾಟಿಮಾಡುವ ಕಾರ್ಯಕ್ರಮವನ್ನು ರೂಪಿಸಿ ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ತಂದಿರುವುದು.

### ಪೂರ್ವ ಸಿದ್ಧತೆ ;

### ಸಸಿ ಬೆಳೆಸುವುದು:

ತಾಲ್ಲೂಕು ಪಂಚಾಯ್ತಿ ಕಾರ್ಯನಿರ್ವಾಹಕ ಅಧಿಕಾರಿಗಳ ನೇತೃತ್ವದಲ್ಲಿ ವಲಯ ಅರಣ್ಯ ಅರಣ್ಯಾಧಿಕಾರಿಗಳ (ಚನ್ನಗಿರಿ ಪ್ರಾದೇಶಿಕ, ಮಾವಿನಕಟ್ಟೆ ಪ್ರಾದೇಶಿಕ, ಚನ್ನಗಿರಿ ಸಾಮಾಜಿಕ, ಮತ್ತು ಜಲಾನಯನ ಅಭಿವೃದ್ಧಿ ವಲಯ) ತಾಲ್ಲೂಕಿನ 61 ಗ್ರಾಮ ಪಂಚಾಯತಿಗಳ ಅಭಿವೃದ್ಧಿ ಅಧಿಕಾರಿಗಳು / ಕಾರ್ಯದರ್ಶಿಗಳ ಒಂದು ಪೂರ್ವಭಾವಿ ಸಿದ್ಧತೆ ಸಭೆ ನಡೆಸಲಾಯಿತು. ಸದರಿ ಸಭೆಯಲ್ಲಿ ನಿರ್ಧರಿಸಿದಂತೆ ಪ್ರತಿ ಗ್ರಾಮ ಪಂಚಾಯ್ತಿಗೆ ಸರಾಸರಿ 15000 ದಂತೆ 61 ಗ್ರಾಮ ಪಂಚಾಯ್ತಿಗೆ ಬೇಕಾಗುವ 9.50 ಲಕ್ಷ ಸಸಿಗಳನ್ನು ಇರುವ ನಾಲ್ಕೂ ವಲಯಗಳಲ್ಲಿ ಬೆಳೆಸಲು ಕ್ರಮವಹಿಸಲಾಯಿತು.

### ಸಸಿ ವಿತರಣೆ ಪದ್ಧತಿ:

- ರೈತರಿಗೆ ಸುಲಭವಾಗಿ ಸಸಿಗಳು ದೊರೆಯುವಂತಾಗಲು ಸಸಿ ವಿತರಣೆ ಅಧಿಕಾರ ವಿಕೇಂದ್ರೀಕೃತಗೊಳಿಸಿ ಗ್ರಾಮ ಪಂಚಾಯ್ತಿಗಳಿಗೆ ವಹಿಸಲಾಯಿತು.

- 61 ಗ್ರಾಮ ಪಂಚಾಯ್ತಿಗಳನ್ನು ಇರುವ 4 ಸಸ್ಯ ಕ್ಷೇತ್ರಗಳಿಗೆ ಹಂಚಿಕೆ ಮಾಡಿ, ಲಭ್ಯವಿರುವ ಸಸಿಗಳ ಬಗ್ಗೆ, ಜಮೀನು ವಿಸ್ತೀರ್ಣಕ್ಕೆ ಅನುಗುಣವಾಗಿ ರೈತರಿಗೆ ಕೊಡಲಾಗುವ ಸಸಿಗಳ ಸಂಖ್ಯೆಯ ಬಗ್ಗೆ, ನಿಯಮಾವಳಿಗಳ ಸುತ್ತೋಲೆ ಹೊರಡಿಸಿ ಕರಪತ್ರದ ಮೂಲಕ ವ್ಯಾಪಕ ಪ್ರಚಾರ ನೀಡಲಾಯಿತು.

- ಗ್ರಾಮ ಪಂಚಾಯ್ತಿ ಮೂಲಕ ಸಸಿ ಪಡೆಯಲು ರಹದಾರಿ (ಪರ್ಮಿಟ್) ನೀಡುವ ಪದ್ಧತಿ ಜಾರಿಗೊಳಿಸಲಾಯಿತು. ರಹದಾರಿಯಲ್ಲಿ ಸಸಿ ಪಡೆದ ರೈತರ ಹೆಸರು, ಗ್ರಾಮ, ಗ್ರಾಮ ಪಂಚಾಯ್ತಿ, ಜಮೀನಿನ ವಿಸ್ತೀರ್ಣ, ಜಾಬ್ ಕಾರ್ಡ್ ಸಂಖ್ಯೆ, ಪಡೆದ ಸಸಿಗಳ ಜಾತಿ, ಸಂಖ್ಯೆ ಇತ್ಯಾದಿ ಎಲ್ಲಾ ವಿವರ ಹೊಂದಿದ್ದು ದ್ವಿಪ್ರತಿಯಲ್ಲಿ ಇರುತ್ತದೆ.

- ರೈತರು ಗ್ರಾಮ ಪಂಚಾಯ್ತಿಗೆ ಜಮೀನಿನ ಪಹಣಿ ಪ್ರತಿ ನೀಡಿ ಸಸಿ ಪಡೆಯಲು ರಹದಾರಿ ಮೂಲ ಪ್ರತಿ ಪಡೆಯುತ್ತಾರೆ. ಅದನ್ನು ಹಂಚಿಕೆ ಮಾಡಲಾದ ಸಸ್ಯ ಕ್ಷೇತ್ರದಲ್ಲಿ ಕೊಟ್ಟು ಸಸಿ ಪಡೆಯುತ್ತಾರೆ.

### ರಹದಾರಿ ನೀಡುವುದರಿಂದಾದ ಅನುಕೂಲಗಳು:

- ಪಹಣಿ ನೀಡುವ ಮೂಲಕ ಗ್ರಾಮ ಪಂಚಾಯ್ತಿಯಲ್ಲಿಯೇ ಸಸಿಗಳಿಗೆ ರಹದಾರಿಯು ದೊರೆಯುವುದರಿಂದ ಅರಣ್ಯ ವಲಯ ಕಛೇರಿಗೆ ಜನರು ಅಲೆಯುವುದು ತಪ್ಪಿತ್ತು.
- ರಹದಾರಿಯಲ್ಲಿ ಸಸಿ ಪಡೆದ ರೈತರ ಹೆಸರು, ಗ್ರಾಮ, ಗ್ರಾಮ ಪಂಚಾಯ್ತಿ, ಜಮೀನಿನ ವಿಸ್ತೀರ್ಣ, ಜಾಬ್ ಕಾರ್ಡ್ ಸಂಖ್ಯೆ, ಇತ್ಯಾದಿ ಎಲ್ಲಾ ವಿವರ ಹೊಂದಿರುವುದರಿಂದ ಸಸಿ ವಿತರಣೆ ಬಗ್ಗೆ ನಿಯಂತ್ರಣವಿಡಲು, ನಾಟಿಮಾಡಿರುವುದನ್ನು ಪರಿಶೀಲಿಸಲು ಮತ್ತು ಕ್ರೋಢೀಕೃತ ವರದಿ ಸಿದ್ಧಪಡಿಸಲು ಅನುಕೂಲವಾಯಿತು.

### ಸಸಿ ವಿತರಣೆಗೆ ರೂಪಿಸಿದ ನಿಯಮಾವಳಿಗಳು:

ಮಹಾತ್ಮಗಾಂಧೀ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಅಡಿಯಲ್ಲಿ ರೈತರಿಗೆ ಪಾರದರ್ಶಕವಾಗಿ ಮತ್ತು ಶಿಸ್ತು ಬದ್ಧವಾಗಿ ಹಂಚಿಕೆ ಮಾಡಲು ಹಾಗೂ ಯೋಜನೆಯ ಲಾಭವನ್ನು ಪ್ರತಿ ರೈತರೂ ಹೊಂದುವಂತೆ ನಿಯಮಾವಳಿಗಳನ್ನು ರೂಪಿಸಿ ಪ್ರಕಟಣೆಯಲ್ಲಿ ತಿಳಿಸಲಾಯಿತು.

ಈ ಕೆಳಗಿನಂತೆ ನಿಯಮಾವಳಿಗಳನ್ನು ರೂಪಿಸಲಾಯಿತು.

- ರೈತರು ತಮ್ಮ ಸ್ವಂತ ಹಿಡುವಳಿ ಜಮೀನಿನಲ್ಲಿ ಮಾತ್ರ ಸಸಿ ನೆಡುವ ಕಾರ್ಯಕ್ರಮ ಕೈಗೊಳ್ಳುವುದು.
- ಪ್ರತಿ ಎಕರೆಗೆ 40 ಸಸಿಗಳಂತೆ ಪ್ರತಿ ರೈತರಿಗೆ ಗರಿಷ್ಟ 100 ಸಸಿಗಳಿಗೆ ಮೀರದಂತೆ ಉಚಿತವಾಗಿ ಸಸಿಗಳನ್ನು ಕೊಡಲಾಗುವುದು. (ಎಲ್ಲರಿಗೂ ಸಸಿ ಸಿಗಲಿ ಎಂಬ ಉದ್ದೇಶದಿಂದ 100 ಸಸಿಗೆ ಮಿತಗೊಳಿಸಲಾಯಿತು)
- ಸಸಿ ನೆಡಲು ಇಚ್ಚಿಸುವ ರೈತರು ಉದ್ಯೋಗ ಖಾತ್ರಿ ಯೋಜನೆಯಡಿ ಜಾಬ್ ಕಾರ್ಡ್ ಹೊಂದಿರಬೇಕು. (ಹೀಗೆ ನಿಯಮವಿದ್ದರೂ ಅದನ್ನು ಸಡಿಲಿಸಿ ಜಾಬ್ ಕಾರ್ಡ್ ಇಲ್ಲದವರಿಗೂ ಸಸಿ ಕೊಡಲಾಗಿದೆ. ಆದರೆ ಅಂತಹವರಿಗೆ ಗುಂಡಿ ತೆಗೆದ ಹಾಗೂ ನಾಟಿ ಮಾಡಿದ ಬಾಬ್ತು ಕೂಲಿ ಕೊಡಲಾಗಿಲ್ಲ)
- ಸಸಿ ನೆಡಲು ಇಚ್ಚಿಸುವ ರೈತರು ತಮ್ಮ ಜಮೀನಿನ ಪಹಣಿಯೊಂದಿಗೆ ಗ್ರಾಮ ಪಂಚಾಯತಿಯಲ್ಲಿ ಅರ್ಜಿ ಸಲ್ಲಿಸಬೇಕು. (ನಂತರ ಪ್ರಕ್ರಿಯೆ ಸರಳಗೊಳಿಸಲು ಪ್ರತ್ಯೇಕ ಅರ್ಜಿ ಪಡೆಯದೇ ಪಹಣಿಯನ್ನೆ ಪರಿಗಣಿಸಿ ಸಸಿ ರಹದಾರಿ ನೀಡಿದೆ)
- ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ ಅರ್ಜಿ ಸಲ್ಲಿಸಿದ ರೈತರು ಅರಣ್ಯ ಸಸ್ಯಕ್ಷೇತ್ರದಿಂದ ಸಸಿ ಸಾಗಾಣಿಕೆ ಮಾಡಿ 2 x 2 ಅಡಿ ಅಳತೆಯ ಗುಂಡಿ ತೋಡಿ ಸಸಿಗಳನ್ನು ನೆಟ್ಟು ಸಂರಕ್ಷಣೆ ಮಾಡಿಕೊಂಡು ಪ್ರತಿ ಸಸಿಗೆ ಅಂದಾಜು ರೂ. 37.00ಗಳನ್ನು ಅವರ ಖಾತೆಗೆ ಗ್ರಾಮ ಪಂಚಾಯತಿಯಿಂದ ಜಮಾ ಮಾಡಲಾಗುವುದು (ವಾಸ್ತವವಾಗಿ ಗುಂಡಿ ತೆಗೆದು, ನಾಟಿ ಮಾಡಿದ ಬಾಬ್ತು ಪ್ರತಿ ಸಸಿಗೆ 33.00 ರೂ. ಕೊಡಲಾಗಿದೆ. ಸಾಸರ್ ಬರಾವು, ವೀಡಿಂಗ್, ಹೋಯಿಂಗ್ ಇತ್ಯಾದಿ ಹೊರತುಪಡಿಸಿ)

### ಪ್ರಚಾರಕ್ಕೆ ಬಳಸಿದ ತಂತ್ರಗಳು:

ಇಷ್ಟೆಲ್ಲಾ ವ್ಯವಸ್ಥಿತವಾಗಿ ಸಸಿಗಳ ಹಂಚಿಕೆ ಕಾರ್ಯಕ್ರಮವನ್ನು ರೂಪಿಸಿದ ಮೇಲೆ ಅದರ ಸೌಲಭ್ಯವನ್ನು ರೈತರು ಪಡೆಯಲು ಪ್ರಚಾರ ಕೈಗೊಳ್ಳುವುದು ಅತಿ ಅವಶ್ಯವಾಯಿತು. 61 ಗ್ರಾಮ ಪಂಚಾಯಿತಿಗಳಲ್ಲಿ ಪ್ರತಿಯೊಬ್ಬ ಸಾಮಾನ್ಯ ರೈತನಿಗೂ ಸಹ ಸಸಿ ವಿತರಣೆ ಕಾರ್ಯಕ್ರಮ ತಲುಪುವಂತೆ ಯಶಸ್ವಿಯಾಗಿ ಪ್ರಚಾರ ಕೈಗೊಳ್ಳಲಾಯಿತು. ಒಂದು ನರ್ಸರಿಗೆ ಸಂಬಂಧಿಸಿದಂತೆ ಬರುವ ಹದಿನಾರು ಗ್ರಾಮ ಪಂಚಾಯತಿಗಳ ಅಭಿವೃದ್ದಿ ಅಧಿಕಾರಿಗಳು, ಕಾರ್ಯದರ್ಶಿಗಳು ಹಾಗೂ ಅಧ್ಯಕ್ಷರ ಪೂರ್ವಭಾವಿ ಸಭೆಯನ್ನು ಕರೆದು ಸಸಿಗಳನ್ನು ಸ್ವ-ಇಚ್ಛೆಯಿಂದ ಮುಂದೆ ಬರುವ ರೈತರಿಗೆ ಉಚಿತವಾಗಿ ನೀಡುವುದಾಗಿಯೂ ಪ್ರತಿ ಪಂಚಾಯ್ತಿಯಿಂದ 30 ರಿಂದ 50 ಜನ ಆಸಕ್ತರನ್ನು ಗುರುತಿಸಿ ಕನಿಷ್ಟ ಮೂರು ಟ್ರಾಕ್ಟರ್‌ನೊಂದಿಗೆ ಬರುವಂತೆ ನೀಡಿದ ಸೂಚನೆ ಅನುಸಾರ ಬಸವರಾಜಪುರ ಸಸ್ಯ ಕ್ಷೇತ್ರದಲ್ಲಿ ದಿನಾಂಕ : 3-7-2010 ರಂದು ಏರ್ಪಡಿಸಲಾಗಿದ್ದ ಸಸಿ ವಿತರಣಾ ಉದ್ಘಾಟನಾ ಕಾರ್ಯಕ್ರಮದಲ್ಲಿ ಬಂದಿದ್ದ 16 ಗ್ರಾಮ ಪಂಚಾಯ್ತಿಗಳ 40 ಹಳ್ಳಿಗಳ ಸುಮಾರು 500 ಜನ ರೈತರು 43 ಟ್ರಾಕ್ಟರ್ ಹಾಗೂ ಗೂಡ್ಸ್ ರಿಕ್ಷಾಗಳಲ್ಲಿ ಸಸಿಗಳನ್ನು ಸಾಗಿಸಿದರು. ಒಂದೇ ದಿನದಲ್ಲಿ 56300 ಸಸಿಗಳನ್ನು ವಿತರಣೆ ಮಾಡಲಾಯಿತು. ಹೀಗೆ ಉತ್ತಮ ಗುಣಮಟ್ಟದ ಬೆಲೆಬಾಳುವ ಸಾಗ, ಸಿಲ್ವರ್ ಓಕ್, ಹೊಂಗೆ ಸಸಿಗಳನ್ನು ತಾಲ್ಲೂಕಿನ ಮೂಲೆ ಮೂಲೆಗೆ ಹೊತ್ತೊಯ್ದ ವಾಹನಗಳನ್ನು ಕಂಡ ಜನ "ಸಸಿಗಳನ್ನು ಎಲ್ಲಿಂದ ತಂದಿರಿ? ಹೇಗೆ ತಂದಿರಿ? ಎಲ್ಲಿ ಸಿಗುತ್ತವೆ" ಎಂಬ ಪ್ರಶ್ನೆಗೆ ಒಳಗಾದರು. "ಗ್ರಾಮ ಪಂಚಾಯ್ತಿಯಲ್ಲಿ ಪಹಣಿ ಕೊಟ್ಟರೆ

ಸಸಿಗಳ ರಹದಾರಿ ಸಿಗುತ್ತದೆ. ಆ ರಹದಾರಿ ನರ್ಸರಿಯಲ್ಲಿ ಹಾಜರುಪಡಿಸಿದರೆ ಸಸಿ ಕೊಡುತ್ತಾರೆ'' ಎಂಬ ಉತ್ತರ ಪಡೆದರು. ಹೀಗೆ ಸಸಿಗಳು ದೊರೆಯುವ ಸ್ಥಳ ಪಡೆಯುವ ವಿಧಾನ ತಾಲ್ಲೂಕಿನಾದ್ಯಂತ ಹೂವಿನ ಪರಿಮಳದಂತೆ ನಿರಾಯಾಸವಾಗಿ ಹರಡಿತು. ಈ ರೀತಿಯಾಗಿ ವ್ಯಾಪಕ ಪ್ರಚಾರ ದೊರೆಯಿತು. ಇಷ್ಟಲ್ಲದೆ ಆಯಾ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಡಂಗೂರ ಸಾರುವುದರ ಮೂಲಕ ಕರ ಪತ್ರ ಹಂಚುವುದರ ಮೂಲಕ ಹೆಚ್ಚಿನ ಪ್ರಚಾರ ಕೈಗೊಳ್ಳಲಾಯಿತು.

## ಸಾಧ್ಯವಾದದ್ದು:

ಇದೆಲ್ಲದರ ಫಲಶೃತಿಯಿಂದಾಗಿ ಮೂರೇ ವಾರಗಳ ಅವಧಿಯಲ್ಲಿ ತಾಲ್ಲೂಕಿನ ಎಲ್ಲ 61 ಗ್ರಾಮ ಪಂಚಾಯ್ತಿಯ ಸುಮಾರು 250 ಗ್ರಾಮಗಳಲ್ಲಿ 8751 ಫಲಾನುಭವಿಗಳಿಗೆ ಒಟ್ಟು 8.14 ಲಕ್ಷ ಸಸಿಗಳನ್ನು ವಿತರಿಸಿ ನಾಟಿ ಮಾಡುವಂತೆ ನೋಡಿಕೊಂಡು ಆ ಪೈಕಿ ಜಾಬ್ ಕಾರ್ಡ್ ಇದ್ದವರಿಗೆ 119.18 ಲಕ್ಷ ರೂ.ಗಳನ್ನು ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಅಡಿಯಲ್ಲಿ ಕೂಲಿ ರೂಪದಲ್ಲಿ ಆಯಾ ಗ್ರಾಮ ಪಂಚಾಯ್ತಿಯ ಮೂಲಕ ಪಾವತಿಸಲು ಸಾಧ್ಯವಾಗಿದೆ. ಈ ಮೂಲಕ ಚನ್ನಗಿರಿ ತಾಲ್ಲೂಕಿನಲ್ಲಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಅಡಿಯಲ್ಲಿ ಸಸಿ ವಿತರಣಾ ಮತ್ತು ಜಮೀನು ಬದುಗಳಲ್ಲಿ ನಾಟಿ ಕಾರ್ಯಕ್ರಮವನ್ನು ಯಶಸ್ವಿಯಾಗಿ ಕೈಗೊಳ್ಳಲಾಯಿತು. ತಮ್ಮ ಹೊಲಗಳಲ್ಲಿ ನಾಟಿ ಮಾಡುವ ಪ್ರತಿ ಸಸಿಗೆ ಯೋಜನೆ ಅಡಿ ಹಣ ದೊರೆಯುವ ಖಾತರಿಯೂ ಸಹ ಸಸಿಗಳನ್ನು ಹಾಳು ಮಾಡದಿರಲು ಕಾರಣವಾಗಿದೆ. ಪ್ರತಿ ಗ್ರಾಮ ಪಂಚಾಯ್ತಿಗೆ ನೋಡಲ್ ಅಧಿಕಾರಿಯಾಗಿ ನಿಯೋಜಿಸಲಾದ ತಾಲ್ಲೂಕು ಮಟ್ಟದ ಅಧಿಕಾರಿಗಳು, ಅರಣ್ಯ ಇಲಾಖಾ ಸಿಬ್ಬಂದಿ, ಆಯಾ ಗ್ರಾಮ ಪಂಚಾಯ್ತಿ ಸದಸ್ಯರು, ಪಿ.ಡಿ.ಓ / ಕಾರ್ಯದರ್ಶಿ ತಂಡಗಳಲ್ಲಿ ನಾಟಿ ಮಾಡಲಾದ ಜಮೀನುಗಳಿಗೆ ಭೇಟಿಯಿತ್ತು ಪರಿಶೀಲನೆ ನಡೆಸುವಂತೆ ನೋಡಿಕೊಳ್ಳಲಾಗಿದೆ. ರೈತರು ಸ್ವ–ಇಚ್ಛೆಯಿಂದ ಮುಂದೆ ಬಂದು ಸಸಿಗಳನ್ನು ಪಡೆದು ತಮ್ಮ ಹೊಲಗಳಲ್ಲಿ, ಬದುಗಳಲ್ಲಿ ನಾಟಿ ಮಾಡಿಕೊಂಡಿದ್ದಾರೆ. ಸಸಿಗಳನ್ನು ಯಾವುದೇ ಊರುಗಳಿಗೆ ಸಾಗಾಟ ಮಾಡಿ ವಿತರಿಸಿರುವುದಿಲ್ಲ. ಸ್ವತಃ ರೈತರೇ ಆಸಕ್ತಿಯಿಂದ ನರ್ಸರಿಗೆ ವಾಹನಗಳ ಸಮೇತ ಬಂದು ಸಸಿ ಲೋಡುಮಾಡಿಕೊಂಡು ಹೋಗಿರುತ್ತಾರೆ. ಸಾಗಾಣೆ ವೆಚ್ಚ ಸಹ ಕೊಡಲಾಗಿಲ್ಲ. ಅಲ್ಲದೇ ತಾಲ್ಲೂಕಿನ ಎಲ್ಲಾ ವರ್ಗದ ರೈತರಿಗೂ ಸಹ ಸುಲಭವಾಗಿ ಸಸಿಗಳು ದೊರೆಯುವಂತೆ ಸಮಾನವಾಗಿ ಹಂಚಿಕೆ ಮಾಡಲಾಗಿದೆ. ಈ ಮೂಲಕ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಲ್ಲಿ ಶೇ. 20 ರಷ್ಟು ಅರಣ್ಯೀಕರಣಕ್ಕೆ ಒತ್ತು ನೀಡಲಾಗಿದೆ.

## ಗ್ರಾಮ ಪಂಚಾಯ್ತಿಗೆ ಆದ ಅನುಕೂಲ:

ರೈತರಿಗೆ ಉಚಿತವಾಗಿ ಸಾಗ, ಸಿಲ್ವರ್, ಹೊಂಗೆ ಇತ್ಯಾದಿ ಸಸಿಗಳನ್ನು ಅವರ ಜಮೀನಿನಲ್ಲಿ ನಾಟಿ ಮಾಡಲು ಕೊಡುವುದರ ಜೊತೆಗೆ ಕೂಲಿ ಬಾಬ್ತು ಪ್ರತಿ ಸಸಿಗೆ ರೂ. 33.00 ರಂತೆ ಅವರಿಗೆ ಪಾವತಿಸಲು ಪೂರ್ವದಲ್ಲಿ ಅವರಿಂದ ಬಾಕಿ ಇದ್ದ ಮನೆ/ ಆಸ್ತಿ ಕಂದಾಯದ ಬಾಬ್ತು ಸುಮಾರು 70.00 ಲಕ್ಷ ರೂ. ಗಳನ್ನು ವಸೂಲಿ ಮಾಡಿಕೊಳ್ಳಲಾಗಿದೆ.

**ಜನ ಪ್ರತಿನಿಧಿಗಳ ಪಾಲ್ಗೊಳ್ಳುವಿಕೆ –** ಯೋಜನೆಯ ಯಶಸ್ಸು ಜನಪ್ರತಿನಿಧಿಗಳ ಪಾಲ್ಗೊಳ್ಳುವುದರ ಮೇಲೆ ಅವಲಂಬಿತ ವಾಗಿರುತ್ತದೆ. ಇಲ್ಲಿ ಸಸಿ ವಿತರಣೆ ಕಾರ್ಯಕ್ರಮದ ಪ್ರಚಾರದ ಯಶಸ್ಸು ತಾಲ್ಲೂಕಿನ ಜನ ಪ್ರತಿನಿಧಿಗಳಿಗೆ ಸಲ್ಲುತ್ತದೆ. ಕಾರಣ ಅವರು ಅತೀ ಉತ್ಸಾಹದಿಂದ ಸಸಿ ವಿತರಣೆಯ ಉದ್ಘಾಟನಾ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಕಾರ್ಯಕ್ರಮವನ್ನು ಯಶಸ್ವಿ ಗೊಳಿಸಿರುವುದು. ಇವರನ್ನು ಹುರಿದುಂಬಿಸುವಲ್ಲಿ ಚನ್ನಗಿರಿ ತಾಲ್ಲೂಕಿನ ಜನಪ್ರಿಯ ಶಾಸಕರಾದ ಸನ್ಮಾನ್ಯ ಶ್ರೀ ಮಾಡಾಳ್ ವಿರೂಪಾಕ್ಷಪ್ಪನವರ ಸಕ್ರಿಯ – ಸಹಭಾಗಿತ್ವವೇ ಮುಖ್ಯ ಕಾರಣ ವೆನಿಸುತ್ತದೆ. ಚನ್ನಗಿರಿ ತಾಲ್ಲೂಕಿನ ಬಸವರಾಜಪುರ ಸಸ್ಯ ಕ್ಷೇತ್ರದಲ್ಲಿ ಏರ್ಪಡಿಸಿದ ಕಾರ್ಯಕ್ರಮದಲ್ಲಿ ಇಲಾಖಾಧಿಕಾರಿಗಳು, 61 ಗ್ರಾಮ ಪಂಚಾಯಿತಿಗಳ ಜನಪ್ರತಿನಿಧಿಗಳು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಕಾರ್ಯದರ್ಶಿಗಳು ಹಾಗೂ ರೈತ ಬಾಂಧವರು ಆಗಾದ ಸಂಖ್ಯೆಯಲ್ಲಿ ಭಾಗವಹಿಸಿರುವುದು ಯಶಸ್ವಿ ಅನುಷ್ಠಾನದ ಮಾನದಂಡವೆನಿಸುತ್ತದೆ.

ಒಟ್ಟಾರೆ ಯೋಜನೆಯ ಯಶಸ್ಸು ಜನರ–ಜನ ಪ್ರತಿನಿಧಿಗಳ ಸಹಭಾಗಿತ್ವದಿಂದ ಸಾಧ್ಯ ಎನ್ನುವುದನ್ನು ಇಲ್ಲಿ ಮನಗಾಣಬೇಕಿದೆ. ಇಂತಹ ಒಳ್ಳೆಯ ಕಾರ್ಯಗಳನ್ನು ರಾಜ್ಯದ ಇತರೆ ಗ್ರಾಮ ಪಂಚಾಯ್ತಿಗಳು ಅನುಕರಿಸಿದಲ್ಲಿ ಜನರ ಸಂಕಷ್ಟಗಳನ್ನೂ ದೂರ ಮಾಡುವುದರ ಜೊತೆಗೆ ಪರಿಸರ ಭದ್ರತೆಯನ್ನು ಕಾಪಾಡಿಕೊಳ್ಳ ಬಹುದಲ್ಲವೇ.

❑

# ಗ್ರಾಮ ಸಭೆಯ ಅರಿವು ಮತ್ತು ಮಹತ್ವ




ಡಾ. ಟಿ. ರಮೇಶ್ *

ಮೊಬೈಲ್ : 9844775678


ಗ್ರಾಮಸಭೆಗಳನ್ನು 'ಗ್ರಾಮವಿಧಾನ ಸಭೆ' ಎಂದು ಕರೆಯುತ್ತಾರೆ. ಇದರ ಸಂಕ್ಷಿಪ್ತ ಪರಿಚಯ ಈ ಲೇಖನದಲ್ಲಿದೆ.

ಗ್ರಾಮಗಳ ದೇಶ ಭಾರತ. ಬಡತನ, ನಿರುದ್ಯೋಗ, ಅಪೌಷ್ಟಿಕತೆ, ಅನಾರೋಗ್ಯ, ಮೂಢನಂಬಿಕೆಗಳಂತಹ ನಾನಾ ಸಮಸ್ಯೆಗಳಿಂದ ಆವರಿಸಿಕೊಂಡಿವೆ. ಸರ್ಕಾರಗಳಿಂದ ಸಿಗುವ ಸೌಲಭ್ಯಗಳನ್ನು-ಸವಲತ್ತುಗಳನ್ನು ಬಳಸಿಕೊಂಡು ತಮ್ಮ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲಾರದ ಪರಿಸ್ಥಿತಿಯಲ್ಲಿ ನಮ್ಮ ಗ್ರಾಮೀಣರು ಬದುಕುತ್ತಿದ್ದಾರೆ. ಆದ್ದರಿಂದ ಈ ಎಲ್ಲ ಸಮಸ್ಯೆಗಳಿಗೆ ಸರ್ಕಾರ ನೇರವಾಗಿ ಜನರ ಪ್ರತಿನಿಧಿಗಳನ್ನೇ ಪಾಲ್ಗೊಳ್ಳುವಂತೆ ಮಾಡಿ ಅವರ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವಂತೆ ಮಾಡುವ ಪ್ರಯತ್ನವೇ ಗ್ರಾಮಸಭೆಗಳ ಹುಟ್ಟಿಗೆ ಕಾರಣವಾಗಿದೆ. ಇದೇನು ಹೊಸ ಯೋಜನೆಯಲ್ಲದಿದ್ದರೂ ಇಂದಿನ ದಿನಗಳಲ್ಲಿ ಹೆಚ್ಚು ಗಮನ ಕೊಡಬೇಕಾದ ವಿಚಾರ ಎಂಬುದು ಗಮನಾರ್ಹ.

ಇತ್ತೀಚಿನ ದಿನಗಳಲ್ಲಿ ಪೌಷ್ಠಿಕಾಂಶದ ಕೊರತೆಯಿಂದ ಬಳಲುತ್ತಿರುವ ಮಕ್ಕಳ ಸಂಖ್ಯೆ ಹೆಚ್ಚಾಗುತ್ತಿದ್ದು, ಆ ಮಕ್ಕಳ ಸಮಸ್ಯೆ ನೀಗಿಸಲು ಮತ್ತು ಪಂಚಾಯತ್ ರಾಜ್ ಸಂಸ್ಥೆಗಳನ್ನು ಬಲಯುತಗೊಳಿಸುವ ಉದ್ದೇಶದಿಂದ ಕೇಂದ್ರ ಸರ್ಕಾರದ ಪಂಚಾಯತ್ ರಾಜ್ ಸಚಿವ ಶ್ರೀ ವಿ. ಕಿಶೋರ್‌ಚಂದ್ರ ಡಿಯೋ ಆಗಸ್ಟ್ 15 ರಿಂದ 31ರವರೆಗೆ ವಿಶೇಷ ಗ್ರಾಮಸಭೆಗಳನ್ನು ಆಯೋಜಿಸುವಂತೆ ಎಲ್ಲ ರಾಜ್ಯಗಳ ಗ್ರಾಮೀಣಾಭಿವೃದ್ಧಿ ಮಂಡಳಿಗಳಿಗೆ ಮತ್ತು ಪಂಚಾಯತ್ ರಾಜ್ ಇಲಾಖೆಗಳಿಗೆ ಸೂಚನೆ ನೀಡಿದರು. ಈ ಸೂಚನೆ ಗ್ರಾಮಸಭೆಗಳ ಮಹತ್ವವನ್ನು ಜನರಿಗೆ ತಿಳಿಸುವುದಷ್ಟೇ ಆಗಿರದೇ ಗ್ರಾಮೀಣ ಭಾಗದ ನಾನಾ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳುವಲ್ಲಿ ಗ್ರಾಮಸಭೆಗಳ ಕ್ರಿಯಾಶೀಲತೆಯನ್ನು ಗುರುತಿಸಲೂ ಸಹಕಾರಿಯಾಗಿದೆ. ವಿಶೇಷವಾಗಿ ನಡೆಸಬೇಕಾಗಿರುವ ಈ ಗ್ರಾಮಸಭೆಗಳಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ, ಆರೋಗ್ಯ, ಸಾರ್ವಜನಿಕ ಪಡಿತರ ವಿತರಣಾ ವ್ಯವಸ್ಥೆ, ಕುಡಿಯುವ ನೀರು, ಪಶುಸಂಗೋಪನೆ, ಮಧ್ಯಾಹ್ನದ ಬಿಸಿಯೂಟ, ಕೃಷಿ, ತೋಟಗಾರಿಕೆ, ಮೀನುಗಾರಿಕೆ ವಿಭಾಗಗಳಿಗೆ ಸಂಬಂಧಿಸಿದ ಅಧಿಕಾರಿಗಳು ತಮ್ಮ ವ್ಯಾಪ್ತಿಗೆ ಬರುವ ಗ್ರಾಮಸಭೆಗಳಿಗೆ ಭೇಟಿನೀಡಿ ತಮ್ಮ ವಿಭಾಗಗಳಿಂದ ದೊರಕುವ ಸವಲತ್ತುಗಳನ್ನು ಹಾಗೂ ಉಪಯೋಗಿಸಿಕೊಳ್ಳಲು ಅನುಸರಿಸಬೇಕಾದ ಕ್ರಮಗಳನ್ನು ವಿವರಿಸುತ್ತಾರೆ. ಇದು ಸರ್ಕಾರದ ಸೇವೆಗಳನ್ನು ಗ್ರಾಮೀಣರ ಮನೆಬಾಗಿಲಿಗೆ ತಲುಪಿಸುವ ಪ್ರಯತ್ನ ವಾಗಿದೆ. ಆ ಕಾರಣಕ್ಕೆ ಗ್ರಾಮಸಭೆಗಳನ್ನು 'ಗ್ರಾಮವಿಧಾನ ಸಭೆ' ಎಂದು ಕರೆಯುತ್ತಾರೆ. ಇದರ ಸಂಕ್ಷಿಪ್ತ ಪರಿಚಯ ಈ ಲೇಖನದಲ್ಲಿದೆ.

'ಗ್ರಾಮಸಭೆ' ಎನ್ನುವುದು ಪ್ರಜಾಪ್ರಭುತ್ವ ವ್ಯವಸ್ಥೆಯ ಅತ್ಯಂತ ತಳಸ್ತರದ ಒಂದು ಸಂಸ್ಥೆಯಾಗಿದೆ. ಇಡೀ ಗ್ರಾಮ ಪಂಚಾಯತ್‌ಗೆ ಸೇರಿದ ಒಂದು ಅಥವಾ ಹಲವು ಗ್ರಾಮಗಳ ಮತದಾರರ ಸಭೆ ಎಂದು ಹೇಳಬಹುದು. ಅಧಿಕಾರ ವಿಕೇಂದ್ರೀಕರಣ ಬರಿ ಗ್ರಾಮ ಪಂಚಾಯತ್‌ಗಳ ಮಟ್ಟಕ್ಕೆ ಸೀಮಿತವಾಗಬಾರದು. ಪ್ರಜೆಗಳು ಪ್ರಭುತ್ವದ ನಿರ್ಧಾರ ತೆಗೆದುಕೊಳ್ಳುವ ಅವಕಾಶಗಳನ್ನು ಪಡೆಯಬೇಕು ಎನ್ನುವ ಉದ್ದೇಶದಿಂದ ಗ್ರಾಮಸಭೆ


* ಉಪನ್ಯಾಸಕರು, ಬಾಸುದೇವ್ ಸೋಮಾನಿ ಪ್ರಥಮ ದರ್ಜೆ ಕಾಲೇಜು, ಕುವೆಂಪುನಗರ, ಮೈಸೂರು.

ಎನ್ನುವ ಜನರ ವೇದಿಕೆಯನ್ನು ಸೃಷ್ಟಿಸಲಾಗಿದೆ. ಹದಿನೆಂಟು ವರ್ಷ ದಾಟಿದ ಮತದಾನದ ಅವಕಾಶ ಹೊಂದಿರುವ ಗ್ರಾಮೀಣ ಪ್ರದೇಶದ ವಯಸ್ಕರು ಗ್ರಾಮಸಭೆಯ ಸದಸ್ಯರಾಗಿರುತ್ತಾರೆ. ಈ ಸದಸ್ಯರೆಲ್ಲರೂ ಸೇರಿ ಮತ ಹಾಕುವುದರೊಂದಿಗೆ ಒಬ್ಬ ಅಧ್ಯಕ್ಷ ಹಾಗೂ ಉಪಾಧ್ಯಕ್ಷರನ್ನ ಆಯ್ಕೆ ಮಾಡುತ್ತಾರೆ. ಹೀಗೆ ಆಯ್ಕೆಯಾದ ಅಧ್ಯಕ್ಷ ಹಾಗೂ ಉಪಾಧ್ಯಕ್ಷರು 'ಗ್ರಾಮಸಭೆ'ಗಳನ್ನು ಕರೆಯುವ ಅಧಿಕಾರ ಹೊಂದಿರುತ್ತಾರೆ. ಈ ಗ್ರಾಮಸಭೆಯು ತನ್ನದೇ ಆದ ನೀತಿ ನಿಯಮಗಳನ್ನು ಹೊಂದಿರುತ್ತದೆ. ಹಾಗಾಗಿ ಇದು ಯಾರು ಬೇಕಾದರೂ, ಯಾವಾಗ ಬೇಕಾದರೂ ಕರೆಯಬಹುದಾದ ಸಭೆ ಎಂದು ತಪ್ಪು ತಿಳಿಯಬಾರದು.

**ಗ್ರಾಮಸಭೆಗಳು ನಡೆಯಲು ಕೆಳಗಿನ ಅಂಶಗಳನ್ನು ಖಡ್ಡಾಯವಾಗಿ ಗಮನದಲ್ಲಿಟ್ಟುಕೊಂಡು ಪಾಲಿಸಬೇಕು.**

- ಗ್ರಾಮಸಭೆ ನಡೆಯುವ ಬಗ್ಗೆ ಹಳ್ಳಿಯ ಎಲ್ಲಾ ಜನರಿಗೆ ತಿಳಿಯುವಂತೆ ಸಭೆ ನಡೆಯುವ ಮುಂಚೆಯೇ ಪ್ರಚಾರವಾಗಿರಬೇಕು.
- ಪ್ರಚಾರದ ವೇಳೆ ಗ್ರಾಮಸಭೆ ನಡೆಯುವ ಸಮಯ, ಸ್ಥಳಗಳ ಬಗ್ಗೆ ಮಾಹಿತಿ ನೀಡಬೇಕು.
- ಸಭೆ ನಡೆಸಲು ಆಯ್ಕೆಯಾದ ಸ್ಥಳ ಎಲ್ಲಾ ಗ್ರಾಮಸ್ಥರಿಗೆ ಅನುಕೂಲವಾಗುವಂತಿರಬೇಕು.
- ಸಭೆಯಲ್ಲಿ ಚರ್ಚಿಸಲು ಗ್ರಾಮದ ಸಭೆಗಳನ್ನು ಮಾತ್ರ ಆಯ್ಕೆಮಾಡಿಕೊಳ್ಳಬೇಕು.
- ಪಂಚಾಯಿತಿ ಮತ್ತು ಸರ್ಕಾರಿ ಇಲಾಖೆಯ ಅಧಿಕಾರಿಗಳು ಗ್ರಾಮಸಭೆಯಲ್ಲಿ ಕಡ್ಡಾಯವಾಗಿ ಹಾಜರಿರಬೇಕು.

**ಗ್ರಾಮ ಸಭೆಗಳು ನಡೆಯುವಾಗ ಕೆಳಗಿನ ಅಂಶಗಳನ್ನು ತಪ್ಪದೇ ಅನುಸರಿಸಬೇಕು.**

- ಗ್ರಾಮದ ಜನರಿಗೆ ಬೇಧ-ಭಾವವಿಲ್ಲದೇ ಮುಕ್ತವಾಗಿ ಅಭಿಪ್ರಾಯಗಳನ್ನು ಹೇಳಿಕೊಳ್ಳಲು ಅವಕಾಶ ನೀಡಬೇಕು. ಹಿಂದುಳಿದ ಜಾತಿ/ವರ್ಗದವರಿಗೆ, ಮಹಿಳೆಯರಿಗೆ ಮಾತನಾಡಲು ಅವಕಾಶವಿರಬೇಕು.
- ಗ್ರಾಮದಲ್ಲಿ ಅನುಷ್ಠಾನಗೊಳ್ಳಬೇಕಾದ ವಿವಿಧ ಕಾರ್ಯಕ್ರಮಗಳ ಬಗ್ಗೆ ಕೂಲಂಕುಶವಾಗಿ ಚರ್ಚಿಸಬೇಕು.
- ಸರ್ಕಾರದ ವಿವಿಧ ಇಲಾಖೆಗಳಿಂದ ದೊರೆಯುವ ಸವಲತ್ತುಗಳು ಹಾಗೂ ಸೌಲಭ್ಯಗಳನ್ನು ಸಭೆಯಲ್ಲಿ ಹಾಜರಿರುವ ಅಧಿಕಾರಿಗಳು ಗ್ರಾಮಸ್ಥರಿಗೆ ತಿಳಿಯುವಂತೆ ವಿವರಿಸಬೇಕು.
- ಒಂದು ಗ್ರಾಮದಲ್ಲಿ ಒಂದು ವರ್ಷದ ಅವಧಿಯಲ್ಲಿ 4 ಬಾರಿ ಗ್ರಾಮಸಭೆಗಳನ್ನು ಕಡ್ಡಾಯವಾಗಿ ನಡೆಸಬೇಕು.
- ಯಾವುದೇ ಯೋಜನೆಯು ಫಲಾನುಭವಿಗಳಿಗೆ ತಲುಪುವಂತೆ ಗ್ರಾಮಸಭೆಯು ಕ್ರಮ ಕೈಗೊಳ್ಳಬೇಕು.
- ಗ್ರಾಮದ ಎಲ್ಲಾ ಸದಸ್ಯರುಗಳ ಸಹಕಾರವು ಕೂಡ ಗ್ರಾಮಸಭೆಗಳಲ್ಲಿ ಅತಿ ಮುಖ್ಯವಾದದ್ದು.

**ಗ್ರಾಮಸಭೆಗಳು ಮುಖ್ಯವಾಗಿ ಈ ಕೆಳಗಿನ ಸಮಸ್ಯೆಗಳಿಗೆ ಹೆಚ್ಚು ಗಮನ ನೀಡಬೇಕು.**

- ಗ್ರಾಮೀಣ ಪ್ರದೇಶದಲ್ಲಿ ವಾಸವಿರುವ ಮಹಿಳೆಯರು ಮತ್ತು ಮಕ್ಕಳಲ್ಲಿನ ಪೌಷ್ಟಿಕಾಂಶದ ಕೊರತೆ ನಿವಾರಿಸಲು ಆರೋಗ್ಯ ತಪಾಸಣಾ ಶಿಬಿರಗಳನ್ನು ಆಯೋಜಿಸುವುದು.
- ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ತೆರೆಯಲು ಕ್ರಮಕೈಗೊಳ್ಳುವುದು.
- ಅಪಾಯಕಾರಿ ಅಥವಾ ಮಾರಕ ರೋಗಗಳನ್ನು ತಡೆಗಟ್ಟಲು ಕ್ರಮ ಕೈಗೊಳ್ಳುವುದು.
- ಅಂಗನವಾಡಿಗಳಿಗೆ ಪೌಷ್ಟಿಕಾಂಶದ ಆಹಾರ ಪೂರೈಕೆ ಮಾಡುವುದು.
- ಗ್ರಾಮ ನೈರ್ಮಲ್ಯಕ್ಕೆ ಸೂಕ್ತ ಕ್ರಮ ಕೈಗೊಳ್ಳುವುದರೊಂದಿಗೆ ಶುಚಿತ್ವ ಕುರಿತು ಗ್ರಾಮಸ್ಥರಿಗೆ ತಿಳುವಳಿಕೆ ಬರುವ ಹಾಗೆ ಕೆಲವು ಕಾರ್ಯಕ್ರಮಗಳನ್ನು ಆಯೋಜಿಸಬೇಕು.

ಮೇಲಿನ ಎಲ್ಲ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಗ್ರಾಮಸಭೆಗಳು ನಡೆದರೆ ಆ ಸಭೆಗಳ ಎಲ್ಲಾ ಯೋಜನೆಗಳು ಅತ್ಯಂತ ಯಶಸ್ವಿಯಾಗಿ ಜನರಿಗೆ ತಲುಪುವುದರಲ್ಲಿ ಯಾವುದೇ ಸಂದೇಹವಿಲ್ಲ. ಈ ಗ್ರಾಮ ಸಭೆಗಳ ಮಹತ್ವವನ್ನು ಹಾಗೂ ಅದರ ಘನತೆ, ಗೌರವವನ್ನು ಕಾಪಾಡಲು ಸರ್ಕಾರಗಳು ನಿರಂತರವಾಗಿ ಪ್ರಯತ್ನ ಮಾಡುತ್ತಿವೆ. ಈ ಪ್ರಯತ್ನ ಮತ್ತಷ್ಟು ಕಾರ್ಯೋನ್ಮುಖವಾಗಬೇಕಾಗಿದೆ.

❑

# ಕರ್ನಾಟಕ ರಾಜ್ಯದಲ್ಲಿ "ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನ"ದ ಯಶಸ್ವಿ ಅನುಷ್ಠಾನ

ವಾಮನರಾವ್ *
ಮೊಬೈಲ್ : 9035756330

ಆರೋಗ್ಯ ಅಭಿಯಾನದಡಿಯಲ್ಲಿ ಕರ್ನಾಟಕ ಸರಕಾರವು ತಾಯಿ ಮತ್ತು ಮಗುವಿನ ಆರೋಗ್ಯಕರ ಬಾಣಂತನ ದೊರಕಿಸಿ ಕೊಡಲು "ಮಡಿಲು" ಎಂಬ ಅಪೂರ್ವ ಯೋಜನೆ ೨೦೦೭ ರಲ್ಲಿ ಪ್ರಾರಂಭಿಸಿದೆ.

ಒಂದು ಪ್ರದೇಶದ ಜನರು ಅಭಿವೃದ್ಧಿ ಹೊಂದಬೇಕಾದರೆ ಅಲ್ಲಿಯ ಸಾರ್ವಜನಿಕ ಆರೋಗ್ಯದಮಟ್ಟ ಉತ್ತಮವಾಗಿರಬೇಕು. ಆಗ ಅವರು ಶ್ರಮವಹಿಸಿ ಕೆಲಸ ನಿರ್ವಹಿಸಲು ಅನುಕೂಲವಾಗುತ್ತದೆ. ಗ್ರಾಮೀಣ ಜನರ ಆರೋಗ್ಯದ ಮಟ್ಟ ಮತ್ತು ನಗರ ಪ್ರದೇಶದ ಜನರ ಆರೋಗ್ಯ ಮಟ್ಟವನ್ನು ತುಲನೆ ಮಾಡಿದಾಗ, ಗ್ರಾಮೀಣರ ಆರೋಗ್ಯದ ಮಟ್ಟ ಉತ್ತಮವಾಗಿಲ್ಲವೆಂದೇ ಹೇಳಬಹುದು. ಇದಕ್ಕೆ ಮುಖ್ಯ ಕಾರಣಗಳೆಂದರೆ; ಜನರಲ್ಲಿಯ ಮೂಢನಂಬಿಕೆಗಳು, ವೈದ್ಯಕೀಯ ಸೌಲಭ್ಯಗಳ ಕೊರತೆ, ಅನಕ್ಷರತೆ, ಬಡತನ, ಅಜ್ಞಾನ ಹೀಗೆ ಹಲವಾರು ಅಂಶಗಳ ಪಟ್ಟಿಮಾಡಬಹುದು. ಇದನ್ನರಿತ ಕೇಂದ್ರ ಸರಕಾರವು ಗ್ರಾಮೀಣ ಜನರ ಆರೋಗ್ಯವನ್ನು ಉತ್ತಮ ಮಟ್ಟಕ್ಕೇರಿಸಲು "ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನ" ಕಾರ್ಯಕ್ರಮವನ್ನು ಹಮ್ಮಿಕೊಂಡು ಉತ್ತಮ ರೀತಿಯಲ್ಲಿ ಅದನ್ನು ಅನುಷ್ಠಾನ ಗೊಳಿಸಲಾಗುತ್ತಿದೆ.

ಹೆಸರೇ ಸೂಚಿಸಿದಂತೆ "ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನ"ದ ಮೂಲ ಉದ್ದೇಶವು ಗ್ರಾಮೀಣ ಜನರ ಆರೋಗ್ಯದ ಮಟ್ಟ ಹೆಚ್ಚಿಸಲು ಉತ್ತಮ ವೈದ್ಯಕೀಯ ಸೇವೆಯನ್ನು ಒದಗಿಸಿ ತನ್ಮೂಲಕ ತಾಯಿಯ ಮರಣ ಮತ್ತು ಶಿಶು ಮರಣ ಪ್ರಮಾಣವನ್ನು ಕಡಿಮೆ ಗೊಳಿಸುವುದರ ಜೊತೆಗೆ ಬಡತನ ರೇಖೆಗಿಂತ ಕೆಳಗಿರುವ ಬಡವರ ಮತ್ತು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಆರೋಗ್ಯದ ಮಟ್ಟ ಹೆಚ್ಚಿಸುವಲ್ಲಿ ವಿಶೇಷ ಗಮನ ಹರಿಸುವುದಾಗಿದೆ, ಈ ಉದ್ದೇಶಗಳಲ್ಲದೆ ಗ್ರಾಮದ ನೈರ್ಮಲ್ಯ ಕಾಪಾಡುವುದು, ಸಾಂಕ್ರಾಮಿಕ ರೋಗಗಳ ನಿಯಂತ್ರಣವನ್ನು ಸಹ ಮಾಡುವುದಾಗಿದೆ.

ಈ ಅಭಿಯಾನದ ಉದ್ದೇಶಗಳನ್ನು ಸಾಧಿಸಲು ಹಲವು ಗುರಿಗಳನ್ನು ನಿರ್ಧರಿಸಲಾಗಿದ್ದು, ಅವುಗಳೆಂದರೆ; (1) 2012ರ ವೇಳೆಗೆ ಶಿಶುಮರಣ ಪ್ರಮಾಣವನ್ನು ಪ್ರತಿ 1000 ಜೀವಂತ ಜನನಕ್ಕೆ 30ಕ್ಕೆ ಇಳಿಸುವುದು, ನಮ್ಮ ರಾಜ್ಯದಲ್ಲಿ ಶಿಶು ಮರಣ ಪ್ರಮಾಣವು 41ರಷ್ಟಿದೆ. (2) 2012ರ ವೇಳೆಗೆ ತಾಯಂದಿರ ಮರಣ ಪ್ರಮಾಣವನ್ನು ಪ್ರತಿ ಒಂದು ಲಕ್ಷ ಮಹಿಳೆಯರು ಗರ್ಭಿಣಿಯಾಗಿರುವಾಗ ಮತ್ತು ಹೆರಿಗೆ ಸಮಯದಲ್ಲಿ ಸಂಭವಿಸುವ ಮರಣವನ್ನು 100ಕ್ಕೆ ಇಳಿಸುವುದು, ನಮ್ಮ ರಾಜ್ಯದಲ್ಲಿ 2009ರಲ್ಲಿ ತಾಯಂದಿರ ಮರಣ ಪ್ರಮಾಣವು 178ರಷ್ಟಿದೆ. (3) 2012ರ ವೇಳೆಗೆ ತಾಯಿಯ ಒಟ್ಟು ಫಲವತ್ತೆಯ ಪ್ರಮಾಣವನ್ನು 2.1ಗೆ ಇಳಿಸುವುದು, ನಮ್ಮ ರಾಜ್ಯದಲ್ಲಿ 2008ರಲ್ಲಿ ಅದು 2.00 ರಷ್ಟಾಗಿದೆ, ಇದು ಅದ್ಭುತ ಸಾಧನೆಯಾಗಿದೆ. (4) ತಾಯಂದಿರ ಸುರಕ್ಷಿತ ಹೆರಿಗೆಗಳ ಪ್ರಮಾಣವನ್ನು ಶೇ. 99ಕ್ಕೆ ಹೆಚ್ಚಿಸುವ ಗುರಿ ಹೊಂದಿದೆ. ಈಗ ಇದರ ಪ್ರಮಾಣವು ನಮ್ಮ ರಾಜ್ಯದಲ್ಲಿ ಶೇ. 86.4 ರಷ್ಟಿದೆ.

* ಶ್ರೀದತ್ತ ನಿಲಯ, 11ನೇ ಅಡ್ಡರಸ್ತೆ, ಜಯನಗರ ಪೂರ್ವ, ತುಮಕೂರು – 572 102.

ಈ ಮೇಲಿನ ಗುರಿಗಳು ತಾಯಿ ಮತ್ತು ಶಿಶುವಿನ ಆರೋಗ್ಯಕ್ಕೆ ಸಂಬಂಧಿಸಿದವುಗಳು, ಇವುಗಳ ಜೊತೆಗೆ ಸಾಂಕ್ರಾಮಿಕ ರೋಗಗಳನ್ನು ತಡೆಗಟ್ಟಲು ವಿವಿಧ ಸಾಂಕ್ರಾಮಿಕ ರೋಗಗಳ ಕಾರ್ಯಕ್ರಮದಲ್ಲಿ ಗುರಿಗಳನ್ನು ಸಾಧಿಸಲು ಹೆಚ್ಚು ಒತ್ತು ನೀಡಲಾಗಿದೆ. ಅವುಗಳೆಂದರೆ,

(1) 2010ಕ್ಕೆ ಮಲೇರಿಯಾದಿಂದ ಸಂಭವಿಸುವ ಮರಣ ಪ್ರಮಾಣವನ್ನು ಶೇ. 100ಕ್ಕೆ ಇಳಿಸುವುದು, ಅಂದರೆ ಮಲೇರಿಯಾದಿಂದ ಸಂಭವಿಸುವ ಮರಣ ಪ್ರಮಾಣವನ್ನು 'ಂ' ಶೂನ್ಯ ಮಟ್ಟಕ್ಕೆ ತರುವುದು, ನಮ್ಮ ರಾಜ್ಯದಲ್ಲಿ 2011ರ ಜುಲೈವರೆಗೆ ಮಲೇರಿಯಾದಿಂದ ಸಾವುಗಳು ಸಂಭವಿಸಿಲ್ಲ.

(2) ಡೆಂಗ್ಯೂ ರೋಗದ ಪ್ರಮಾಣವನ್ನು 2010ರ ವೇಳೆಗೆ ಶೇ. 50ಕ್ಕೆ ಮತ್ತು 2012ರ ವೇಳೆಗೆ ಅದೇ ಪ್ರಮಾಣವನ್ನು ನಿಲ್ಲುವಂತೆ ಇರಬೇಕು. 2010ರ ಜುಲೈ ಅಂತ್ಯಕ್ಕೆ 171 ಡೆಂಗ್ಯೂ ಪ್ರಕರಣಗಳು ಪತ್ತೆಯಾಗಿದ್ದು, ಅವುಗಳಲ್ಲಿ 2 ಸಾವು ಸಂಭವಿಸಿದೆ.

(3) 2012ಕ್ಕೆ ಆನೆಕಾಲು ರೋಗವನ್ನು ಸಂಪೂರ್ಣವಾಗಿ ತೊಡೆದುಹಾಕುವುದು. ಅಂದರೆ ಅದನ್ನು ನಿರ್ಮೂಲನೆ ಮಾಡುವುದೆಂದರ್ಥ.

(4) 2012ಕ್ಕೆ ಕುಷ್ಠ ರೋಗದ ಪ್ರಮಾಣವನ್ನು ಪ್ರತಿ 10,000 ಜನಸಂಖ್ಯೆಗೆ 1ಕ್ಕಿಂತ ಕಡಿಮೆ ಮಾಡುವುದು, ಜೂನ್ 2010ರಲ್ಲಿ ಅದರ ಪ್ರಮಾಣವು 0.44ಕ್ಕೆ ಇಳಿದಿದೆ, ನಮ್ಮ ರಾಜ್ಯದಲ್ಲಿ 2005ರಲ್ಲಿ ಕುಷ್ಠ ರೋಗವನ್ನು ತಡೆಗಟ್ಟಲಾಗಿದೆ.

(5) ಕ್ಷಯರೋಗವನ್ನು ಅಭಿಯಾನದ ಅವಧಿ ಪೂರ್ಣ ಶೇ. 85 ರಷ್ಟು ವಾಸಿಯಾಗುವ ಪ್ರಮಾಣ ಇರುವಂತೆ ಮಾಡುವುದಾಗಿದೆ.

ಈ ಮೇಲಿನ ಗುರಿಗಳನ್ನು ಸಾಧಿಸಲು ಸರಕಾರ ಹಲವಾರು ಹೊಸ ಕಾರ್ಯಕ್ರಮಗಳನ್ನು ರೂಪಿಸಿ ಜಾರಿಗೊಳಿಸಲಾಗುತ್ತಿದೆ. ಅವುಗಳೆಂದರೆ; (1) ಜನನಿ ಸುರಕ್ಷಾ ಯೋಜನೆ (ಜೆ.ಎಸ್.ವೈ.) (2) ಪ್ರಸೂತಿ ಆರೈಕೆ, (3) ಜನನಿ ಸುರಕ್ಷಾ ವಾಹಿನಿ, (4) ಮಡಿಲು ಯೋಜನೆ, (5) ತಾಯಿಯ ಭಾಗ್ಯ ಕಾರ್ಯಕ್ರಮಗಳು.

ಜನನಿ ಸುರಕ್ಷಾ ಯೋಜನೆಯ ಮುಖ್ಯ ಉದ್ದೇಶಗಳೆಂದರೆ, ತಾಯಿ ಮರಣ ಮತ್ತು ಶಿಶು ಮರಣ ಪ್ರಮಾಣವನ್ನು ಕಡಿಮೆ ಗೊಳಿಸುವುದು, ಎಲ್ಲಾ ಗರ್ಭಿಣಿಯರಿಗೆ ಗುಣಾತ್ಮಕ ವೈದ್ಯಕೀಯ ಸೇವೆಯನ್ನು ನೀಡುವುದು, ಜೊತೆಗೆ ಕ್ಲಿಷ್ಟಕರ ಹೆರಿಗೆ ಸಂದರ್ಭದಲ್ಲಿ ತುರ್ತು ಸಿಜೇರಿಯನ್ ಶಸ್ತ್ರಚಿಕಿತ್ಸೆಗೆ ಅವಕಾಶ ನೀಡುವುದು. ಈ ಯೋಜನೆಯಡಿಯಲ್ಲಿ ಲಾಭ ಪಡೆಯುವವರು ಹಲವು ಅರ್ಹತೆಗಳು ಹೊಂದಿರಬೇಕಾಗುತ್ತದೆ. ಬಡತನ ರೇಖೆಗಿಂತ ಕೆಳಗಿರುವ ಮಹಿಳೆ, ಪ್ರಸ್ತುತ ಹೆರಿಗೆ ಮೊದಲನೇ ಅಥವಾ ಎರಡನೇ ಜೀವಂತ ಹೆರಿಗೆಯಾಗಿರಬೇಕು, ಬಡತನ ರೇಖೆಗಿಂತ ಮೇಲ್ಪಟ್ಟ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ಮಹಿಳೆಯರು ಈ ಸೌಲಭ್ಯಕ್ಕೆ ಅರ್ಹರಾಗಿರುತ್ತಾರೆ. ಅರ್ಹತೆ ಪಡೆದ ಗರ್ಭಿಣಿಯರು ಈ ಕೆಳಗೆ ಸೂಚಿಸಿದಂತೆ ಲಾಭ ಪಡೆಯುವರು.

ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನದಡಿಯಲ್ಲಿ ಮತ್ತೊಂದು ಮಹತ್ವಾಕಾಂಕ್ಷೆ ಕಾರ್ಯಕ್ರಮವನ್ನು ಕಾರ್ಯಗತ ಗೊಳಿಸಲಾಗುತ್ತಿದೆ. ಅದೇ "ಪ್ರಸೂತಿ ಆರೈಕೆ" ಕಾರ್ಯಕ್ರಮ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಕುಟುಂಬಗಳಲ್ಲಿ ಪೌಷ್ಠಿಕಾಂಶಗಳ ಕೊರತೆ ಇರುವುದರಿಂದ ಇವರಲ್ಲಿ ಶಿಶುಮರಣ ಪ್ರಮಾಣ ಮತ್ತು ತಾಯಿಯಂದಿರ ಮರಣ ಪ್ರಮಾಣ ಹೆಚ್ಚಾಗಿದೆ. ಅಗತ್ಯ ಆರೋಗ್ಯ ಸೇವೆಗಳು ದೊರೆಯದೆ ಈ ಸಮಸ್ಯೆ ಉಲ್ಬಣ

| ಕ್ರ. ಸಂ. | ವಿವರಗಳು | ಗ್ರಾಮೀಣ ಪ್ರದೇಶಗಳ ಫಲಾನುಭವಿಗಳಿಗೆ ರೂ. | ನಗರ ಪ್ರದೇಶಗಳ ಫಲಾನುಭವಿಗಳಿಗೆ ರೂ. |
|---|---|---|---|
| 1 | ಮನೆಯಲ್ಲಿ ನಡೆಯುವ ಮೊದಲ ಎರಡು ಹೆರಿಗೆಗಳಿಗೆ ಸಜೀವ ಜನನ ಆಗಿರಬೇಕು | 500/– | 500/– |
| 2 | ಆರೋಗ್ಯ ಸಂಸ್ಥೆಯಲ್ಲಿ ನಡೆಯುವ ಮೊದಲ ಎರಡು ಹೆರಿಗೆಗಳಿಗೆ – ಸಜೀವ ಜನನ ಆಗಿರಬೇಕು. | 700/– | 600/– |
| 3 | ಖಾಸಗಿ ಆಸ್ಪತ್ರೆಯಲ್ಲಿ ಸಿಜೇರಿಯನ್ ಆದಲ್ಲಿ (ಪ್ರತಿ ಪ್ರಕರಣಕ್ಕೆ) | 1500/– | 1500/– |

ವಾಗಿದ್ದು, ಸಕಾಲಿಕ ಆರೋಗ್ಯ ತಪಾಸಣೆ ಹಾಗೂ ಗರ್ಭಿಣಿ ಸ್ತ್ರೀಯರಿಗೆ ಪೌಷ್ಠಿಕಾಂಶಯುಕ್ತ ಆಹಾರ ವಸ್ತುಗಳನ್ನು ಖರೀದಿಸಲು ಹಣಕಾಸಿನ ನೆರವು ಈ ಯೋಜನೆಯ ಮೂಲ ಉದ್ದೇಶವಾಗಿದೆ. ಈ ಯೋಜನೆಯ ಅಡಿಯಲ್ಲಿ ಲಾಭ ಪಡೆಯಲು ಬಯಸುವವರು ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯರಲ್ಲಿ ನೊಂದಾಯಿಸಿ ಕೊಂಡಿರುವ ಗರ್ಭಿಣಿ ಸ್ತ್ರೀಯರಿಗೆ ಎರಡನೇ ಮತ್ತು ಮೂರನೇ ತ್ರೈಮಾಸಿಕ ಗರ್ಭಿಣಿ ಪರೀಕ್ಷೆ ಮುಗಿಸಿದ ನಂತರ, ಮೂರನೇ ಗರ್ಭಿಣಿ ಪರೀಕ್ಷೆಯ ಸಂದರ್ಭದಲ್ಲಿ 1000/– ರೂಪಾಯಿಗಳ ಚೆಕ್ ಮೂಲಕ ನೀಡಲಾಗುವುದು. ಹೆರಿಗೆ ನಂತರ 1000/– ರೂ. ಗಳನ್ನು ಚೆಕ್ ಮೂಲಕ ಬಾಣಂತಿಯರಿಗೆ ನೀಡಲಾಗುವುದು. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳಲ್ಲಿನ ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳ ಗರ್ಭಿಣಿ ಸ್ತ್ರೀಯರು ಮಾತ್ರ ಈ ಸೌಲಭ್ಯಕ್ಕೆ ಅರ್ಹರು. ಮೊದಲ ಎರಡು ಹೆರಿಗೆಗಳಿಗೆ ಮಾತ್ರ ಈ ಸೌಲಭ್ಯ ಲಭ್ಯವಿರುತ್ತದೆ. ಹೆರಿಗೆಯು ಕಡ್ಡಾಯವಾಗಿ ಸರಕಾರಿ ಆರೋಗ್ಯ ಕೇಂದ್ರ / ಆಸ್ಪತ್ರೆಗಳಲ್ಲಿ ನಡೆಯಬೇಕು.

ಈ ಆರೋಗ್ಯ ಅಭಿಯಾನದಡಿಯಲ್ಲಿ ಕರ್ನಾಟಕ ಸರಕಾರವು ತಾಯಿ ಮತ್ತು ಮಗುವಿನ ಆರೋಗ್ಯಕರ ಬಾಣಂತನ ದೊರಕಿಸಿ ಕೊಡಲು "ಮಡಿಲು" ಎಂಬ ಅಪೂರ್ವ ಯೋಜನೆ 2007 ರಲ್ಲಿ ಪ್ರಾರಂಭಿಸಿದೆ. ಈ ಯೋಜನೆಯ ಉದ್ದೇಶಗಳು (1) ಕಡುಬಡತನ ವರ್ಗಕ್ಕೆ ಸೇರಿದ ಗರ್ಭಿಣಿಯರು ಆರೋಗ್ಯ ಕೇಂದ್ರ / ಆಸ್ಪತ್ರೆಗಳಲ್ಲಿ ಹೆರಿಗೆ ಮಾಡಿಸಿಕೊಳ್ಳುವಂತೆ ಪ್ರೋತ್ಸಾಹಿಸುವುದು (2) ತಾಯಿ ಮತ್ತು ಮಗುವಿನ ಆರೋಗ್ಯವನ್ನು ಕಾಪಾಡುವುದು, (3) ರಾಜ್ಯದಲ್ಲಿ ತಾಯಂದಿರ ಮತ್ತು ಶಿಶುಮರಣ ಪ್ರಮಾಣವನ್ನು ತಗ್ಗಿಸುವುದು. ಈ ಯೋಜನೆಯ ಲಾಭ ಪಡೆಯಲು ಬಯಸುವವರು ಬಡತನ ರೇಖೆಗಿಂತ ಕೆಳಗಿರುವವರು, ಸರಕಾರಿ ಆಸ್ಪತ್ರೆಗಳಲ್ಲಿ ಹೆರಿಗೆ ಮಾಡಿಸಿಕೊಂಡವರು, ಮೊದಲ ಎರಡು ಜೀವಂತ ಹೆರಿಗೆಗಳಿಗೆ ಮಾತ್ರ ಸೀಮಿತ. ಮಡಿಲು ಕಿಟ್‌ನಲ್ಲಿರುವ ಒಟ್ಟು ಸಾಮಗ್ರಿಗಳು 19, ಅವುಗಳೆಂದರೆ ತಾಯಿಗೆ ಸಂಬಂಧಪಟ್ಟ ಸಾಮಗ್ರಿಗಳಾದ (1) ಸೊಳ್ಳೆ ಪರದೆ (2) ಜಮಖಾನೆ, (3) ಬೆಡ್‌ಶೀಟ್, (4) ದಪ್ಪನೆ ಹೊದಿಕೆ, (5) ಸೋಪು, (6) ಬಟ್ಟೆ ಒಗೆಯುವ ಸಾಬೂನು, (7) ಹೊಟ್ಟೆಗೆ ಕಟ್ಟುವ ಬಟ್ಟೆ (8) ಸ್ಯಾನಿಟರಿ ಪ್ಯಾಡ್ (9) ಬಾಚಣಿಗೆ ಯೊಂದಿಗೆ ಕೊಬ್ಬರಿ ಎಣ್ಣೆ, (10) ಟವಲ್, (11) ಟೂತ್ ಪೇಸ್ಟ್ ಮತ್ತು ಬ್ರಷ್‌ಗಳು ಒಳಗೊಂಡಿದೆ. ಇನ್ನು ಮಗುವಿಗೆ ಬೇಕಾದ ಸಾಮಗ್ರಿಗಳಾದ (1) ಹೊದಿಕೆ (2) ಮೈ ಸಾಬೂನು (3) ಡೈಪರ್ (4) ಜುಬ್ಲು, (5) ಸ್ವೆಟರ್, ಕುಲಾವಿ ಮತ್ತು ಕಾಲುಚೀಲ, (6) ಒಂದು ಪ್ಲಾಸ್ಟಿಕ್ ಬ್ಯಾಗು "ಮಡಿಲು ಕಿಟ್"ನಲ್ಲಿ ಒಳಗೊಂಡಿದೆ.

ಎಲ್ಲಾ ವರ್ಗದ ಗರ್ಭಿಣಿ ಮಹಿಳೆಯರು ಶೇ. 100ರಷ್ಟು ಹೆರಿಗೆಗಳನ್ನು ಆಸ್ಪತ್ರೆಗಳಲ್ಲಿ ಮಾಡಿಸಿಕೊಳ್ಳುವಂತೆ ಪ್ರೋತ್ಸಾಹಿಸಲು ಕರ್ನಾಟಕ ಸರಕಾರವು (1) "ಆರೋಗ್ಯ ಕವಚ–108", (2) "ಜನನಿ ಸುರಕ್ಷಾ ವಾಹಿನಿ" ಎಂಬ ಎರಡು ಉಚಿತ ಸಾಗಾಣಿಕೆ ವ್ಯವಸ್ಥೆ ಮಾಡಿದೆ. ಆರೋಗ್ಯ ಕವಚ–108 ಸೇವೆಯು ಗರ್ಭಿಣಿ ಮಹಿಳೆಯರನ್ನು ಹೆರಿಗೆಗಾಗಿ ಅವರ ಮನೆಗಳಿಗೆ ಆಸ್ಪತ್ರೆಗಳಿಗೆ ಉಚಿತವಾಗಿ ಸಾಗಿಸುತ್ತದೆ. "ಜನನಿ ಸುರಕ್ಷಾ ವಾಹಿನಿ" ಅಂಬ್ಯುಲೆನ್ಸ್ ವಾಹನ ಸೇವೆಯು ಹೆರಿಗೆಗಾಗಿ ಆಸ್ಪತ್ರೆಗಳಿಂದ ಬಂದ ಮಹಿಳೆಯರನ್ನು ಮೇಲ್ದರ್ಜೆ ಆಸ್ಪತ್ರೆಗಳಿಗೆ ಮತ್ತು ಹೆರಿಗೆ ನಂತರ ಆಸ್ಪತ್ರೆಯಿಂದ ಬಿಡುಗಡೆಯಾದ ತಾಯಂದಿರನ್ನು ಅವರ ಮನೆಗಳಿಗೆ ಉಚಿತವಾಗಿ ಸಾಗಿಸುತ್ತದೆ. ಗ್ರಾಮೀಣ ಪ್ರದೇಶದ ಸಾರ್ವಜನಿಕರ ಆರೋಗ್ಯವನ್ನು ಕಾಪಾಡಲು ಪ್ರತಿ ಕಂದಾಯ ಗ್ರಾಮಗಳಲ್ಲಿ ಚುನಾಯಿತ ಗ್ರಾಮ ಪಂಚಾಯತ್ ಸದಸ್ಯರ ನೇತೃತ್ವದಲ್ಲಿ "ಗ್ರಾಮ ಆರೋಗ್ಯ ಮತ್ತು ನೈರ್ಮಲ್ಯ ಸಮಿತಿ" ರಚಿಸಲಾಗಿದ್ದು, ಈ ಸಮಿತಿಗೆ ಗ್ರಾಮದ ನೈರ್ಮಲ್ಯ ಕಾಪಾಡಲು ಪ್ರತಿ ವರ್ಷ 10,000/– ರೂ. ಮುಕ್ತ ನಿಧಿಯಾಗಿ ನೀಡಲಾಗುತ್ತಿದೆ. ಇದೇ ರೀತಿಯಲ್ಲಿ ಪ್ರತಿ ಉಪಕೇಂದ್ರಗಳ ಸಮಿತಿಗೆ 10,000/– ರೂ.ಗಳು, ಪ್ರತಿ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಸಮಿತಿಗೆ 25,000/– ರೂ.ಗಳು, ಪ್ರತಿ ಸಮುದಾಯ ಆರೋಗ್ಯ ಕೇಂದ್ರಗಳ ಸಮಿತಿಗೆ ಮತ್ತು ತಾಲ್ಲೂಕು ಮಟ್ಟದ ಆಸ್ಪತ್ರೆಗಳ ಸಮಿತಿಗಳಿಗೆ 5.00 ಲಕ್ಷ ರೂ.ಗಳು ಮುಕ್ತನಿಧಿ ರೂಪದಲ್ಲಿ ಹಣ ಒದಗಿಸಲಾಗುತ್ತಿದೆ. ವಾರ್ಷಿಕ ನಿರ್ವಹಣಾ ವೆಚ್ಚಕ್ಕಾಗಿ ಪ್ರತಿ ಉಪಕೇಂದ್ರಕ್ಕೆ 10,000/– ರೂ, ಪ್ರತಿ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಸಮಿತಿಗೆ 50,000/– ರೂ. ಸಮುದಾಯ ಆರೋಗ್ಯ ಕೇಂದ್ರಗಳಿಗೆ 1.00 ಲಕ್ಷ ರೂ.ಗಳು, ನಗರ ಪ್ರಾಥಮಿಕ ಆರೋಗ್ಯ ಕೇಂದ್ರದ ಸಮಿತಿಗೆ 50,000/– ರೂ.ಗಳನ್ನು ನೀಡಲಾಗುತ್ತಿದೆ. ಪ್ರತಿ ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಸಮುದಾಯ ಆರೋಗ್ಯ ಕೇಂದ್ರಗಳು, ತಾಲ್ಲೂಕು ಮಟ್ಟದ ಆಸ್ಪತ್ರೆಗಳ ಆರೋಗ್ಯ ರಕ್ಷಾ ಸಮಿತಿಗಳಿಗೆ ವಾರ್ಷಿಕ 1 ಲಕ್ಷ ರೂ. ಹಣ ನೀಡಲಾಗುತ್ತಿದೆ. ಈ ಎಲ್ಲಾ ಯೋಜನೆಗಳು ಪರಿಣಾಮಕಾರಿಯಾಗಿ ಜಾರಿಯಾಗುತ್ತಿರು ವುದರಿಂದ ನಿರೀಕ್ಷಿಸಿದ ಫಲಿತಾಂಶ ಹೊರಹೊಮ್ಮುವುದರಲ್ಲಿ ಯಾವುದೇ ಸಂದೇಹ ಬೇಡ. ಗ್ರಾಮೀಣ ಮತ್ತು ಬಡವರ ಆರೋಗ್ಯದ ಮಟ್ಟದಲ್ಲಿ ಉತ್ತಮ ಪ್ರಗತಿ ಕಾಣುತ್ತಿದೆ.

❑

# ಒಂದು ಕನಸು

ಡಾ. ಎಸ್.ಬಿ. ರವಿಕುಮಾರ್*
ಮೊಬೈಲ್ : 9449581627

ಈ ಬಾರಿ ಕೈಗೊಂಡಿರುವ ಎಲ್ಲ ಕಾಮಗಾರಿಗಳ ಗುಣಮಟ್ಟ ಉತ್ತಮವಾಗಿರುವ ಬಗ್ಗೆ ಹರ್ಷ ವ್ಯಕ್ತಪಡಿಸಿದರು. 'ಇಂಜಿನಿಯರು ಆಗಾಗ್ಗೆ ಭೇಟಿ ನೀಡಿ ಗುಣಮಟ್ಟದ ಬಗ್ಗೆ ಗಮನ ಹರಿಸುತ್ತಿದ್ದಾರೆ ಕಾಮಗಾರಿಗಳು ಚನ್ನಾಗಿ ಬರುತ್ತಿವೆ'.

ಒಂದು ದಿನ ಹಾಗೇ ಹೋಗುತ್ತಿದ್ದೆ. ಒಂದು ಸುಂದರವಾದ ಗ್ರಾಮ. ಊರ ಹೊರಗಿನ ರಸ್ತೆಯ ಪಕ್ಕದ ಕೆರೆಯಲ್ಲಿ ಯಾರೂ ಇಳಿಯದಂತೆ ಸುತ್ತಲೂ ತಂತಿ ಬೇಲಿ ಹಾಕಿದ್ದಾರೆ. ಹೊಲಕ್ಕೆ ಹೊರಟಿರುವ ರೈತರು. ಹತ್ತಿರ ಹೋಗುತ್ತಿದ್ದಂತೆ ಗ್ರಾಮದ ಹೊರವಲಯದಲ್ಲಿ ಇಟ್ಟಿಗೆಗಳನ್ನು ದುಂಡಾಗಿ ಹೊಂದಿಸಿಟ್ಟಿರುವುದು ರಸ್ತೆಗೇ ಕಾಣುತ್ತಿತ್ತು. ಹತ್ತಿರ ಹೋದೆ. ಅದೊಂದು ತಿಪ್ಪೆಗುಂಡಿ! ಪುಟ್ಟ ಬಾವಿಯಂಥದ್ದು. ಮಲೆನಾಡಿನಲ್ಲಿ ಇರುತ್ತವಲ್ಲ ಪುಟ್ಟ ನೆಲಮಟ್ಟದ ಬಾವಿ ಅಂಥದ್ದು. 3–4 ಅಡಿಗಳ ಕೆಳಗೆ ಸಗಣಿ, ಹುಲ್ಲು ಮೇಲೆ ತೆಳ್ಳಗೆ ಮಣ್ಣು ಹಾಕಿದ್ದಾರೆ. ಸುತ್ತಲೂ ಇಟ್ಟಿಗೆ ಇಟ್ಟಿರುವುದರಿಂದ ಒಂದು ಚೂರೂ ಗೊಬ್ಬರ ಹೊರಗೆ ಚೆಲ್ಲಿಲ್ಲ.. ಹತ್ತಿರದಿಂದ ಇಣುಕಿ ನೋಡಿದರಷ್ಟೆ ತಿಪ್ಪೆಗುಂಡಿ ಎಂದು ಗೊತ್ತಾಗುತ್ತದೆ. ಇಲ್ಲದಿದ್ದರೆ ಇನ್ನೂ ಬೆಳೆಯದಿರುವ ಗಿಡದ ಸುತ್ತಲೂ ಇಟ್ಟಿರುವ ಇಟ್ಟಿಗೆಗಳಂತೆ ಕಾಣುತ್ತಿದೆ. ಸಾಮಾನ್ಯವಾಗಿ ಊರ ಹೊರಗೆ ಬಯಲು ಪ್ರದೇಶಗಳಲ್ಲಿ ಎಲ್ಲೆಂದರಲ್ಲಿ ಪ್ಲಾಸ್ಟಿಕ್ ಚೀಲಗಳು ರಾರಾಜಿಸುತ್ತಿರುತ್ತವೆ. ಆದರೆ ಇಲ್ಲಿ ಒಂದೂ ಪ್ಲಾಸ್ಟಿಕ್ ಚೀಲ ಕಾಣುತ್ತಿಲ್ಲ. ಇಲ್ಲಿ ಪ್ಲಾಸ್ಟಿಕ್ ಉಪಯೋಗಿಸುತ್ತಾರೋ ಇಲ್ಲವೋ ಯಾರಿಗೆ ಗೊತ್ತು ? ಆದರೆ ಗಿಡಗಳು ಮಾತ್ರ ಎಲ್ಲ ಕಡೆಯೂ ಕಾಣುತ್ತಿವೆ. ಇತ್ತೀಚೆಗೆ ನೆಟ್ಟಂತೆ ಕಾಣುತ್ತಿವೆ. ಇವೆಲ್ಲ ಬೆಳೆದು ಮರಗಳಾದಲ್ಲಿ ಪರಿಸರ ಅದ್ಭುತವಾಗುವುದರಲ್ಲಿ ಸಂಶಯವಿಲ್ಲ.

ಹಾಗೇ ಹಳ್ಳಿಯ ಕಡೆ ಮುಂದಕ್ಕೆ ಹೋದೆ. ರಸ್ತೆಗಳು ಸ್ವಚ್ಛವಾಗಿವೆ. ರಸ್ತೆ ಬದಿಯ ಗಟಾರಗಳಲ್ಲಿ ನೀರು ಸರಾಗವಾಗಿ ಹರಿಯುತ್ತಿದೆ. ಗಟಾರಗಳಲ್ಲಿ ಒಂದು ಚೂರೂ ಕಸ ಕಾಣುತ್ತಿಲ್ಲ. ಮನೆಗಳ ಹತ್ತಿರ ಹೋಗುತ್ತಿದ್ದಂತೆ ಅದೋ ಅಲ್ಲಿ ಮೂಲೆಯಲ್ಲಿ ಒಂದು ಕಸದ ತೊಟ್ಟಿ. ಅದರ ಮೇಲೆ ನನ್ನನ್ನು ಉಪಯೋಗಿಸಿ ಎಂದು ಬರೆದಿದೆ. ತೊಟ್ಟಿಯ ಸುತ್ತಲೂ ಕಸವಿಲ್ಲ. ಕಸ ಹಾಕುವವರು ಹೊರಗೆ ಚೆಲ್ಲದಂತೆ ಹಾಕಿದ್ದಾರೆ ಎನಿಸುತ್ತದೆ. ಮನೆಗಳ ಹತ್ತಿರ ಬಂದಾಗ ಗಟಾರಗಳು ಇದೇ ತಾನೆ ತೊಳೆದಂತೆ ಸ್ವಚ್ಛವಾಗಿವೆ. ಎದುರು ಮನೆಯ ಹೆಂಗಸೊಬ್ಬಳು ಒಂದು ಬಕೀಟು ನೀರನ್ನು ಹಾಕಿ ಚರಂಡಿಯನ್ನು ಕಡ್ಡಿಬರಲಿನಿಂದ ಗುಡಿಸುತ್ತಿದ್ದಾಳೆ. ಪ್ರತಿ ಮನೆಗಳ ಮುಂದೂ ಗುಡಿಸಿ, ಸಗಣಿನೀರು ಹಾಕಿ ಸುಂದರವಾದ ರಂಗವಲ್ಲಿ ಹಾಕಿರುವುದು ಆಕರ್ಷಕವಾಗಿದೆ.

ಅಲ್ಲೊಂದು ಸಾರ್ವಜನಿಕ ನಲ್ಲಿ. ಒಬ್ಬ ಹುಡುಗಿ ನೀರು ಹಿಡಿದುಕೊಂಡು ನಲ್ಲಿ ನಿಲ್ಲಿಸಿ ಹೊರಟಾಗ ನೀರು ಪೂರ್ತಿ ನಿಲ್ಲಲಿಲ್ಲ. ನೀರು ಸಣ್ಣದಾಗಿ ಬೀಳುತ್ತಲೇ ಇತ್ತು. ಆದರೆ ಆ ಹುಡುಗಿ ಅದನ್ನು ಗಮನಿಸಲಿಲ್ಲ. ಎದುರಿನ ಮನೆಯ ಜಗಲಿಯಲ್ಲಿ ಕುಳಿತಿದ್ದ ಒಬ್ಬ ಯಜಮಾನ ತನ್ನೆದುರು ಕುಳಿತ್ತಿದ್ದ ಯುವಕನ ಕಡೆ ನೋಡಿದ. ಯುವಕ ಯಜಮಾನನ ಇಚ್ಛೆ ಅರಿತವನಂತೆ ತಕ್ಷಣ ಎದ್ದು ಬಂದು ನಲ್ಲಿಯನ್ನು ಸರಿಯಾಗಿ ನಿಲ್ಲಿಸಿದ. ನೀರು ಸುರಿಯತ್ತಿಲ್ಲ ಎಂಬುದನ್ನು ಒಂದು ಕ್ಷಣ ನಿಂತು ಖಾತ್ರಿ ಪಡಿಸಿಕೊಂಡ ನಂತರ ಆ ಹುಡುಗಿಯನ್ನು ಉದ್ದೇಶಿಸಿ 'ಯಾವ ಊರು ನಿಂದು ? ನೀರು ಸರಿಯಾಗಿ ನಿಲ್ಲಿಸಬೇಕೆಂದು ನಿನಗೆ ಗೊತ್ತಿಲ್ಲವೇ ? ಇಲ್ಲಿ ಯಾರ ಮನೆಗೆ ಬಂದಿದ್ದೀಯಾ ?' ಎಂದು ಕೂಗಿ ಆಕ್ಷೇಪಿಸಿದ. ಆ ಹುಡುಗಿ ಏನೂ ತೋಚದೆ ಗಾಬರಿಯಿಂದ ಸರಸರನೆ ನಡೆಯ ಲಾರಂಭಿಸಿದಳು.

ಅನತಿ ದೂರದಲ್ಲೇ ಒಂದು ಕುಡಿಯುವ ನೀರಿನ ಸ್ಥಾವರ. ಸುತ್ತಲೂ ಸಿಮೆಂಟಿನ ಕಟ್ಟೆಯಿದೆ. ತೊಟ್ಟಿಯ ಮೇಲೆ ನೀರು ಬಿಡುವ ಸಮಯ ಬರೆದಿದೆ. ಒಂದಿಬ್ಬರು ನೀರು ಹಿಡಿದುಕೊಳ್ಳುತ್ತಿದ್ದಾರೆ. ನೀರು ತುಂಬಿ ಹರಿಯದಂತೆ ಎಚ್ಚರಿಕೆ ವಹಿಸುತ್ತಿರುವುದರಿಂದ ಸುತ್ತಲೂ ಎಲ್ಲಿಯೂ ನೀರು ನಿಂತಿರದೆ. ಶುಭ್ರವಾಗಿದೆ.

* ಸಹಾಯಕ ಯೋಜನಾಧಿಕಾರಿ, ಜಿಲ್ಲಾ ಪಂಚಾಯತ್, ಶಿವಮೊಗ್ಗ.

ಹಾಗೇ ಮುಂದೆ ಹೋಗುತ್ತಿರುವಾಗ ಪುಸ್ತಕಗಳನ್ನು ಹಿಡಿದುಕೊಂಡು ಹೋಗುತ್ತಿರುವ ಒಬ್ಬ ವಿದ್ಯಾರ್ಥಿ ಕಂಡ. ಆ ಹುಡುಗನನ್ನು 'ಇಲ್ಲಿ ಗ್ರಾಮ ಪಂಚಾಯಿತಿ ಎಲ್ಲಿದೆ?' ಎಂದು ಕೇಳಿದೆ. 'ಓ ನಮ್ಮ ಪಂಚಾಯಿತೀನಾ ಸಾರ್ ? ಬನ್ನಿ ತೋರಿಸುತ್ತೇನೆ' ಎಂದು ನನ್ನ ಒಪ್ಪಿಗೆಗೂ ಕಾಯದೇ ಮುಂದೆ ಹೊರಟೇಬಿಟ್ಟ. ಪಕ್ಕದ ಬೀದಿಗೆ ತಿರುಗುವಾಗ ನೋಡಿದೆ. ಎಲ್ಲ ರಸ್ತೆಗಳ ಪಕ್ಕದಲ್ಲೂ ಗಟಾರಗಳು. ಮಧ್ಯೆ ಮಧ್ಯೆ ಪುಟ್ಟ ಸೇತುವೆಗಳು. ಸೇತುವೆಗಳ ಹೆಡ್‌ವಾಲ್‌ಗಳ ಮೇಲೆ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ 09–10 ಅಂದಾಜು ವೆಚ್ಚ ಮುಂತಾದ ಏನೋ ವಿವರಗಳನ್ನು ಬರೆದಿದ್ದಾರೆ. ಓಹೋ ಇವರು ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಲ್ಲಿ ಈ ಕಲ್‌ವರ್ಟ್‌ಗಳನ್ನು ಮಾಡಿಕೊಂಡಿದ್ದಾರೆ ಎನಿಸಿತು.

ಬೀದಿಯಲ್ಲಿ ವಿರಳವಾಗಿ ಅಲ್ಲೊಬ್ಬರು, ಇಲ್ಲೊಬ್ಬರು ಯುವಕರು. ಹೆಚ್ಚಿನವರು ವಯಸ್ಸಾದವರೇ ಕಾಣುತ್ತಿದ್ದಾರೆ. 'ಯುವಕರು ಹೆಚ್ಚು ಕಾಣುತ್ತಿಲ್ಲ ಏಕೆ ?' ಎಂದೆ ಹುಡುಗ 'ಎಲ್ಲ ಉದ್ಯೋಗಕ್ಕೆ ಹೋಗಿದ್ದಾರೆ. ಕೆಲವರು ಖಾತ್ರಿ ಕೆಲಸಕ್ಕೆ ಕೆಲವರು ಖಾಸಗಿ ಕೆಲಸಕ್ಕೆ' ಎಂದ.

ಅಲ್ಲೊಂದು ಸುಂದರವಾದ ಕೆಂಪು ಹೆಂಚಿನ ಕಟ್ಟಡ. ಸುತ್ತಲಿನ ಬಯಲಲ್ಲಿ ಗಿಡಮರಗಳು ಹೇರಳವಾಗಿವೆ, ಒಂದೆರಡು ಮಳೆಯಾಗಿರುವುದರಿಂದ ಸುತ್ತಲೂ ಹಸಿರು ಚಿಗುರಿ ಪರಿಸರ ಆಕರ್ಷಣೀಯವಾಗಿದೆ. ಅಲ್ಲೊಂದು ಕಸದ ತೊಟ್ಟಿ. ಎಡಬದಿಯ ಗೋಡೆಯ ಮೇಲೆ ಉದ್ಯೋಗ ಖಾತ್ರಿ ಯೋಜನೆ ಬಗ್ಗೆ ಏನೇನೋ ವಿವರಗಳನ್ನು ಬರೆದಿದ್ದಾರೆ. ಕಟ್ಟಡದ ಗೋಡೆಯ ಮೇಲೆ ಸ್ವಚ್ಛತಾ ಆಂದೋಲನದ ಬಗ್ಗೆ ಮಾಹಿತಿ ಬರೆದಿದ್ದಾರೆ. ಬಲಗಡೆ ಇನ್ನೂ ಅನೇಕ ಯೋಜನೆಗಳ ವಿವರಗಳಿವೆ. 'ಸಾರ್ ಇದೇ ನಮ್ಮ ಪಂಚಾಯತಿ.' ಕಟ್ಟಡವನ್ನೇ ಗಮನಿಸುತ್ತಿದ್ದವನು ಹುಡುಗನ ಮಾತಿನಿಂದ ಎಚ್ಚರಗೊಂಡೆ. 'ನಾನು ಹೋಗಲಾ ಸರ್, ಶಾಲೆಗೆ ವೇಳೆಯಾಗುತ್ತೆ' ಎಂದ. 'ಥ್ಯಾಂಕ್ಸ್ ಕಣೋ ಪುಟ್ಟ' ಎಂದು ಅವನನ್ನು ಕಳಿಸಿದೆ.

ಪಂಚಾಯಿತಿಯ ಹೊರಗೆ ರಾಶಿ ಚಪ್ಪಲಿಗಳು. ಬಹುಶಃ ಸಭೆ ನಡೆದಿರಬೇಕು. ಆದರೆ ಹೊರಗೆ ಸದ್ದೇ ಇಲ್ಲ. ಒಳಗೆ ಹೋದೆ. ನನ್ನನ್ನು ಯಾರೂ ಗಮನಿಸಲೇ ಇಲ್ಲ. ಹಾಗೇ ಒಂದು ಮೂಲೆಯಲ್ಲಿ ನಿಂತೆ. ಸಭೆಯ ಅಧ್ಯಕ್ಷತೆ ವಹಿಸಿದ್ದವರು, ಬಹುಶಃ ಗ್ರಾಮ ಪಂಚಾಯಿತಿಯ ಅಧ್ಯಕ್ಷರೇ ಇರಬೇಕು 'ಮುಂದಿನ ವಿಷಯ?' ಎಂದರು. ಅವರ ಪಕ್ಕದಲ್ಲಿದ್ದ ವ್ಯಕ್ತಿ –ಕಾರ್ಯದರ್ಶಿಯಿರಬೇಕು– 'ಅಧ್ಯಕ್ಷರೆ 12 ನೇ ಹಣಕಾಸು ಯೋಜನೆಯಲ್ಲಿ ತೆಗೆದುಕೊಳ್ಳಬೇಕಾದ ಕಾಮಗಾರಿಗಳ ಪಟ್ಟಿ ಮಾಡಿ ಕ್ರಿಯಾ ಯೋಜನೆ ಇಓ ಕಛೇರಿಗೆ ಕಳಿಸಿ ಅನುಮೋದನೆ ಪಡೆದುಕೊಳ್ಳಬೇಕು' ವಿವರಿಸಿದರು. ಅಧ್ಯಕ್ಷರು ಎದುರಿಗೆ ಕುಳಿತಿದ್ದ ಸದಸ್ಯರ ಕಡೆ ನೋಡುತ್ತ 'ಮಾನ್ಯ ಸದಸ್ಯರೇ ಈ ಯೋಜನೆಯಲ್ಲಿ 6.00 ಲಕ್ಷ ಹಣವಿದೆ. ಇದರಲ್ಲಿ ಯಾವ ಯಾವ ಕಾಮಗಾರಿ ತೆಗೆದುಕೊಳ್ಳಬಹುದು ಕಾರ್ಯದರ್ಶಿಗಳೇ ಹೇಳಿ ಎಲ್ಲ ನಮ್ಮ ಸದಸ್ಯರಿಗೆ' ಎಂದಾಗ ಕಾರ್ಯದರ್ಶಿ ಯೋಜನೆಯ ಮಾರ್ಗದರ್ಶಿ ಸೂತ್ರಗಳಂತೆ ಯಾವ ಯಾವ ಕಾಮಗಾರಿಗಳನ್ನು ತೆಗೆದುಕೊಳ್ಳಬಹುದು ಎಂದು ವಿವರಿಸಿದರು. ಎಲ್ಲ ಸದಸ್ಯರೂ ತಮ್ಮ ತಮ್ಮ ವಾರ್ಡಿನಲ್ಲಿ ಯಾವ ಕಾಮಗಾರಿ ತೆಗೆದುಕೊಳ್ಳಬಹುದು ಎಂದು ಯೋಚಿಸುತ್ತಿರುವಾಗ ಒಬ್ಬ ಸದಸ್ಯರು 'ಪಕ್ಕದ ಗ್ರಾಮದ ಅಂಗನವಾಡಿ ಕಟ್ಟಡ ದುಸ್ಥಿತಿಯಲ್ಲಿದೆ. ಅಲ್ಲಿ ಮಕ್ಕಳಿಗೆ ತೊಂದರೆಯಾಗುತ್ತಿದೆ. ಹೊಸ ಅಂಗನವಾಡಿ ಕಟ್ಟಡ ಕಟ್ಟಿಸಿದರೆ ಹೇಗೆ?' ಎಂದರು. ಆಗ ಆ ಭಾಗದ ಸದಸ್ಯರು ಮಾತನಾಡಿ 'ಹೌದು. ನಮ್ಮ ಗ್ರಾಮಕ್ಕೆ ಅಂಗನವಾಡಿ ತೀರ ಅವಶ್ಯಕವಿದೆ ಆದರೆ ಒಮ್ಮೆಲೆ ಮುಗಿಸಲು ಸಾಧ್ಯವಾಗದಿದ್ದರೆ ಈ ಬಾರಿ ಪ್ರಾರಂಭಿಸಿ ಮುಂದಿನ ವರ್ಷ ಮುಗಿಸಬಹುದು' ಎಂದು ಸೂಚಿಸಿದರು. ಇತರೆ ಸದಸ್ಯರು ಪರಸ್ಪರ ಚರ್ಚಿಸಿ ಅಧ್ಯಕ್ಷರಿಗೆ 'ಬೇಡ ಅರ್ಧಂಬರ್ಧ ಕೆಲಸವೇ ಬೇಡ. ಈ ಬಾರಿಯೇ ಮುಗಿಸಿಬಿಡೋಣ. ಬೇಕಾಗುವಷ್ಟು ಹಣವನ್ನು ಒದಗಿಸಿಕೊಳ್ಳೋಣ' ಎನ್ನಲು ಅಧ್ಯಕ್ಷರು ಇಂಜಿನಿಯರ್ ಕಡೆ ನೋಡಿದರು. ಇಂಜಿನಿಯರು 'ಅಂಗನವಾಡಿ ಕಟ್ಟಡದ ಯೂನಿಟ್ ಕಾಸ್ಟ್ 3.50 ಲಕ್ಷವಿದೆ. ಅಷ್ಟನ್ನು ಇಟ್ಟುಕೊಳ್ಳಬಹುದು' ಎಂದರು. ಎಲ್ಲರೂ ಒಪ್ಪಿದಾಗ ಅಧ್ಯಕ್ಷರು ಅಂಗನವಾಡಿ ಕಟ್ಟಡಕ್ಕೆ 3.5 ಲಕ್ಷ ತೆಗೆದಿರಿಸಲು ಕಾರ್ಯದರ್ಶಿಗೆ ಸೂಚಿಸಿ 'ಉಳಿದ 2.5 ಲಕ್ಷದಲ್ಲಿ ಈ ಗ್ರಾಮದ ಹರಿಜನ ಕೇರಿಯಲ್ಲಿ ಕುಡಿಯುವ ನೀರಿನ ಸಮಸ್ಯೆಯಿದೆ. ಅಲ್ಲಿಗೆ ಹಾಕಿದರೆ ಹೇಗೆ?' ಎಂದು ಅಧ್ಯಕ್ಷರೇ ಚರ್ಚೆಗೆ ಚಾಲನೆ ಕೊಟ್ಟರು. ಇಂಜಿನಿಯರು 'ಹೌದು ಅಲ್ಲಿ ಮನೆಗಳ ಸಂಖ್ಯೆ ಹೆಚ್ಚಾಗಿರುವುದರಿಂದ ಎಲ್ಲರಿಗೂ ನೀರು ಸಾಕಾಗುತ್ತಿಲ್ಲ. ಮತ್ತೊಂದು ಕಿರು ನೀರು ಸರಬರಾಜು ಯೋಜನೆ ಮಾಡಿ ಒಂದು ಸಿಸ್ಟರ್ನ್ ಕೂಡಿಸಬೇಕು ನೀರು ಮೂಲದಲ್ಲಿ ಸಾಕಷ್ಟಿರುವುದರಿಂದ ಸಿಸ್ಟರ್ನ್ ಮಾಡಿದರೆ ಸಾಕು ಅಲ್ಲಿನ ಎಲ್ಲ ಮನೆಗಳಿಗೂ ನೀರು ಕೊಡಬಹುದು ಎಂದರು. ಆಗ ಇನ್ನೊಬ್ಬ ಸದಸ್ಯರು 'ಅಧ್ಯಕ್ಷರೇ ನಮ್ಮಲ್ಲಿ ಸ್ವಲ್ಪ ರಸ್ತೆ ದುರಸ್ತಿ ಕೆಲಸ ಆಗಬೇಕಿತ್ತು ದೇವಸ್ಥಾನದ ಬಳಿ......' ಅಧ್ಯಕ್ಷರು ತಕ್ಷಣ ಅವರ ಮಾತನ್ನು ತುಂಡರಿಸಿ 'ಅದೇ ವೀರಭದ್ರಸ್ವಾಮಿ ದೇವಸ್ಥಾನದ ಬಳಿ ಅಲ್ಲವಾ? ನೀವು ಹೇಳುವುದು ಸರಿ. ಆದರೆ ಅದಕ್ಕಿಂತ ಇವೆರಡೂ ಮುಖ್ಯ. ಈ ಯೋಜನೆಯಲ್ಲಿ ಇವೆರಡನ್ನೂ ಮಾಡೋಣ. ನಿಮ್ಮ ಕೆಲಸವನ್ನು ಈ ವರ್ಷವೇ ಉದ್ಯೋಗ ಖಾತ್ರಿ ಯೋಜನೆಯಲ್ಲಿ ಮಾಡಿಸೋಣ. ಕಾರ್ಯದರ್ಶಿಗಳೇ ಖಾತ್ರಿ ಕ್ರಿಯಾ ಯೋಜನೆ ಮಾಡುವಾಗ ನನ್ನ ಗಮನಕ್ಕೆ ಇದನ್ನು ತನ್ನಿ' ಎಂದಾಗ ಪ್ರಸ್ತಾಪ ಮಾಡಿದ ಸದಸ್ಯರ ಜೊತೆಗೆ ಇತರೆ ಎಲ್ಲ ಸದಸ್ಯರೂ 'ಸರಿ ಹಾಗಾದರೆ' ಎಂದು ಒಪ್ಪಿದರು.

'ಮುಂದಿನ ವಿಷಯ ಅಜೆಂಡಾ ಪ್ರಕಾರ ಇಂದಿರಾ ಆವಾಸ್ ಯೋಜನೆಯ ಫಲಾನುಭವಿಗಳ ಆಯ್ಕೆ; ಕಾರ್ಯದರ್ಶಿಗಳೇ ವಿವರ ಹೇಳಿ' ಅಧ್ಯಕ್ಷರ ಅಣತಿ. ಕಾರ್ಯದರ್ಶಿ ಫಲಾನುಭವಿಗಳನ್ನು ಯಾವ ಯಾವ ಕೆಟಗರಿಯಲ್ಲಿ ಎಷ್ಟೆಷ್ಟು ಆಯ್ಕೆ ಮಾಡಬೇಕು ಎಂಬ ಬಗ್ಗೆ ಸರ್ಕಾರದಿಂದ ಬಂದಿರುವ ಸುತ್ತೋಲೆಯನ್ನು ಹಿಡಿದು ವಿವರಿಸಿದರು. ಅಧ್ಯಕ್ಷರು 'ಗ್ರಾಮಸಭೆಯಲ್ಲಿಯೇ ಪಟ್ಟಿ ಮಾಡಿದ್ದೇವಲ್ಲ, ಕಳೆದ ಬಾರಿ ಸರ್ವಕುಟುಂಬ ಸಮೀಕ್ಷೆ ಪ್ರಕಾರ 21 ಅಂಕದವರಿಗೆ ಮನೆ ಕೊಟ್ಟಿದ್ದೆವು. ಈ ಬಾರಿ 22 ಅಂಕದವರು ಗ್ರಾಮಸಭೆಯ ಪಟ್ಟಿಯಲ್ಲಿ ಎಷ್ಟು ಜನರಿದ್ದಾರೆಯೋ ಮೊದಲು ನೋಡಿ' ಎಂದರು. ಕಾರ್ಯದರ್ಶಿ ಪರಿಶೀಲಿಸಿ '22 ಅಂಕದವರು ಒಟ್ಟು 16 ಜನರಿದ್ದಾರೆ. ನಮಗೆ 29 ಜನ ಫಲಾನುಭವಿಗಳು ಬೇಕಾಗಿರುವುದರಿಂದ, 23 ಅಂಕದ 13 ಜನರನ್ನೂ ತೆಗೆದುಕೊಳ್ಳಬಹುದು' ಎಂದಾಗ ಎರಡೂ ಪಟ್ಟಿಗಳನ್ನು ಪರಿಶೀಲಿಸಲಾಯಿತು. ಗ್ರಾಮಸಭೆಯಲ್ಲಿ ಬಂದಿರುವ ಹೆಸರುಗಳು ಅರ್ಹವಾದರೂ ಆ ಕುಟುಂಬಕ್ಕೆ ಈಗಾಗಲೇ ಬೇರೆ ಸದಸ್ಯರ ಹೆಸರಿಗೆ ಮನೆ ನೀಡಿದ್ದಲ್ಲಿ ಅಂತಹ ಹೆಸರನ್ನು ಕೈಬಿಟ್ಟು ಇದುವರೆಗೂ ಒಮ್ಮೆಯೂ ವಸತಿ ಯೋಜನೆಯಲ್ಲಿ ಮನೆ ಕೊಟ್ಟಿಲ್ಲದಿರುವವರನ್ನು ಆಯ್ಕೆ ಮಾಡಲಾಯಿತು. ಸದಸ್ಯರೊಬ್ಬರು 'ನಮ್ಮ ವಾರ್ಡಿನ ರತ್ನವ್ವಗೆ ಮನೆ ಬೇಕಿತ್ತು.' ರಾಗ ಎಳೆದರು. ಅಧ್ಯಕ್ಷರು 'ಅದೇ ಬಸವರಾಜನ ಹೆಂಡತಿಗೆ ತಾನೆ ಆದರೆ ನಿಮ್ಮದೇ ವಾರ್ಡಿನ ಶರಣವ್ವ ನೋಡಿ ಪಾಪ ತೀರಾ ದುಸ್ಥಿತಿಯಲ್ಲಿದ್ದಾಳೆ. ಗಂಡ ಬೇರೆ ಇಲ್ಲ. ಈ ಬಾರಿ ಶರಣವ್ವಗೆ ಕೊಟ್ಟು, ರತ್ನವ್ವಳಿಗೆ ಮುಂದಿನ ಬಾರಿ ಕೊಡೋಣ' ಎಂದಾಗ ಸದಸ್ಯರು ಆಯಿತು ಎನ್ನದೇ ವಿಧಿಯಿರಲಿಲ್ಲ.

ಅಧ್ಯಕ್ಷರು ಮುಂದುವರೆದು ಈ ಬಾರಿ ಕೈಗೊಂಡಿರುವ ಎಲ್ಲ ಕಾಮಗಾರಿಗಳ ಗುಣಮಟ್ಟ ಉತ್ತಮವಾಗಿರುವ ಬಗ್ಗೆ ಹರ್ಷ ವ್ಯಕ್ತಪಡಿಸಿದರು. 'ಇಂಜಿನಿಯರು ಆಗಾಗ್ಗೆ ಭೇಟಿ ನೀಡಿ ಗುಣಮಟ್ಟದ ಬಗ್ಗೆ ಗಮನ ಹರಿಸುತ್ತಿದ್ದಾರೆ ಕಾಮಗಾರಿಗಳು ಚನ್ನಾಗಿ ಬರುತ್ತಿವೆ' ಎಂದು ಇಂಜಿನಿಯರನ್ನು ಪ್ರಶಂಸಿದರೆ ಅವರೋ ಸಂಕೋಚದಿಂದ 'ನಾನು ನೋಡೋದೇನು ಸಾರ್ ನಮ್ಮ ಕಂಟ್ರಾಕ್ಟರ್ ತಮ್ಮ ಸ್ವಂತ ಮನೆಯೇನೋ ಎನ್ನುವಂತೆ ಕಟ್ಟಿಸುತ್ತಿದ್ದಾರೆ, ಎದುರು ನಿಂತೇ ಕ್ಯೂರಿಂಗ್ ಮಾಡಿಸುತ್ತಿದ್ದಾರೆ ಜವಾಬ್ದಾರಿಯಿಂದ' ಎಂದು ಪ್ರಶಂಸೆಯನ್ನು ಗುತ್ತಿಗೆದಾರರಿಗೆ ದಾಟಿಸಿಬಿಟ್ಟರು. 'ಆಮೇಲೆ ಕಾರ್ಯದರ್ಶಿಗಳೇ ಮತ್ತೇನಾದರೂ ವಿಚಾರಗಳಿವೆಯಾ ? ಹಾಗೆ ಈ ವಾರ ಖಾತ್ರಿ ಯೋಜನೆಯಲ್ಲಿ ಕೆಲಸ ಮಾಡಿರುವವರಿಗೆಲ್ಲಾ ಹಣ ಜಮಾ ಆಗಿದೆಯಾ ?' ಕಾರ್ಯದರ್ಶಿ 'ಅಧ್ಯಕ್ಷರೇ ಆಗಲೇ ಚೆಕ್ ಬರೆದಿದ್ದೇನೆ. ನೀವು ಸಹಿ ಮಾಡಿದ ತಕ್ಷಣ ಬ್ಯಾಂಕಿಗೆ ಕಳಿಸುವುದೊಂದೇ ಬಾಕಿ ನೀವೆಲ್ಲಾ – ಅಧ್ಯಕ್ಷರಾದಿಯಾಗಿ ಎಲ್ಲ ಗ್ರಾಮ ಪಂಚಾಯಿತಿ ಸದಸ್ಯರೂ– ನಿಮಗೆ ಕೂಲಿ ಅವಶ್ಯಕತೆಯಿಲ್ಲದಿದ್ದರೂ ನಮ್ಮ ಗ್ರಾಮದ ಕೆಲಸ ಎಂದು ಖಾತ್ರಿ ಯೋಜನೆಯಲ್ಲಿ ಕೆಲಸ ಮಾಡಿದ್ದೀರಿ. ನಾನು ಪಾವತಿ ಬಗ್ಗೆ ನಿರ್ಲಕ್ಷಿಸಲು ಸಾಧ್ಯವೇ? ಹಿಂದಿನ ವಾರದವರೆಗೆ ಎಲ್ಲ ಹಣ ನಿಮ್ಮ ನಿಮ್ಮ ಖಾತೆಗೆ ಜಮಾ ಆಗಿದೆ' ಎಂದಾಗ ಅಧ್ಯಕ್ಷರು 'ಸರಿ ಬಿಡಿ ನಾವು ನೋಡಿಕೊಂಡಿಲ್ಲ ಮತ್ತೆ ನಮ್ಮ ವಿದ್ಯುತ್ ವೆಚ್ಚ ಕಡಿಮೆಯಾಗಿದೆಯೋ ಹೇಗೆ' ಕಾರ್ಯದರ್ಶಿಯನ್ನು ಕೇಳಿದರು. 'ಅಧ್ಯಕ್ಷರೆ ನಾವು ಎಲ್ಲ ಜನರಿಗೆ ನೀರಿನ, ವಿದ್ಯುತ್ತಿನ ಮಿತವ್ಯಯದ ಬಗ್ಗೆ ತಿಳಿಸಿ ಹೇಳಿದ್ದು ಫಲಪ್ರದವಾಗಿದೆ. ಈ ತಿಂಗಳು ವಿದ್ಯುತ್ ಶುಲ್ಕ ಸುಮಾರು 2500 ರೂಪಾಯಿ ಕಡಿಮೆ ಬಂದಿದೆ. ಹೀಗೇ ನಾವು ಉಳಿಸಿದರೆ ವರ್ಷಕ್ಕೆ 30 ಸಾವಿರ ಉಳಿತಾಯ ವಾಗಲಿದೆ' ಎಂದು ಹರ್ಷವ್ಯಕ್ತಪಡಿ ಸಿದರು. 'ಅಂತೂ ನಮ್ಮ ಪ್ರಯತ್ನ ಫಲ ಕೊಟ್ಟಿದೆ ಹಾಗಾದರೆ ಎಂದು ಸಮಾಧಾನ ವ್ಯಕ್ತಪಡಿಸಿ, ಮುಖ್ಯವಾದ ಕಾಗದ ಪತ್ರಗಳೇನಾದರೂ ಇದ್ದಲ್ಲಿ ಓದಿಬಿಡಿ' ಎನ್ನಲು ಮುಖ್ಯವಾದ ಪತ್ರಗಳನ್ನು ಓದಿದಾಗ ಅನೇಕ ಸದಸ್ಯರು ತಮ್ಮ ಅನುಮಾನಗಳನ್ನು ಕಾರ್ಯದರ್ಶಿ ಹಾಗೂ ಅಧ್ಯಕ್ಷರೊಂದಿಗೆ ಚರ್ಚಿಸಿ ಬಗೆಹರಿಸಿಕೊಂಡರು.

ಅಧ್ಯಕ್ಷರು 'ಕಾರ್ಯದರ್ಶಿಗಳೇ ಕ್ರಿಯಾ ಯೋಜನೆ ಪ್ರತಿ ಮಾಡಿಸಿ ಇಒ ಕಛೇರಿಗೆ ಕಳಿಸಿ ಒಂದೆರಡು ದಿನ ರಜೆ ಹೋಗಬೇಕು ಮನೆ ಕೆಲಸಕ್ಕೆ ಅಂತಿದ್ದಿರಿ ಹೋಗಿಬಂದು ಬಿಡಿಯಪ್ಪ. ನಮ್ಮ ಪಂಚಾಯಿತಿ ಸಮಸ್ಯೆಗಳು ಇದ್ದದ್ದೇ' ಎನ್ನಲು 'ಹೌದು ಅಧ್ಯಕ್ಷರೇ ಕಳೆದ ವಾರವೇ ಹೋಗ ಬೇಕಿತ್ತು. ಆದರೆ ಸ್ವಲ್ಪ ನೀರಿನ ಸಮಸ್ಯೆ ಬಂತಲ್ಲ ಹಾಗಾಗಿ ಹೋಗಲಾಗಲಿಲ್ಲ. ಈ ವಾರ ಒಂದೆರಡು ದಿನ ಹೋಗಿಬರುತ್ತೇನೆ' ಎಂದರು ಅಧ್ಯಕ್ಷರನ್ನು ಮತ್ತೆ ಕೇಳುವ ತೊಂದರೆ ತಪ್ಪಿದ್ದಕ್ಕಾಗಿ ಹರ್ಷದಿಂದ. ನಂತರ ಚರ್ಚಿಸಲು ಏನು ಇಲ್ಲವೆಂದು ಖಾತ್ರಿಪಡಿಸಿಕೊಂಡ ನಂತರ ಸಭೆ ಮುಕ್ತಾಯವಾಯಿತು. ವಂದನಾರ್ಪಣೆ ನಂತರ ಸಭೆಯ ಗಾಂಭೀರ್ಯದ ಭಾರ ಇಳಿದವರಂತೆ ಎಲ್ಲರೂ ಮೈ ಸಡಿಲ ಬಿಟ್ಟು ಪರಸ್ಪರ ಕಷ್ಟ ಸುಖ ಮಾತನಾಡುತ್ತಾ ಕುಳಿತರು.

ಹೊರಗೆ ಬಂದೆ. ಪಕ್ಕದ ಗೋಡೆಯ ಬಳಿ ಜನ ಸರತಿ ಸಾಲಿನಲ್ಲಿ ನಿಂತುಕೊಂಡಿದ್ದಾರೆ. ಹತ್ತಿರ ಹೋದೆ. ಕಿಟಕಿ ಒಳಗೆ ಕುಳಿತು ಕೊಂಡವನೊಬ್ಬ ದುಡ್ಡು ಪಡೆದುಕೊಂಡು ರಸೀದಿ ಕೊಡುತ್ತಿದ್ದ. ಕಿಟಕಿ ಮೇಲೆ ಕಂದಾಯ ಸ್ವೀಕರಿಸುವ ಸಮಯ ಪ್ರತಿ ಶನಿವಾರ ಬೆಳಿಗ್ಗೆ 10.00 ರಿಂದ ಮದ್ಯಾಹ್ನ 1.00 ಗಂಟೆಯವರೆಗೆ ಮಾತ್ರ ಎಂದು ಬರೆಯಲಾಗಿತ್ತು. ಓಹೋ ಇಂದು ಶನಿವಾರ ಎನ್ನುವುದು ಜ್ಞಾಪಕಕ್ಕೆ ಬಂತು.

ಗ್ರಾಮ ಪಂಚಾಯಿತಿ ಕ್ರಿಯಾಶೀಲವಾಗಿದೆ. ಜನರಲ್ಲಿ ಗ್ರಾಮಪಂಚಾಯಿತಿ ನಮ್ಮದು ಎನ್ನುವ ಭಾವನೆ ಇದೆ. ಸದಸ್ಯರು ಸಭೆಯಲ್ಲಿ ಹೊಂದಾಣಿಕೆಯಿಂದ ಒಂದು ಕುಟುಂಬದವರೇನೋ ಎನ್ನುವಂತೆ ಚರ್ಚಿಸಿ ತೀರ್ಮಾನ ತೆಗೆದುಕೊಳ್ಳುತ್ತಾರೆ. ಆದ್ದರಿಂದ ಯಾವ ಅಧಿಕಾರಿಯೂ ಅವ್ಯವಹಾರಗಳನ್ನು ಮಾಡಲು ಸಾಧ್ಯವಿಲ್ಲ ಅನ್ನಿಸಿತು. ಅಲ್ಲದೆ ಅಧಿಕಾರಿ ಹಾಗೂ ಜನಪ್ರತಿನಿಧಿಗಳ ಮಧ್ಯೆ ಪರಸ್ಪರ ಗೌರವ ಭಾವನೆಯಿದೆ. ಜನ ತೃಪ್ತಿಯಿಂದ ಇದ್ದಾರೆ ಎಂದುಕೊಳ್ಳುತ್ತಾ ಬರುವಾಗ ಎದುರಿಗಿನ ಶಾಲೆಯ ಸುಂದರವಾದ ಕೈತೋಟ ಕೈ ಬೀಸಿ ಕರೆಯುತ್ತಿತ್ತು. ಹತ್ತಿರ ಹೋದರೆ ನುಗ್ಗೆ ಮರ, ಕರಿಬೇವು, ಪಪ್ಪಾಯ ಮುಂತಾದ ಗಿಡಗಳು. ಜೊತೆಗೆ ಸೊಪ್ಪು ತರಕಾರಿಯನ್ನೂ ಬೆಳೆದಿದ್ದಾರೆ. ಬಹುಷಃ ಅಕ್ಷರ ದಾಸೋಹಕ್ಕೆ ಉಪಯೋಗಿಸುತ್ತಿದ್ದಾರೆ ಎನ್ನಿಸಿತು. ಒಳಗೆ ಹೋಗಿ ನೋಡೋಣ ಎಂದುಕೊಳ್ಳುವಷ್ಟರಲ್ಲಿ ದಢಾರನೆ ಶಬ್ದವಾಯಿತು. ಗಡಬಡಿಸಿ ಎದ್ದೆ. ಆಷಾಡದ ಗಾಳಿಗೆ ಮಲಗುವ ಕೋಣೆಯ ಕಿಟಕಿ ಬಾಗಿಲು ಹೊಡೆದುಕೊಂಡಿತ್ತು. ನಾನು ಇದುವರೆಗೂ ಕಂಡದ್ದು ಕನಸು ಎಂದು ಅರಿವಾಗಲು ಸ್ವಲ್ಪ ಸಮಯವೇ ಹಿಡಿಯಿತು !

ನಿನ್ನೆ ಒಂದು ಗ್ರಾಮಪಂಚಾಯಿತಿಗೆ ಹೋಗಿದ್ದೆ. ಪ್ರಗತಿಯಲ್ಲಿ ಅತ್ಯಂತ ಹಿಂದುಳಿದ ಪಂಚಾಯಿತಿ. ಆದ್ದರಿಂದಲೇ ಸಂಪೂರ್ಣ ಸ್ವಚ್ಛತಾ ಆಂದೋಳನದ ಬಗ್ಗೆ ಸದಸ್ಯರಿಗೆ ಮೊದಲು ವಿವರಿಸಿ, ಅವರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವುದು ನನ್ನ ಉದ್ದೇಶವಾಗಿತ್ತು. ನಾನು ಸದಸ್ಯರಿಗೆ ಬರಲು ಹೇಳಿಕಳಿಸುವ ಅವಶ್ಯಕತೆಯೇ ಉಂಟಾಗಲಿಲ್ಲ. ಗ್ರಾಮಪಂಚಾಯಿತಿ ಯಲ್ಲಿಯೇ ಅನೇಕ ಸದಸ್ಯರು ಹಾಜರಿದ್ದರು. ಯಾವುದಾದರೂ ಸಭೆ ಇತ್ತೇ ಎಂದು ಪ್ರಶ್ನಿಸಿದೆ. ಇಲ್ಲವೆಂದು ಕಾರ್ಯದರ್ಶಿ ತಿಳಿಸಿದರು. ಸರಿ ಒಳ್ಳೆಯದಾಯಿತು ಎಂದು ನಾನು ಸ್ವಚ್ಛತಾ ಆಂದೋಳನದ ಬಗ್ಗೆ ಹೇಳುವುದಕ್ಕೆ ಪ್ರಾರಂಭಿಸಿದೆ. ನಾಲ್ಕಾರು ನಿಮಿಷ ವಿವರಿಸಿದ್ದೆನಷ್ಟೆ. ಎದುರಿಗಿರುವವರಿಗೆ ನನ್ನ ಮಾತಿನಲ್ಲಿ ಆಸಕ್ತಿಯಿಲ್ಲ ಎಂದು ನನಗೆ ಅರಿವಾಗುವಷ್ಟರಲ್ಲೇ, ಸ್ವಾಮಿ ಅದನ್ನು ಆಮೇಲೆ ನೋಡೋಣ, ಮೊದಲು ನಮ್ಮ ಸಮಸ್ಯೆ ಕೇಳಿ ಎಂದು ಸ್ವಚ್ಛತಾ ಆಂದೋಳನದ ಬಗ್ಗೆ ಹೇಳಲು ಅವಕಾಶವನ್ನೇ ಕೊಡದೆ ಅಧ್ಯಕ್ಷರು ಕಾರ್ಯದರ್ಶಿ ಮೇಲೆ ದೂರು ಹೇಳಲು ಪ್ರಾರಂಭಿಸಿದರು. ಅವರಿನ್ನೂ ಮುಗಿಸಿರಲಿಲ್ಲ ಕೆಲವು ಸದಸ್ಯರು ಅಧ್ಯಕ್ಷರ ಮೇಲೆ, ಕೆಲವರು ಇಂಜಿನಿಯರ್ ಮೇಲೆ, ಮಾತ್ರವಲ್ಲ ಕರವಸೂಲಿಗಾರ, ನೀರಗಂಟಿಗಳ ಮೇಲೆ ಅಸಂಖ್ಯಾತ ದೂರುಗಳ ಜಡಿಮಳೆಯನ್ನೇ ಸುರಿಸಲು ಪ್ರಾರಂಭಿಸಿಬಿಟ್ಟರು. ನಾನು ಪಂಚಾಯತ್‌ರಾಜ್ ಅಧಿನಿಯಮ 113 ಪ್ರಕಾರ ಎಲ್ಲ ಸಿಬ್ಬಂದಿ ನಿಯಂತ್ರಿಸುವ ಸಂಪೂರ್ಣ ಅಧಿಕಾರ ನಿಮಗೇ ಇದೆ. ಅದನ್ನು ಮಾಡುವುದನ್ನು ಬಿಟ್ಟು ಪರಸ್ಪರ ದೂರು ಹೇಳುತ್ತಾ ಇದ್ದರೆ ಪ್ರಗತಿ ಸಾಧಿಸುವುದು ಹೇಗೆ ಎಂದು ಹೇಳಲು ಹೊರಟರೆ ಊಹೂ, ಯಾರೂ ನನ್ನ ಮಾತನ್ನು ಕೇಳಿಸಿಕೊಳ್ಳಲೇ ತಯಾರಿರಲಿಲ್ಲ. ಯಾಕೋ ಈ ಪಂಚಾಯಿತಿಯಲ್ಲಿ ಇವರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವುದು ಸಾಧ್ಯವಿಲ್ಲವೇನೋ ಎಂಬ ಚಿಂತೆ ಮೂಡುವಷ್ಟರಲ್ಲೇ, ಒಬ್ಬ ಮುದುಕಿ 'ಸ್ವಾಮಿ ನಾನು 6 ವರ್ಷದಿಂದ ಪ್ರತಿ ಗ್ರಾಮಸಭೆಯಲ್ಲೂ ಅರ್ಜಿ ಕೊಡುತ್ತಿದ್ದೇನೆ. ನನಗೆ ಮನೆ ಹಾಕಿ ಕೊಟ್ಟಿಲ್ಲ. ನನ್ನ ಮನೆ ಬೀಳುವ ಹಾಗಿದೆ' ಎಂದು ಗೋಳು ತೋಡಿಕೊಂಡಳು. ನಾನು ಅಧ್ಯಕ್ಷರ ಕಡೆ ನೋಡಲು ಅಧ್ಯಕ್ಷರು 'ಹೌದು ಇವಳಿಗೆ ಮನೆ ಬೇಕು ಆದರೆ ನೀವು ಕೇವಲ ಅಷ್ಟೇ ಮನೆ ಕೊಟ್ಟರೆ ಹೇಗೆ ಎಲ್ಲರಿಗೂ ಕೊಡುವುದು?' ಎಂದು ನನ್ನನ್ನೇ ನಿಷ್ಟುರ ಮಾಡಿಬಿಟ್ಟರು. ಒಬ್ಬ ಸದಸ್ಯ 'ನಿಮ್ಮ ಅಣ್ಣನ ಹೆಂಡತಿಗೆ ಕೊಟ್ಟಿದ್ದೀರಲ್ಲ ಅವರ ಬದಲು ಈ ಮುದುಕಿಗೇ ಕೊಡಬಹುದಿತ್ತಲ್ಲ?' ಎನ್ನುತ್ತಿದ್ದಂತೆಯೆ ಅಧ್ಯಕ್ಷರ ಪಿತ್ತ ನೆತ್ತಿಗೇರಿಬಿಟ್ಟಿತು. 'ಯಾಕೆ ನಮ್ಮ ಅತ್ತಿಗೆ ಅರ್ಹಳಲ್ಲವೇನಪ್ಪ ? ನೀವೆಲ್ಲ ಬೇಕು ಬೇಕಾದವರಿಗೆ ಮನೆ ಕೊಟ್ಟಿದ್ದೀರಿ ನನಗೆ ಹೇಳುತ್ತೀರಲ್ಲ? ನಮ್ಮ ಅಣ್ಣ ಅತ್ತಿಗೆ ನನ್ನ ಮನೆಯಲ್ಲಿಯೇ ಇದ್ದಾರೆ ಅವರಿಗೆ ಮನೆ ಎಲ್ಲಿದೆ ? ನಾನು ಅಧ್ಯಕ್ಷನಾಗಿ ನನ್ನ ಅತ್ತಿಗೆಗೂ ಮನೆ ಕೊಡದಿದ್ದರೆ ನಾನ್ಯಾಕೆ ಅಧ್ಯಕ್ಷನಾಗಿರಬೇಕು ?' ಎಂದು ದಬಾಯಿಸಿಬಿಟ್ಟರು. ಆಕ್ಷೇಪಿಸಿದ ಸದಸ್ಯರು ಇನ್ನೂ ಮಾತನಾಡಿದರೆ ತಾವೆಲ್ಲ ಅಧ್ಯಕ್ಷರು ಹೇಳಿದಂತೆ ತಮಗೆ ಬೇಕಾದವರಿಗೇ ಮನೆ ಕೊಟ್ಟಿರುವುದು ಸತ್ಯವಾಗಿರುವ ಅರಿವು ಮೂಡಿದವರಂತೆ ಸುಮ್ಮನಾಗಿಬಿಟ್ಟರು. ಮರುಕ್ಷಣವೇ ಅಧ್ಯಕ್ಷರು 'ಹೋಗಮ್ಮ ಮುಂದಿನ ವರ್ಷ ನೋಡೋಣ. ಸಾಹೇಬರು ಬಂದಾಗಲೇ ಏನಿದು ನಿನ್ನ ಗೋಳು' ಎಂದು ಮುದುಕಿಯನ್ನು ಅಕ್ಷರಷಃ ಓಡಿಸಿ ಹೆಗಲ ಮೇಲಿದ್ದ ಶಲ್ಯ ಕೊಡವುತ್ತ ಹೊರಟೇಬಿಟ್ಟರು.

ಹೊರಗೆ ಬಂದಾಗ ಕಾರ್ಯದರ್ಶಿಯನ್ನು ವಿಚಾರಿಸಿದೆ. ಎಲ್ಲ ಅನುದಾನವನ್ನೂ ಸದಸ್ಯರು ಹಂಚಿಕೊಂಡು ಬಿಡುತ್ತಾರೆ ಸರ್, ಅನುದಾನ ಹಂಚಿಹೋಗುವುದರಿಂದ ಸ್ವಲ್ಪವೇ ಹಣ ದೊರಕಿ ಎಲ್ಲ ಕಾಮಗಾರಿಗಳೂ 3–4 ವರ್ಷದಿಂದ ಕುಂಟುತ್ತ ಅಂದಾಜು ವೆಚ್ಚ ಮೀರಿ ಮುಗಿಯದ ಕಥೆಯಾಗಿವೆ. ಮನೆಗಳನ್ನೂ ಸಹ ಅಷ್ಟೆ. ಹಂಚಿಕೊಂಡು ತಮಗೆ ಬೇಕಾದವರಿಗೇ ಕಮಿಟ್‌ಮೆಂಟ್ ಮಾಡಿಕೊಂಡು ಕೊಟ್ಟುಬಿಡುತ್ತಾರೆ. ಕಾನೂನು ಹೇಳಿದರೆ "ನಾವು ಹೇಳಿದ್ದೇ ಕಾನೂನು ಇದುವರೆಗೂ ಬೇರೆ ಸದಸ್ಯರು ಮಾಡಿಲ್ಲದ್ದು ನಾವೇನು ಮಾಡಿಲ್ಲವಲ್ಲ, ಹಿಂದಿನ ಕಾರ್ಯದರ್ಶಿ ಚನ್ನಾಗಿದ್ದರು, ನೀವು ಬರೀ ಕಾನೂನು ಹೇಳುತ್ತೀರಲ್ಲ" ಎನ್ನುತ್ತಾರೆ. ಹಾಗಾಗಿ ಹೆಚ್ಚು ಕಡಿಮೆ ಎಲ್ಲಾ ಮನೆಗಳು ಅವರವರ ಸಂಬಂಧಿಗಳಿಗೆ ಅಥವಾ ಅವರಿಗೆ ಬೇಕಾದವರಿಗೆ ಹೋಗಿ, ಮನೆಯಿಲ್ಲದವರು ಅನೇಕ ವರ್ಷಗಳಿಂದ ಪಂಚಾಯತಿಗೆ ಎಡತಾಕುತ್ತಲೇ ಇದ್ದಾರೆ. ಅವರನ್ನು ನೋಡಿದರೆ ಪಾಪ ಅನ್ನಿಸುತ್ತದೆ.

ಜನರೂ ಹಾಗೇ ಇದ್ದಾರೆ. ಇತ್ತ ಗಮನಿಸುವುದೇ ಇಲ್ಲ. ಗ್ರಾಮಪಂಚಾಯಿತಿಯ ವ್ಯವಹಾರಕ್ಕೂ ತಮಗೂ ಸಂಬಂಧವೇ ಇಲ್ಲದವರಂತಿದ್ದಾರೆ. ಲಕ್ಷಾಂತರ ಖರ್ಚು ಮಾಡಿ ಪಂಚಾಯಿತಿ ಕಟ್ಟಿಸಿರುವ ತಮ್ಮ ಮನೆ ಮುಂದಿನ ಗಟಾರವನ್ನು ಕೂಡ ಸ್ವಚ್ಛವಾಗಿಟ್ಟುಕೊಳ್ಳಲ್ಲ. ಎಲ್ಲ ಕಸ ತಂದು ಗಟಾರದಲ್ಲೇ ಸುರಿತಾರೆ. ವಾರಕ್ಕೊಮ್ಮೆ ಗಟಾರ ಬಳಿಸೋದೇ ದೊಡ್ಡ ಕೆಲಸವಾಗಿದೆ. ಒಬ್ರೂ ಕಂದಾಯ ಕಟ್ಟಲ್ಲ. ಕಂದಾಯ ಕಟ್ಟಿ ಎಂದು ಬಿಗಿ ಮಾಡಿದರೆ ಸದಸ್ಯರೇ ಅಡ್ಡ ಬರ್ತಾರೆ. ನೀರಿನ ಮೋಟಾರುಗಳನ್ನು ಅಂತು ಬಂದು ಮಾಡುವಂತೆಯೇ ಇಲ್ಲ. ಸಿಸ್ಟರ್ನ್ ತುಂಬಿ ಹರಿಯುತ್ತಿದೆ ಅಂತ ಸ್ವಿಚ್ ಆಫ್ ಮಾಡಿದ ಕ್ಷಣವೇ ಸದಸ್ಯರೇ ಸಾರ್ವಜನಿಕರ ಎದುರೇ ಬಾಯಿಗೆ ಬಂದಂತೆ ಬೈಯುತ್ತಾರೆ. "ನಿನ್ನಪ್ಪನದೇನು ಹೋಗುತ್ತದೆ ಯಾಕೆ ನಿಲ್ಲಿಸುತ್ತಿ ಹರಿಯಲಿ ಬಿಡು ಕೆರೆ ತುಂಬುತ್ತದೆ" ಅಂತಾರೆ.

ರಸ್ತೆಗೆ ಮಣ್ಣು ಹಾಕಿಸಿದ್ದೀನಿ ಅಂತ ಬಿಲ್ಲು ತಂದು ಹಣ ಕೊಡು ಅಂತಾರೆ. ನೋಡಿದರೆ 10–12 ಟ್ರಿಪ್ ಟ್ರಾಕ್ಟರ್ ಬಾಡಿಗೆ ಬಾಬ್ತು! ಈ ಕಾಮಗಾರಿ ಬಗ್ಗೆ ಯಾವ ಸಭೆಯಲ್ಲಿ ಚರ್ಚೆಯಾಗಿದೆ? ಯಾರು ನಿಮಗೆ ಕೆಲಸ ಮಾಡಿಸಲು ಹೇಳಿದ್ದರು ? ಸಭೆಯಲ್ಲಿ ಚರ್ಚೆಯಾಗಲಿ ನಂತರ ಹಣ ಕೊಡುತ್ತೇನೆ ಅಂತ ಹೇಳಿದರೆ ಮುಗಿಯಿತು. ಭೂಮಿ ಆಕಾಶ ಒಂದು ಮಾಡಿಬಿಡುತ್ತಾರೆ, ನೀನು ಅಧ್ಯಕ್ಷರು ಸೇರಿ ದುಡ್ಡು ಹೊಡೆಯುತ್ತೀರಿ ಅಂತ . ಕ್ರಿಯಾ ಯೋಜನೆ ಇಲ್ಲದೆ ನಾನಾದರೂ ಹೇಗೆ ಖರ್ಚು ಹಾಕಲಿ ಸರ್?

ಮೊನ್ನೆ ಒಬ್ಬ ಸದಸ್ಯರ ಪೈಕಿಯವನು ನಮ್ಮ ಕುಡಿಯುವ ನೀರಿನ ಹೊಸ ಮೋಟಾರು ಎತ್ತಿಸಿಕೊಂಡು ಹೋಗಿ ತಮ್ಮ ಹೊಲದ ಬೋರಿಗೆ ಇಳಿಸಿ, ಕೆಟ್ಟಿರುವ ಮೋಟಾರನ್ನು ಕುಡಿಯುವ ನೀರಿನ ಬೋರಿಗೆ ಇಳಿಸಿಹೋಗಿದ್ದಾರಂತೆ. ನೀರಿನ ಸಮಸ್ಯೆಯಾಗಿ ಸ್ಥಳಕ್ಕೆ ಹೋಗಿ ನೋಡಿದಾಗ ವಿಷಯ ಗೊತ್ತಾಯಿತು. ಆ ಸದಸ್ಯರನ್ನು ಕೇಳಿದರೆ ನನಗೇನು ಗೊತ್ತು. ಮೋಟಾರು ಕೆಟ್ಟರೆ ದುರಸ್ತಿ ಮಾಡಿಸು ಅಂತಾರೆ. ಮೋಟಾರನ್ನು ಎತ್ತಿಕೊಂಡು ಹೋಗಿರುವ ವಿಷಯ ತಿಳಿಸಿ ವಿಚಾರಿಸಲು ತೊಡಗಿದರೆ ರಾತ್ರೋರಾತ್ರಿ ಯಾವೊಂದು ವಿಷಯವೂ ಗೊತ್ತಿಲ್ಲದ ಜನರನ್ನು ಪ್ರಚೋದಿಸಿ ಮನೆ ಹತ್ತಿರ ಕಳಿಸುತ್ತಾರೆ. ಆ ಜನರೋ ನೀರಿನ ಸಮಸ್ಯೆ ಬಗೆಹರಿಸು ಎಂದು ಮನೆಯ ಬಳಿ ಕೂಗಾಡುತ್ತಾರೆ. ಮಾರನೆಯ ದಿವಸವೇ ನಾನು ಹೊಸ ಮೋಟಾರಿನ ಜಾಗದಲ್ಲಿ ಕುಳಿತಿರುವ ಕೆಟ್ಟ ಮೋಟಾರನ್ನು ಮತ್ತೆ ದುರಸ್ತಿ ಮಾಡಿಸಲೇಬೇಕು !

ಎಲ್ಲ ಕಾಮಗಾರಿಗಳನ್ನೂ ಸದಸ್ಯರೇ ಮಾಡಿಸುತ್ತಾರೆ, ಬೇರೆಯವರ ಹೆಸರಿನಲ್ಲಿ. ಅಲ್ಲಿ ನಾನು ಹೋಗುವಂತೆಯೇ ಇಲ್ಲ. ಇಂಜಿನಿಯರ್ ಕೂಡ ಗುಣಮಟ್ಟದ ಬಗ್ಗೆ ಮಾತನಾಡುವಂತಿಲ್ಲ. ಜನ ಕೆಲಸ ಕೇಳಿ ಅರ್ಜಿ ಕೊಡದಿದ್ದರೂ ಫಾರಂ ನಂ. ಆರರಲ್ಲಿ ಹೆಸರು ಬರೆದುಕೊಟ್ಟು ಉದ್ಯೋಗ ಖಾತ್ರಿ ಕಾಮಗಾರಿ ಆದೇಶ ಕೊಡು ಎನ್ನುತ್ತಾರೆ. ಹೆಚ್ಚಿನ ಜನರು ಖಾತ್ರಿ ಕೆಲಸಕ್ಕೆ ಬರಲ್ಲ. ಹೊರಗಡೆ ಕೂಲಿಗಾರರಿಗೆ ವಿಪರೀತ ಡಿಮ್ಯಾಂಡ್ ಇದೆ. ಯಾರೂ ಈಗ ದಿನಗೂಲಿ ಮಾಡಲ್ಲ ಎಷ್ಟೇ ಸಣ್ಣ ಕೆಲಸವಾದರೂ ಗುತ್ತಿಗೆ ಹಿಡಿದುಕೊಂಡು ಒಂದು ದಿನಕ್ಕೆ 250 ರಿಂದ 300 ರವರೆಗೂ ದುಡಿಯುತ್ತಾರೆ. ಎಲ್ಲೋ ಅಪರೂಪಕ್ಕೆ ಕೆಲವರು ಕೆಲಸ ಕೇಳುತ್ತಾರೆ. ಬಂದವರಿಗೆ ಕೆಲಸ ಕೊಡೋಣ ಎಂದರೆ ಹಾಗೆ ಮಾಡುವಂತಿಲ್ಲ. ತಮಗೆ ಬೇಕಾದವನಿಗೆ ಗುತ್ತಿಗೆ ಕೊಡಬೇಕು. ಬಂದ ಜನರಿಂದ ಕೆಲಸ ಮಾಡಿಸಲು ಹೋದರೆ ಅದಕ್ಕೂ ತಕರಾರು. ಯಂತ್ರೋಪಕರಣ ಉಪಯೋಗಿಸುವಂತಿಲ್ಲ ಎಂದರೆ, ಯಾರಿಗೂ ಗೊತ್ತಿಲ್ಲದೆ ಯಂತ್ರಗಳಿಂದಲೇ ರಾತ್ರೋರಾತ್ರಿ ಕೆಲಸ ಮಾಡಿಸಿ, ಎಂದೂ ಕೆಲಸವನ್ನೇ ಮಾಡಿರದ ಆದರೆ ನಂ.ಆರರಲ್ಲಿ ಹೆಸರಿರುವ ಜನರನ್ನು ತಯಾರು ಮಾಡಿ ಕಳಿಸಿ 'ಖಾತ್ರಿ ಯೋಜನೆಯಲ್ಲಿ ಕೆಲಸ ಮಾಡಿದ್ದರೂ ಕೂಲಿ ಕೊಟ್ಟಿಲ್ಲ' ಎಂದು ಪಂಚಾಯಿತಿಯ ಬಳಿ ಬೊಬ್ಬೆ ಹೊಡೆಸಿ ಗಲಾಟೆ ಮಾಡಿಸುತ್ತಾರೆ. ಅವರು ಕೆಲಸವನ್ನೇ ಮಾಡಿಲ್ಲವೆಂದು ಗೊತ್ತಿರುವುದರಿಂದ ತಿರಸ್ಕರಿಸುವುದೋ ಅಥವಾ ಎನ್.ಎಂ.ಆರ್ ನಲ್ಲಿ ಹೆಸರಿದೆ ಅಂತ ಪುರಸ್ಕರಿಸುವುದೋ ? ಕೊಟ್ಟರೂ ಕಷ್ಟ ಬಿಟ್ಟರೂ ಕಷ್ಟ. ಕೆಲವು ಹಣ ತೆಗೆದುಕೊಂಡವರೇ ನಾನು ಕೆಲಸವನ್ನೇ ಮಾಡಿಲ್ಲ, ಸಹಿ ನನ್ನದೇ ಅಲ್ಲ ಆದರೂ ಹಣ ನೀಡಿದ್ದಾರೆ ಅಂತ ಗದ್ದಲ ಎಬ್ಬಿಸುವುದಾಗಿ ಹೇಳಿ ಬ್ಲಾಕ್‌ಮೇಲ್ ಮಾಡುತ್ತಾರೆ. ಹೇಗೆ ಸಾರ್ ಇಲ್ಲಿ ಕೆಲಸ ಮಾಡುವುದು ? ಯಾವ ಕಾನೂನನ್ನೂ ಹೇಳದೆ ಇವರ ಜೊತೆಗೆ ಹೊಂದಿಕೊಂಡು ಅವರು ಹೇಳಿದಂತೆಲ್ಲಾ ಚೆಕ್ ಬರೆದರೆ ಮಾತ್ರ ನಾನು ಒಳ್ಳೆಯವನು. ಅಂತಹವರಿಗೆ ಮಾತ್ರ ಇಲ್ಲಿ ಉಳಿಗಾಲ. ಇಲ್ಲದಿದ್ದಲ್ಲಿ ಯಾವುದಾದರೂ ನೆಪ ತೆಗೆದು ಚಿತ್ರಹಿಂಸೆ ಕೊಡುತ್ತಾರೆ ಮೊದಲೆಲ್ಲ ತೀರ ಈ ಮಟ್ಟಕ್ಕಿರಲಿಲ್ಲ ಸರ್" ಎಂದು ನಾನು ಬಗೆಹರಿಸಲಾಗದ ಸಮಸ್ಯೆಗಳನ್ನು ಹೇಳಿ, ಉತ್ತರಿಸಲಾಗದ ಪ್ರಶ್ನೆಗಳನ್ನು ಕೇಳಿ, 'ದಯವಿಟ್ಟು ನಾನು ಸ್ವಯಂ ನಿವೃತ್ತಿಗೆ ಬರೆದುಕೊಟ್ಟಿರುವದನ್ನು ಅಂಗೀಕರಿಸಿ ನನ್ನನ್ನು ರಿಲೀವ್ ಮಾಡಲು ಕ್ರಮ ಕೈಗೊಳ್ಳಿ ಸರ್ ಪ್ಲೀಸ್' ಎಂದು ಇದುವರೆಗೂ ಸುಮಾರು 20–22 ವರ್ಷ ಒಳ್ಳೆಯ ಕಾರ್ಯದರ್ಶಿ ಎಂದು ಹೆಸರು ಮಾಡಿದ್ದ ಕಾರ್ಯದರ್ಶಿಯೇ ಅಲವತ್ತುಕೊಂಡದ್ದು ಮನದ ಪರದೆಯ ಮೇಲೆ ಮೂಡಿಬಂತು. ರಾತ್ರಿ ಇದೇ ಧ್ಯಾನದಲ್ಲಿ ಮಲಗಿದ್ದೆನೇ? ಗೊತ್ತಿಲ್ಲ. ಅಧಿಕಾರ ವಿಕೇಂದ್ರೀಕರಣ ದಿಂದ ಪರಮಾಧಿಕಾರ ಲಭ್ಯವಾಗಿದ್ದೂ ಕೆಲವು ಗ್ರಾಮ ಪಂಚಾಯಿತಿಗಳಲ್ಲಿ ಅಭಿವೃದ್ಧಿ ಮರೀಚಿಕೆಯಾಗಿರುವ ವ್ಯವಸ್ಥೆಯ ಬಗ್ಗೆ ಚಿಂತಿಸುತ್ತ ನಿಟ್ಟುಸಿರಿಟ್ಟು ನಿದ್ರಿಸಲು ವ್ಯರ್ಥ ಪ್ರಯತ್ನ ಮಾಡತೊಡಗಿದೆ !

❑

## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ :** ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಅನುಷ್ಠಾನದಲ್ಲಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ (ಸಿವಿಲ್) ಮತ್ತು ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ತಾಂತ್ರಿಕ ಸಹಾಯಕರು (ಕೃಷಿ, ಅರಣ್ಯ ಮತ್ತು ತೋಟಗಾರಿಕೆ) ಇವರುಗಳನ್ನು ತೊಡಗಿಸುವ ಕುರಿತು.

**ಓದಲಾಗಿದೆ :**

1. ಸರ್ಕಾರದ ಆದೇಶ ಸಂಖ್ಯೆ : ಗ್ರಾಅಪ 104 ಉಖಾಯೋ 2007 ಬೆಂಗಳೂರು ದಿ : 06.07.2012
2. ದಿನಾಂಕ : 17.08.2012 ರಂದು ಮಾನ್ಯ ಅಪರ ಮುಖ್ಯಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಕೈಗೊಂಡಿರುವ ನಿರ್ಣಯದ ರೀತ್ಯ

* * *

### ಪ್ರಸ್ತಾವನೆ :

ಮೇಲೆ ಓದಲಾದ ಸರ್ಕಾರದ ಆದೇಶದಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಯಡಿ ಅನುಷ್ಠಾನಗೊಳಿಸಿದ ಕಾಮಗಾರಿಗಳನ್ನು ಪರಿವೀಕ್ಷಣೆ ಮಾಡಿ ಉಸ್ತುವಾರಿ ಮಾಡಲು ಪ್ರತಿ ನಾಲ್ಕು ಗ್ರಾಮ ಪಂಚಾಯಿತಿಗಳಿಗೆ ಇಬ್ಬರು ತಾಂತ್ರಿಕ ಸಹಾಯಕರುಗಳನ್ನು ಅವರವರ ವಿದ್ಯಾರ್ಹತೆಗಳಿಗೆ ಅನುಗುಣವಾಗಿ ಮಾಸಿಕ ಸಂಭಾವನೆಯನ್ನು ಸಹ ನಿಗಧಿಪಡಿಸಿ ಕೆ.ಟಿ.ಪಿ.ಪಿ ನಿಯಮಗಳನ್ವಯ ಹೊರಗುತ್ತಿಗೆಯ ಆಧಾರದ ಮೇಲೆ ಅವಶ್ಯಕತೆಗೆ ಅನುಗುಣವಾಗಿ ಪಡೆದು ನಿರ್ವಹಿಸಲು ಆದೇಶಿಸಲಾಗಿತ್ತು. ಕ್ಷೇತ್ರ ಮಟ್ಟದಲ್ಲಿ ಯೋಜನೆಯ ಅನುಷ್ಠಾನದಲ್ಲಿ ಕೆಲಸ ನಿರ್ವಹಿಸಲು ಆದೇಶ ಹೊರಡಿಸಿ ಬಹಳ ಕಾಲವಾದರೂ ಯಾರು ಮುಂದೆ ಬರದೇ ಇರುವುದರಿಂದ ಹಾಗೂ ನಿಗದಿಪಡಿಸಿದ ವಿದ್ಯಾರ್ಹತೆಗಳು ಇರುವ ಅಭ್ಯರ್ಥಿಗಳ ಕೊರತೆ ಮತ್ತು ಸದರಿ ಸಿಬ್ಬಂದಿಗಳ ಸೇವೆಯನ್ನು ಯೋಜನೆಯ ಅನುಷ್ಠಾನದಲ್ಲಿ ತೊಡಗಿಸಿಕೊಳ್ಳಲು ಸಾಧ್ಯವಾಗಿರುವುದಿಲ್ಲ. ಇದೇ ವಿಷಯವಾಗಿ ಉಲ್ಲೇಖ (2)ರಂತೆ ನಡೆದ ಸಭೆಯಲ್ಲಿ ತಾಂತ್ರಿಕ ಮತ್ತು ಇತರೆ ಸಿಬ್ಬಂದಿಗಳ ಕೊರತೆ ಇರುವುದರ ಬಗ್ಗೆ ಹಾಗೂ ಸಿಬ್ಬಂದಿಗಳಿಗೆ ನೀಡುತ್ತಿರುವ ಸಂಬಳ ಕಡಿಮೆಯಾಗಿದ್ದು, ಯಾರು ಮುಂದೆ ಬಾರದೆ ಇರುವುದರ ವಿಷಯವನ್ನು ಸಭೆಯ ಗಮನಕ್ಕೆ ತರಲಾಗಿ ಸಭೆಗೆ ಅಧ್ಯಕ್ಷತೆ ವಹಿಸಿದ ಅಧ್ಯಕ್ಷರು ವಿದ್ಯಾರ್ಥಿಗಳು ಹೊಂದಿರುವ ವಿದ್ಯಾರ್ಹತೆಗಳನ್ನು ಸಡಿಲಗೊಳಿಸಿ ಮಾಸಿಕ ಸಂಭಾವನೆಯನ್ನು ಡಿಪ್ಲೋಮಾ ಅಥವಾ ಪದವೀಧರರ ಇಂಜಿನಿಯರ್‌ಗಳು ಅಥವಾ ಕೃಷಿ ಪದವೀಧರರಿಗೆ 20,000/–ರೂಗಳಿಗೆ ನಿಗದಿಪಡಿಸಿ ಪಾವತಿಸಲು ಸಿಬ್ಬಂದಿಗಳ ಸೇವೆಯನ್ನು ಹೊರಗುತ್ತಿಗೆಯ ಆಧಾರದ ಮೇಲೆ ಕೆ.ಟಿ.ಪಿ.ಪಿ ನಿಯಮಗಳನ್ವಯ ಮಾನವ ಸಂಪನ್ಮೂಲ ಸೇವೆಯನ್ನು ಒದಗಿಸುವ ಸಂಸ್ಥೆಗಳಿಂದ ಪಡೆಯುವಂತೆ ಸೂಚಿಸಿದರು. ಒಂದು ವೇಳೆ ಸೂಚಿಸಿದ ಪದವೀಧರ ತಾಂತ್ರಿಕ ಸಿಬ್ಬಂದಿಗಳು ಲಭ್ಯವಾಗದಿದ್ದಲ್ಲಿ ಪಿಯುಸಿ ವಿದ್ಯಾರ್ಹತೆ (ವಿಜ್ಞಾನ) ಹೊಂದಿರುವ ಅಭ್ಯರ್ಥಿಗಳನ್ನು ಹೊರಗುತ್ತಿಗೆಯ ಆಧಾರದ ಮೇಲೆ ಪಡೆಯಲು ಸೂಚಿಸಿರುತ್ತಾರೆ. ಸಭೆಯಲ್ಲಿ ತೀರ್ಮಾನಿಸಿದಂತೆ ಸರ್ಕಾರವು ತಾಂತ್ರಿಕ ಸಿಬ್ಬಂದಿಗಳ ಸೇವೆಯನ್ನು ಮಾನವ ಸಂಪನ್ಮೂಲ ಸೇವೆಗಳ ಸಂಸ್ಥೆಯಿಂದ ಹೊರಗುತ್ತಿಗೆಯ ಆಧಾರದ ಮೇಲೆ ಪಡೆದು ಯೋಜನೆಯನ್ನು ನಿರ್ವಹಿಸುವಂತೆ ಆದೇಶವನ್ನು ಹೊರಡಿಸಲು ತೀರ್ಮಾನಿಸಿದೆ. ಇದಲ್ಲದೇ ಈ ಹಿಂದೆ ಹೊರಡಿಸಿದ ಆದೇಶದಲ್ಲಿ ಸೃಜಿಸಿದ ತಾಂತ್ರಿಕ ಸಹಾಯಕರ ನಾಮ ನಿರ್ದೇಶನವನ್ನು ಇನ್ನೂ ಮುಂದೆ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ತಾಂತ್ರಿಕ ಸಹಾಯಕರ ಹೆಸರಿನಲ್ಲಿ ನಾಮ ನಿರ್ದೇಶನ ಮಾಡಲು ತೀರ್ಮಾನಿಸಿದೆ. ಆದುದರಿಂದ ಈ ಕೆಳಕಂಡ ಆದೇಶ

### ಸರ್ಕಾರದ ಆದೇಶ ಸಂಖ್ಯೆ ಗ್ರಾಅಪ 178 ಉಖಾಯೋ 2011 ಬೆಂಗಳೂರು ದಿನಾಂಕ : 22.08.2012

ಪ್ರಸ್ತಾವನೆಯಲ್ಲಿ ವಿವರಿಸಿದಂತೆ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಅನುಷ್ಠಾನದಲ್ಲಿ ಪ್ರತಿ ನಾಲ್ಕು ಗ್ರಾಮ ಪಂಚಾಯಿತಿಗಳಿಗೆ ಇಬ್ಬರು ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ತಾಂತ್ರಿಕ ಸಹಾಯಕರನ್ನು ಅದರಲ್ಲಿ ಒಬ್ಬ ತಾಂತ್ರಿಕ ಸಹಾಯಕರನ್ನು ಸಿವಿಲ್ ಕಾಮಗಾರಿಗಳನ್ನು ಉಸ್ತುವಾರಿ ಮಾಡುವಲ್ಲಿ ತೊಡಗಿಸಲು ಮತ್ತು ಇನ್ನೊಬ್ಬ ತಾಂತ್ರಿಕ ಸಹಾಯಕರನ್ನು ತಾಂತ್ರಿಕ ಇಲಾಖೆಗಳ ಕಾಮಗಾರಿಗಳನ್ನು ಉಸ್ತುವಾರಿ ಮಾಡುವಲ್ಲಿ ತೊಡಗಿಸಿಕೊಳ್ಳಲು ಹೊರಗುತ್ತಿಗೆ ಆಧಾರದ ಮೇಲೆ ಈ ಹಿಂದೆ ಹೊರಡಿಸಿದ ಆದೇಶವನ್ನು ಮಾರ್ಪಡಿಸಿ ನಿಗದಿಪಡಿಸಿದ ವಿದ್ಯಾರ್ಹತೆಗೆ ಮತ್ತು ಮಾಸಿಕ ಸಂಭಾವನೆಗೆ ಈ ಕೆಳಕಂಡ ಷರತ್ತುಗಳಿಗೆ ಬದ್ಧರಾಗಲು ತಕ್ಷಣದಿಂದಲೇ ಜಾರಿಗೆ ಬರುವಂತೆ ಆದೇಶಿಸಲಾಗಿದೆ.

| ಕ್ರ.ಸಂ | ವಿದ್ಯಾರ್ಹತೆ (ಗಣಕಯಂತ್ರದ ಜ್ಞಾನ ಕಡ್ಡಾಯ) | ಒಬ್ಬರಿಗೆ ನಿಗದಿಪಡಿಸಿದ ಸಂಚಿತಮಾಸಿಕ ಸಂಭಾವನೆ (ರೂ ಗಳಲ್ಲಿ) | | | ಷರಾ |
|---|---|---|---|---|---|
| | | ಸಂಭಾವನೆ | ಪ್ರಯಾಣದ ಭತ್ಯೆ | ಒಟ್ಟು | |
| 1 | 2 | 3 | 4 | 5 | 6 |
| 1 | ಡಿಪ್ಲೋಮಾ ಅಥವಾ ಪದವೀಧರ ಇಂಜಿನಿಯರ್‌ಗಳು/ ತಾಂತ್ರಿಕ ಪದವೀಧರರು | 18,000/– | 2000/– | 20,000/– | ಡಿಪ್ಲೋಮಾ ಅಥವಾ ಪದವೀಧರ ಇಂಜಿನಿಯರ್‌ಗಳು ಸಿವಿಲ್ ಕಾಮಗಾರಿಗಳನ್ನು ಉಸ್ತುವಾರಿ ಮಾಡಲು ಮತ್ತು ತಾಂತ್ರಿಕ ಪದವೀಧರರು ತಾಂತ್ರಿಕ ಕಾಮಗಾರಿಗಳನ್ನು ಉಸ್ತುವಾರಿ ಮಾಡಲು |
| 2 | ಬಿ.ಎಸ್ಸಿ ಪಿ.ಸಿ.ಎಂ ಇರುವ ಪಠ್ಯ | 9,000/– | 2000/– | 11,000/– | ಸಿವಿಲ್ ಕಾಮಗಾರಿಗಳನ್ನು ಉಸ್ತುವಾರಿ ಮಾಡಲು |
| 3 | ಬಿ.ಎಸ್ಸಿ ಸಿ.ಬಿ.ಜಡ್ ಇರುವ ಪಠ್ಯ | 9,000/– | 2000/– | 11,000/– | ತಾಂತ್ರಿಕ ಕಾಮಗಾರಿಗಳಾದ ಅರಣ್ಯ, ತೋಟಗಾರಿಕೆ, ಕೃಷಿ ಮತ್ತು ರೇಷ್ಮೆ ಇವುಗಳನ್ನು ಉಸ್ತುವಾರಿ ಮಾಡಲು |
| 4 | ಪಿ.ಯು.ಸಿ ವಿದ್ಯಾರ್ಹತೆಯು ಈ ಕೆಳಕಂಡ ಪಠ್ಯಗಳನ್ನು ಒಳಗೊಂಡಿರಬೇಕು<br>ಅ. ಪಿ.ಸಿ.ಎಂ.ಬಿ<br>ಆ. ಪಿ.ಸಿ.ಎಂ.ಎಸ್<br>ಇ. ಪಿ.ಸಿ.ಎಂ.Computer<br>ಈ. ಪಿ.ಸಿ.ಎಂ.ಇ | 8,000/– | 2000/– | 10,000/– | ಭೌತಶಾಸ್ತ್ರ ಮತ್ತು ಗಣಿತಶಾಸ್ತ್ರ ಹೊಂದಿರುವವರು ಸಿವಿಲ್ ಕಾಮಗಾರಿಗಳನ್ನು ಉಸ್ತುವಾರಿ ಮಾಡಲು ಹಾಗೂ ಜೀವಶಾಸ್ತ್ರ ಪಠ್ಯ ಹೊಂದಿರುವವರು ತಾಂತ್ರಿಕ ಕಾಮಗಾರಿಗಳನ್ನು ಅಂದರೆ ಕೃಷಿ, ಅರಣ್ಯ, ತೋಟಗಾರಿಕೆ, ರೇಷ್ಮೆ |

### ಷರತ್ತುಗಳು

1. ಕೆ.ಟಿ.ಪಿ.ಪಿ ನಿಯಮಗಳನ್ವಯ ಸದರಿ ಸಿಬ್ಬಂದಿಗಳ ಸೇವೆಗಳನ್ನು ಹೊರಗುತ್ತಿಗೆಯ ಆಧಾರದ ಮೇಲೆ ಮಾನವ ಸಂಪನ್ಮೂಲ ಸಂಸ್ಥೆಗಳಿಂದ ಪಡೆಯುವುದು.
2. ಅಭ್ಯರ್ಥಿಗಳ ಆಯ್ಕೆ ಮತ್ತು ಇದರ ಪ್ರಕ್ರಿಯೆಗಳು ತಾಲ್ಲೂಕು ಪಂಚಾಯಿತಿಯ ಕಾರ್ಯನಿರ್ವಾಹಕ ಅಧಿಕಾರಿಗಳ ನೇತೃತ್ವದಲ್ಲಿ ನಡೆಯಬೇಕು.
3. ಪ್ರಕ್ರಿಯೆಗಳನ್ನು ನಡೆಸುವ ಮುನ್ನ ಜಿಲ್ಲಾ ಪಂಚಾಯಿತಿ ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳೊಂದಿಗೆ ಸಮಾಲೋಚಿಸಿ ಪೂರ್ವ ಅನುಮೋದನೆಯನ್ನು ಪಡೆಯತಕ್ಕದ್ದು.

4. ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ತಾಂತ್ರಿಕ ಸಹಾಯಕರು (ಸಿವಿಲ್) ಮತ್ತು ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ತಾಂತ್ರಿಕ ಸಹಾಯಕರುಗಳನ್ನು (ಕೃಷಿ, ತೋಟಗಾರಿಕೆ, ಅರಣ್ಯ ಮತ್ತು ರೇಷ್ಮೆ) ಆ ವರ್ಷದ ಕ್ರಿಯಾ ಯೋಜನೆಯಲ್ಲಿ ಅನುಮೋದನೆಯಾದ ಕಾಮಗಾರಿಗಳ ಸಂಖ್ಯೆ ಮತ್ತು ಅವುಗಳ ಸ್ವರೂಪದ ಆಧಾರದ ಮೇಲೆ ಜಿಲ್ಲಾ ಪಂಚಾಯಿತಿಯ ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳು ಸೂಕ್ತ ತೀರ್ಮಾನ ತೆಗೆದುಕೊಂಡು ಆಯ್ಕೆಗೆ ಸೂಕ್ತ ಕ್ರಮವಹಿಸುವುದು.

5. ಆಯ್ಕೆಯಾದ ಅಭ್ಯರ್ಥಿಗಳು ಒಂದು ವೇಳೆ ಅವರು ನಿರ್ವಹಿಸುವ ಕಾರ್ಯ ತೃಪ್ತಿಕಾರವಾಗಿಲ್ಲವೆಂದು ಕಂಡುಬಂದರೆ ಅಂತಹವರ ಸೇವೆಯನ್ನು ಸಂಬಂಧಿಸಿದ ಹೊರಗುತ್ತಿಗೆ ಸಂಸ್ಥೆಗೆ ಆದ್ಯಾರ್ಪಣೆ ಮಾಡಿ ಬದಲಿ ಅಭ್ಯರ್ಥಿಯನ್ನು ತೆಗೆದುಕೊಳ್ಳಲಾಗುವುದು.

